ಡಿಸೆಂಬರ್ 21, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ
ಪೊಲೀಸ್ ನ್ಯೂಸ್
2016
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಡಿನ್ನರು....

# ಡಿಕೆಶಿ ಹಾಜರು ಸಿದ್ದಣ್ಣ ಗೈರು!

ಜನವರಿಯಲ್ಲಿ ಆಗಲಿದೆ ಅಖೈರು!





## ಬುರುಡೆ ಷಡ್ಯಂತ್ರಕ್ಕೆ ಬಲಿಯಾದರ ಚುಂಚಶ್ರೀ?



## ಹೋಟೆಲ್ ಕಾರ್ಮಿಕಳ ಕಗ್ಗೊಲೆ!

## ಕಂದಮ್ಮನೊಂದಿಗೆ ಬಾವಿಗೆ ಹಾರಿದಳು!



## ಮಾಗಡಿ ಪುರಸಭೆ ಗೋಲ್‌ಮಾಲ್ ಸ್ಟೋರಿ!



## ಕೊಡಗಿನ ಕೊಲೆಗಾರನಿಗೆ ಲೈಫ್ ಸೆಂಟನ್ಸ್!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)
**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)
**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)
**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)
**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)
**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)
**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)
**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)
**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)
**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)
**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)
**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)
**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

**ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......**



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

**ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು**

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94
**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)
**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)
**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)
**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)
**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)
**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)
**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)
**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)
**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

# ಲೆಜೆಂಡರಿ ಕಾಂಗ್ರೆಸ್ಸಿಗ/ ವೀರಶೈವ ಲಿಂಗಾಯತ ದಿಗ್ಗಜ ಶ್ರೀ ಶಾಮನೂರು ಶಿವಶಂಕರಪ್ಪ ಪತ್ನಿಯ ಸಮಾಧಿ ಪಕ್ಕದಲ್ಲೇ ಶಿವೈಕ್ಯರಾದರು!

ದಾವಣಗೆರೆ ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಹಾಗೂ ಅಖಿಲ ಭಾರತ ವೀರಶೈವ ಮಹಾ ಸಭೆಯ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ವಿಧಿವಶ ರಾಗಿದ್ದು ನಿಮಗೆಲ್ಲ ಗೊತ್ತೇ ಇದೆ. ಅವರ ಅಂತಿಮ ಕಾರ್ಯವನ್ನು ದಾವಣಗೆರೆಯ ಕಲ್ಲೇಶ್ವರ ರೈಸ್ ಮಿಲ್ ಆವರಣದಲ್ಲಿ ವೀರಶೈವಲಿಂಗಾಯತ ಸಂಪ್ರದಾಯದಂತೆ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಗಿದೆ. ಪತ್ನಿ ಪಾರ್ವತಮ್ಮನವರ ಸಮಾಧಿ ಪಕ್ಕದಲ್ಲೇ ಶಿವಶಂಕರಪ್ಪನವರ ಕ್ರಿಯಾಸಮಾಧಿ ಮಾಡಲಾಯಿತು.

ಮಣ್ಣಿನ ಬದಲಿಗೆ ವಿಭೂತಿ ಗಟ್ಟಿಗಳೊಂದಿಗೆ ಪಂಚ ಪೀಠದ ಸ್ವಾಮೀಜಿಗಳು ಸಮ್ಮುಖದಲ್ಲಿ ಶಾಮನೂರು ಪುತ್ರ ಎಸ್.ಎಸ್. ಮಲ್ಲಿಕಾರ್ಜುನ ಅಂತಿಮ ಸಂಸ್ಕಾರದ ವಿಧಿವಿಧಾನ ನೆರವೇರಿಸಿದರು. ಅಂತ್ಯಕ್ರಿಯೆಯ ವೇಳೆ ಶಾಮನೂರರ ಪಾರ್ಥಿವ ಶರೀರಕ್ಕೆ ಪೊಲೀಸರು ತ್ರಿವರ್ಣ ಧ್ವಜ ಹೊದಿಸಿ ಗೌರವ ಸೂಚಿಸಿದರು. ಇದಾದ ಮೇಲೆ ಡಿಸಿಎಂ ಡಿ.ಕೆ. ಶಿವಕುಮಾರ್ ತ್ರಿವರ್ಣ ಧ್ವಜವನ್ನು ಶಾಮನೂರು ಕುಟುಂಬಕ್ಕೆ ನೀಡಿದರು. ರಾಷ್ಟ್ರಗೀತೆ ಯೊಂದಿಗೆ ಮೂರು ಸುತ್ತು ಕುಶಾಲತೋಪು ಸಿಡಿಸುವ ಮೂಲಕ ವಿಶೇಷ ಗೌರವ ಸಲ್ಲಿಸಿದರು. ಬಳಿಕ ವಾದ್ಯ ವಂದನೆ ಅರ್ಪಿಸಿ, ಬಳಿಕ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು.

ಲೆಜೆಂಡರಿ ಕಾಂಗ್ರೆಸ್ಸಿಗ, ವೀರಶೈವ ದಿಗ್ಗಜ ಶಾಮ ನೂರು ಶಿವಶಂಕರಪ್ಪನವರ ಅಂತ್ಯಕ್ರಿಯೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಎಂ. ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಸತೀಶ್ ಜಾರಕಿಹೊಳಿ, ಈಶ್ವರ್ ಖಂಡ್ರೆ, ವಿಪಕ್ಷ ನಾಯಕ ಆರ್.ಅಶೋಕ್, ಸಿ.ಟಿ ರವಿ, ವಿವಿಧ ಮಠಾಶರು ಹಾಗೂ ಮುಲ್ಲಾಗಳು, ಪಾದ್ರಿಗಳು ಸೇರಿ



ದಂತೆ ದೇಶದ ಹಲವಾರು ಗಣ್ಯರು ಭಾಗಿಯಾಗಿದ್ದರು.

ಅಂದಹಾಗೆ, 1931ರ ಜೂನ್ 16ರಂದು ದಾವಣಗೆರೆಯಲ್ಲಿ ಜನಿಸಿದ್ದ ಶಾಮನೂರು ಶಿವಶಂಕರಪ್ಪ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ವಿಧಾನಸಭೆಯ ಸದಸ್ಯರಾಗಿದ್ದು, ಅವರು ಭಾರತದಲ್ಲಿ ರಾಜ್ಯ ವಿಧಾನ ಸಭೆಯ ಅತ್ಯಂತ ಹಿರಿಯ ಸದಸ್ಯರಾಗಿದ್ದರು. ಅವರು ವಿಧಾನಸಭೆಗೆ ಆರು ಭಾರಿ ಶಾಸಕರಾಗಿ (1994, 2004, 2008, 2013, 2018, 2023) ಒಮ್ಮೆ ಸಂಸದರಾಗಿ ಆಯ್ಕೆಯಾಗಿದ್ದರು. 1997ರಲ್ಲಿ ದಾವಣಗೆರೆ ಲೋಕಸಭೆ ಮಧ್ಯಂತರ ಚುನಾವಣೆಯಲ್ಲಿ ಸೋಲು ಕಂಡಿದ್ದರು. ಐದು ದಶಕಗಳ ರಾಜಕೀಯ ಜೀವನದಲ್ಲಿ ಒಂದೇ ಒಂದು ಬಾರಿ ಮಾತ್ರ ಸೋಲುಂಡಿದ್ದರು.

ಭಾನುವಾರ ನಿಧನರಾದ ಹಿರಿಯ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ

☞ 3

# ಪ್ರಧಾನಿ ಮೋದಿಯನ್ನು ಟೀಕಿಸಿದ ಪ್ರತಿಪಕ್ಷಗಳ ವಿರುದ್ಧ ಹೆಚ್.ಡಿ. ದೇವೇಗೌಡರ ವಾಗ್ದಾಳಿ ರಾಜ್ಯಸಭೆಯಲ್ಲಿ ವೋಟ್ ಚೋರಿ ಚರ್ಚೆ! ಕಾಂಗ್ರೆಸ್ ವಿರುದ್ಧ ಗುಡುಗಿದ ದೇವೇಗೌಡರು!!



ಸಂಪಾದಕ
**ಎಂ. ರಾಹುಲ್**

..................................

ವೋಟ್ ಚೋರಿ ಹೆಸರಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸರಕಾರ ಹಾಗೂ ಸಾಂವಿಧಾನಿಕ ಸಂಸ್ಥೆಗಳ ವಿರುದ್ಧ ಸುಳ್ಳಿನ ಸಂಕಥನ ಸೃಷ್ಟಿಸುತ್ತಿರುವ ಪ್ರತಿಪಕ್ಷಗಳು ಭವಿಷ್ಯದಲ್ಲಿ ಘೋರ ಪರಿಣಾಮ ಅನುಭವಿಸಬೇಕಾಗುತ್ತದೆ ಹುಷಾರ್... ಎಂದು ಮಾಜಿ ವಿಪಕ್ಷ ಕಾಂಗ್ರೆಸ್‌ಗೆ ಮಾಜಿ ಪ್ರಧಾನಿಗಳಾದ ಹೆಚ್.ಡಿ. ದೇವೇಗೌಡರು ಎಚ್ಚರಿಕೆ ನೀಡಿದ ಘಟನೆ ಮೊನ್ನೆ ರಾಜ್ಯಸಭೆಯಲ್ಲಿ ನಡೆಯಿತು!

ಮೊನ್ನೆ ಸೋಮವಾರ ನಡೆದ ರಾಜ್ಯಸಭಾ ಕಲಾಪದಲ್ಲಿ ಈ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಮಾಜಿ ಪ್ರಧಾನಿಗಳು, ಪ್ರತಿಪಕ್ಷಗಳು ನಿರಂತರವಾಗಿ ಸುಳ್ಳಿನ ಕಥೆಗಳನ್ನು ಪ್ರಚಾರ ಮಾಡುತ್ತಾ ಹೋದರೆ, ಮತದಾರರ ಮನಸ್ಸಿನಲ್ಲಿ ಅನುಮಾನಗಳನ್ನು ಹುಟ್ಟು ಹಾಕಿದರೆ ಅದರಿಂದ ಪ್ರತಿಪಕ್ಷಗಳಿಗೆ ಒಳ್ಳೆಯದು ಮಾಡುವುದಿಲ್ಲ ಎಂದು ಹೇಳಿದರು.

ಪ್ರತಿಪಕ್ಷಗಳು ಪ್ರಧಾನಿಯುವರ ಬಗ್ಗೆ ಹಾದಿಬೀದಿಗಳಲ್ಲಿ ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ಕಟ್ಟದ್ದಾಗಿ ಟೀಕೆ ಮಾಡುತ್ತಿರುವ ಬಗ್ಗೆ ಮಾಜಿ ಪ್ರಧಾನಿಗಳು ಹರಿಹಾಯ್ದರು. 'ನಮ್ಮದು ಬಹಳ ದೊಡ್ಡ ರಾಷ್ಟ್ರ. ಕಾಂಗ್ರೆಸ್ ಪಕ್ಷವು ಮೂರು ರಾಜ್ಯಗಳಲ್ಲಿ ಅಧಿ ಕಾರದಲ್ಲಿ ಇರಬಹುದು. ನನ್ನ ಪ್ರತಿಪಕ್ಷ ಸ್ನೇಹಿತರೇ ದಯವಿಟ್ಟು ನೆನಪಿಡಿ, 'ವೋಟ್ ಚೋರಿ' ಎಂಬ ಪದಗಳನ್ನು ಬಳಸುವುದರಿಂದ ನೀವು ಮುಂಬರುವ ದಿನಗಳಲ್ಲಿ ತೊಂದರೆ ಅನುಭವಿಸುತ್ತೀರಿ! ನೀವು ಯುದ್ಧದಲ್ಲಿ ಗೆಲ್ಲಲು ಸಾಧ್ಯವಿಲ್ಲ ಎಂದು ದೇವೇಗೌಡರು ಕಟುವಾದ ಶಬ್ದಗಳಲ್ಲಿ ಹೇಳಿದರು.

'ವೋಟ್ ಚೋರಿ' ಎಂಬ ಅಪಪ್ರಚಾರದ ಮೂಲಕ ನರೇಂದ್ರ ಮೋದಿ ಅವರ ನಾಯಕತ್ವವನ್ನು ದೂಷಿಸುವ ಮೂಲಕ ಮತ್ತು ಮತದಾರರ ಮನಸ್ಸಿನಲ್ಲಿ ಅನುಮಾನವನ್ನು ಸೃಷ್ಟಿಸುವ ಮೂಲಕ ಪ್ರತಿಪಕ್ಷಗಳು ಏನು ಗಳಿಸಲಿವೆ ಎಂದು ಪ್ರಶ್ನಿಸಿದ ಮಾಜಿ ಪ್ರಧಾನಿಗಳು; ನಿಮ್ಮ ಮನಸ್ಸಿಗೆ ಏನಾಗಿದೆ? ಏನಾದರೂ ಸಮಸ್ಯೆ ಇದ್ದರೆ ಸರಿಪಡಿಸಿಕೊಳ್ಳಿ ಎಂದು



ಪ್ರತಿಪಕ್ಷದವರಿಗೆ ಕಿವಿಮಾತು ಹೇಳಿದರು.

'ನಾನು ಏಳು ದಶಕಗಳಿಗೂ ಹೆಚ್ಚಿನ ಸಾರ್ವಜನಿಕ ಜೀವನದಲ್ಲಿ ಚುನಾವಣೆಯಲ್ಲಿ ಸೋಲು ಗೆಲುವನ್ನು ಎದುರಿಸಿದ್ದೇನೆ. ನಾನು ಎಂದಿಗೂ ಮತಗಳ್ಳತನದ ಅಂತಹ ವಿಷಯಗಳನ್ನು ಹೇಳಲಿಲ್ಲ' ಎಂದು ಮಾಜಿ ಪ್ರಧಾನಿಗಳು ಒತ್ತಿ ಹೇಳಿದರು. ಕೇರಳದಲ್ಲಿ 18,000 ಮತದಾರರ ಸೇರ್ಪಡೆಗೆ ಸಂಬಂಧಿಸಿದಂತೆ ಅಂದಿನ ಪ್ರಧಾನಿ ಜವಾಹರಲಾಲ್ ನೆಹರು ಬರೆದ ಪತ್ರವನ್ನು ಅವರು ಉಲ್ಲೇಖಿಸಿದರು.



'ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ನೆಹರು ಅವಧಿಯಲ್ಲಿಯೂ ಸಹ ಚುನಾವಣಾ ವ್ಯವಸ್ಥೆಯಲ್ಲಿ ಕೆಲವು ಲೋಪಗಳು ಇದ್ದವು' ಎಂಬುದಾಗಿ ಜೂನ್ 1, 1996 ಮತ್ತು ಏಪ್ರಿಲ್ 21, 1997ರ ನಡುವೆ ಪ್ರಧಾನಿಯಾಗಿದ್ದ ದೇವೇಗೌಡರು ಹೇಳಿದರು. ಮತದಾರರ ಪಟ್ಟಿಯಲ್ಲಿನ ಲೋಪಗಳನ್ನು ಪ್ರಸ್ತಾಪಿಸಿ, ಕಾಂಗ್ರೆಸ್ ಪಕ್ಷವು ಇತ್ತೀಚಿಗೆ ಬಿಹಾರ ಚುನಾವಣೆಯಲ್ಲಿ ಸೋಲು ಎದುರಿಸಿತು . ಮತದಾರರ ಪಟ್ಟಿಯ ಕೂಲಂಕಶ ಪರಿಶೀಲನೆಯ ನಂತರವೂ ಆ ರಾಜ್ಯದಲ್ಲಿ ಏನಾಯಿತು... ಎಂಬುದನ್ನು ಸ್ವತಃ ಪ್ರತಿಪಕ್ಷ ನಾಯಕರು ಆಲೋಚಿಸಬೇಕು.

ಆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಆರು ಶಾಸಕರು ಸಿಕ್ಕಿದ್ದಾರೆ ಎಂದು ಮಾಜಿ ಪ್ರಧಾನಿಗಳು ಕಟುವಾಗಿ ಟೀಕಿಸಿದರು. ಮತದಾರರ ಪಟ್ಟಿಯ ಪರಿಷ್ಕರಣೆ ಬಗ್ಗೆ ಪ್ರಧಾನಿಗಳ ವಿರುದ್ಧ ಪ್ರತಿಪಕ್ಷಗಳು ಆರೋಪಗಳನ್ನು ಮಾಡಲು ಅವರು ಏಕೆ ಬಯಸುತ್ತಾರೆ ಎಂದು ಖಾರವಾಗಿ ಪ್ರಶ್ನಿಸಿದ ದೇವೇಗೌಡರು; ದೇಶದಲ್ಲಿ ಚುನಾವಣಾ ಆಯೋಗವಿದೆ, ಸುಪ್ರೀಂ ಕೋರ್ಟ್ ಇದೆ.

ಈ ಎಲ್ಲಾ ವಿಷಯಗಳನ್ನು ಸರಿಪಡಿಸಲು ಚುನಾವಣಾ ಆಯೋಗವು ಎಲ್ಲಾ ರಾಜ್ಯ ಘಟಕಗಳಿಗೆ ನಿರ್ದೇಶನ ನೀಡಿದೆ. ಅವರ ಕರ್ತವ್ಯ ಅವರು ಮಾಡುತ್ತಾರೆ. ಇಲ್ಲಿ ಇವರೆಲ್ಲ ಬಾಯಿಗೆ ಬಂದಂತೆ ಮಾತನಾಡಬಾರದು ಎಂದು ಹೇಳಿದರು.

ರಾಷ್ಟ್ರದ ಜನರು ನರೇಂದ್ರ ಮೋದಿ ಅವರ ಸರಕಾರದ ಮೇಲೆ ಸಂಪೂರ್ಣ ವಿಶ್ವಾಸ ಹೊಂದಿದ್ದಾರೆ ಮತ್ತು ಮುಂದಿನ ಲೋಕಸಭೆ ಚುನಾವಣೆಯ ನಂತರವೂ ಅವರು ಮತ್ತೆ ಅಧಿ ಕಾರಕ್ಕೆ ಬರುತ್ತಾರೆ ಎಂದು ದೇವೇಗೌಡರು ಭವಿಷ್ಯ ನುಡಿದರು... ಏತನ್ಮಧ್ಯೆ, ಕಾಂಗ್ರೆಸ್ ನವರು ಮೊನ್ನೆ ಸೋಮವಾರ ದೆಹಲಿಯಲ್ಲಿ ರಾಹುಲ್ ಗಾಂಧಿ ಮುಂದಾಳತ್ವದಲ್ಲಿ ವೋಟ್ ಚೋರಿ ಯಾತ್ರೆ ನಡೆಸಿದ್ದಾರೆ! ಅದಕ್ಕೆ ಕರ್ನಾಟಕ ರಾಜ್ಯದಿಂದಲೂ ಸಿಎಂ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮತ್ತಿತರೇ ಶಾಸಕರು ಹೋಗಿದ್ದರು.

ಯಾತ್ರೆ ನೆಪದಲ್ಲಿ 'ಕುರ್ಚಿ' ವಿವಾದದ 'ಚರ್ಚೆ' ಕೂಡ ಮುಗಿಸಿಕೊಂಡು ಬಂದರು! ಕೆಲ ಮೂಲಗಳ ಪ್ರಕಾರ, ಬರೋ ಜನವರಿಯಲ್ಲಿ ಡಿಕೆಶಿ ಅವರಿಗೆ ಪಟ್ಟಾಭಿಷೇಕ ನಡೆಯೋ ಪವಾಡ ಸದೃಶ್ಯ ಕಾರ್ಯಕ್ರಮವಿದೆ ಎನ್ನಲಾಗುತ್ತಿದೆ! ಈ ಬಗ್ಗೆ ಹೆಚ್ಚಿನ ವಿವರ ಇದೇ ಸಂಚಿಕೆಯಲ್ಲಿ ಪ್ರಕಟವಾಗಿರೋ ರಾಜಕೀಯ ವರದಿಯಲ್ಲಿದೆ, ಓದಿಕೊಳ್ಳಿ...

-ಸಂ.

---

2 ☞ ಅವರಿಗೆ ಸೋಮವಾರ ವಿಧಾನಸಭೆ ಮತ್ತು ವಿಧಾನ ಪರಿಷತ್ ನಲ್ಲಿ ಸಂತಾಪ ಸೂಚಿಸಲಾಯಿತು. ಬೆಳಗಾವಿಯ ಸುವರ್ಣಸೌಧದಲ್ಲಿ ಚಳಿಗಾಲದ ಅಧಿವೇಶನ ನಡೆಯುತ್ತಿದ್ದು, ಇಂದು ವಿಧಾನಸಭೆ ಕಲಾಪ ಆರಂಭವಾಗುತ್ತಿದ್ದಂತೆ ಶಾಮನೂರು ಶಿವಶಂಕರಪ್ಪಗೆ ಅವರಿಗೆ ಸಂತಾಪ ಸೂಚಿಸಲಾಯಿತು. ಬಳಿಕ ಉಭಯ ಸದನಗಳ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಲಾಯಿತು.

ವಿಧಾನಸಭೆಯಲ್ಲಿ ಸಂತಾಪ ಸೂಚನೆ ನಿರ್ಣಯ ಮಂಡಿಸಿ ಮಾತನಾಡಿದ ಸ್ಪೀಕರ್ ಯು.ಟಿ. ಖಾದರ್ ಅವರು, ಎಷ್ಟೇ ಜಟಿಲವಾದ ಸಮಸ್ಯೆಯನ್ನು ತಾಳ್ಮೆಯಿಂದ ನಿಭಾಯಿಸುವ ಗುಣ ಶಾಮನೂರು ಅವರಲ್ಲಿತ್ತು. ಅವರ ಜೀವನವೇ ಒಂದು ಸಂದೇಶ ಎಂದು ಬಣ್ಣಿಸಿದರು. ಬಳಿಕ ತಮ್ಮ ಸಂತಾಪವನ್ನು ಸೂಚಿಸಿ ಮಾತನಾಡಿದ ಸಿಎಂ ಸಿದ್ದರಾಮಯ್ಯನವರು, ದಾವಣಗೆರೆ ಜಿಲ್ಲೆ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಯಾಗಿದ್ದಾರೆ ಅದಕ್ಕೆ ಶಾಮನೂರು ಶಿವಶಂಕರಪ್ಪ ಅವರೇ ಕಾರಣ.

ಶಾಮನೂರು ಶಿವಶಂಕರಪ್ಪ ಅವರು ತಮ್ಮ 63ನೇ ವಯಸ್ಸಿನಲ್ಲಿ ವಿಧಾನಸಭೆ ಪ್ರವೇಶಿಸಿ ಆರು ಬಾರಿ ಶಾಸಕರಾದವರು. ಒಮ್ಮೆ ಸಂಸತ್ ಸದಸ್ಯರಾಗಿದ್ದರು. ದೀರ್ಘ ಕಾಲದ ರಾಜಕೀಯದಲ್ಲಿದ್ದರು. ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರಾಗಿದ್ದರು. 1969ರಲ್ಲಿ ದಾವಣಗೆರೆ ಪುರಸಭೆ ಸದಸ್ಯರಾಗಿ ನಂತರ ನಗರಸಭೆ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು ಎಂದು ಕೊಂಡಾಡಿ ದುಃಖ ಭರಿಸಲಾಗದೆ ಕಣ್ಣು ಒರೆಸಿಕೊಂಡರು. ಮುಂದುವರೆದು, ದಾವಣಗೆರೆಯಲ್ಲಿ ಬಾಪೂಜಿ ವಿದ್ಯಾ ಕೇಂದ್ರದ ಮೂಲಕ ಇಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳು ಸೇರಿದಂತೆ ಅನೇಕ ಸಂಸ್ಥೆಗಳನ್ನು ಕಟ್ಟಿ ಜಿಲ್ಲೆಯನ್ನು ವಿದ್ಯಾಕಾಶಿಯಾಗಿಸಿದರು. ಉದ್ಯಮಿಯಾಗಿ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ.

ಜವಳಿ ಕ್ಷೇತ್ರದ ಅವನತಿ ಪ್ರಾರಂಭವಾದಾಗ ದಾವಣಗೆರೆಗೆ ಒಂದು ಬ್ರ್ಯಾಂಡ್ ಹೆಸರನ್ನು ಶಿವಶಂಕರಪ್ಪ ಅವರು ತಂದುಕೊಟ್ಟರು. ದೀರ್ಘಕಾಲ ಎಐಸಿಸಿ ಖಜಾಂಚಿ ಆಗಿದ್ದರು. ಎಲ್ಲರೊಂದಿಗೂ ಸ್ನೇಹ ಸಂಪಾದಿಸಿದ್ದವರು, ಅಜಾತ ಶತ್ರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.





ದಾವಣಗೆರೆಗೆ ಭೇಟಿ ನೀಡಿದಾಗಲೆಲ್ಲ ಅವರ ಗೆಸ್ಟ್‌ಹೌಸ್‌ನಲ್ಲಿ ಉಳಿಯುತ್ತಿದ್ದೆ, ಅವರ ಒತ್ತಾಯದ ಮೇರೆಗೆ ಅವರ ಮನೆಯಲ್ಲಿಯೇ ಊಟ ಮಾಡುತ್ತಿದ್ದೆ. ನನ್ನ 75ನೇ ಜನ್ಮದಿನವನ್ನು ದಾವಣಗೆರೆಯಲ್ಲಿಯೇ ಆಚರಿಸಿಕೊಂಡಿದ್ದೆ. ಅದಕ್ಕೂ ಸಾಕಷ್ಟು ಸಹಕಾರ ನೀಡಿದ್ದರು ಎಂದು ಸ್ಮರಿಸಿದರು. ಶಾಮನೂರು ಶಿವಶಂಕರಪ್ಪ ಕಷ್ಟದ ಸಂದರ್ಭಗಳಲ್ಲಿ ಜನರಿಗೆ ಸಹಾಯ ಹಸ್ತ ಚಾಚುತ್ತಿದ್ದರು. ಕೋವಿಡ್ ಸಂದರ್ಭದಲ್ಲಿ ಆರು ಕೋಟಿಗೂ ಹೆಚ್ಚು ವೆಚ್ಚ ಮಾಡಿ ಆಕ್ಸಿಜನ್ ಸರಬರಾಜು ಮಾಡಿದ್ದರು.

ಹಿಂದೆ ನಾನು ಮುಖ್ಯಮಂತ್ರಿ ಆಗಿದ್ದಾಗ ಮಂತ್ರಿ ಮಂಡಲದಲ್ಲಿ ಶಾಮನೂರು ಶಿವಶಂಕರಪ್ಪ ಅವರು ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. 2016ರಲ್ಲಿ ಸಂಪುಟ ಪುನರ್ ರಚನೆಯಾದಾಗ ಅವರ ಪುತ್ರ ಎಸ್. ಎಸ್. ಮಲ್ಲಿಕಾರ್ಜುನ್ ಅವರನ್ನು ಸಚಿವರನ್ನಾಗಿ ಮಾಡಲು ಕೋರಿಕೊಂಡಿದ್ದರು. ಮಲ್ಲಿಕಾರ್ಜುನ್ ಅವರು ನಮ್ಮ ಈಗಿನ ಸಚಿವ ಸಂಪುಟದಲ್ಲಿ ಮಂತ್ರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

15 ದಿನಗಳ ಹಿಂದೆ ಆಸ್ಪತ್ರೆಯಲ್ಲಿ ಅವರನ್ನು ಭೇಟಿ ಮಾಡಿದಾಗ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಅವರ ನಿಧನದಿಂದ ಜನಪರ ನಾಯಕನನ್ನು ಕಳೆದುಕೊಂಡಂತಾಗಿದೆ. ಅವರು ದೊಡ್ಡ ಕುಟುಂಬ ಹಾಗೂ ಲಕ್ಷಾಂತರ ಅಭಿಮಾನಿಗಳನ್ನು ಅಗಲಿದ್ದು, ಭಗವಂತ ಅವರೆಲ್ಲರಿಗೂ ದುಃಖ ಭರಿಸುವ ಶಕ್ತಿಯನ್ನು ನೀಡಲಿ ಹಾಗೂ ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ ಪ್ರಾರ್ಥಿಸುತ್ತೇನೆ... ಎಂದು ಕೈ ಮುಗಿದು ಶ್ರದ್ಧಾಂಜಲಿ ಅರ್ಪಿಸಿದರು.

# ಅವರಿವರ ಮನೆಯಲ್ಲಿ ಅಡುಗೆ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದ ವಿಧವೆ ಲಲಿತಮ್ಮ... ಅನ್ಯೆತಿಕ ಸಂಬಂಧದಲ್ಲಿ ಹೋಟೆಲ್ ಕಾರ್ಮಿಕನಿಂದ ಬರ್ಬರವಾಗಿ ಕೊಲೆಯಾದಳು!

## ರಾಣೆಬೆನ್ನೂರ ನಗರ ಪೊಲೀಸರಿಂದ ಕೇವಲ 6 ಗಂಟೆಯೊಳಗೆ ಹಂತಕನ ಬಂಧನ!


ನಂಬಿದವನಿಂದಲೇ ಕೊಲೆಯಾದ ಲಲಿತಮ್ಮ


**ಆಕೆ 42 ವರ್ಷದ ವಿಧವೆ. 10 ವರ್ಷಗಳ ಹಿಂದೆ ಗಂಡನನ್ನು ಕಳೆದುಕೊಂಡು ತನ್ನೆರಡು ಗಂಡು ಮಕ್ಕಳ ಜತೆ ತುತ್ತಿನ ಚೀಲ ತುಂಬಿಸಿಕೊಳ್ಳುವುದಕ್ಕಾಗಿ ಇನ್ನಿಲ್ಲದ ಕಷ್ಟ ಅನುಭವಿಸುತ್ತಿದ್ದಳು. ಹೊಟ್ಟೆಪಾಡಿಗಾಗಿ ತನ್ನೂರು ಬಿಟ್ಟು ಪಟ್ಟಣಕ್ಕೆ ಬಂದು ಹೋಟೆಲ್‌ನಲ್ಲಿ ಅಡುಗೆ ಕೆಲಸಕ್ಕೆ ಸೇರಿದಳು. ಅದೇ ಹೋಟೆಲ್‌ನಲ್ಲಿ ಸರ್ವರ್ ಆಗಿದ್ದ ಐನಾತಿಯೊಂದಿಗೆ ಪರಿಚಯ, ಸಲುಗೆ ಬೆಳೆದು ಇಬ್ಬರ ಮಧ್ಯ ಅನ್ಯೆತಿಕ ಸಂಬಂಧ ರೂಪಾಂತರಗೊಂಡಿತು. ಹೀಗಾಗಿ ಇಬ್ಬರೂ ತಮ್ಮ ಅನ್ಯೆತಿಕ ಚಟುವಟಿಕೆ ಮುಂದುವರೆಸಿದ್ದರು. ಇತ್ತೀಚಿಗೆ ಇಬ್ಬರ ನಡುವೆ ಭಿನ್ನಾಭಿಪ್ರಾಯ ತಲೆದೋರಿದ ಕಾರಣ ವಿಧವೆ, ಸರ್ವರ್‌ನಿಂದ ಅಂತರ ಕಾಯ್ದುಕೊಳ್ಳತೊಡಗಿದಳು. ಕೆಲ ದಿನಗಳ ಹಿಂದಷ್ಟೇ ಹೋಟೆಲ್ ಕೆಲಸ ಬಿಟ್ಟು ಅವರಿವರ ಮನೆಯಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದಳು. ವಿಧವೆ ತನ್ನಿಂದ ದೂರಾಗಿ ಅಂತರ ಕಾಯ್ದುಕೊಳ್ಳುವುದಲ್ಲದೆ ಸರ್ವರ್‌ನ ಕರೆ ಕೂಡಾ ನಿರ್ಲಕ್ಷಿಸಿದ್ದಳು. ಇತ್ತಿತ್ತಲಾಗಿ ಆಕೆಯ ಮೊಬೈಲ್ ಸದಾ ಬಿಜಿ ಬರತೊಡಗಿತ್ತು. ಇದರಿಂದ ಸರ್ವರ್‌ನ ತಲೆಯಲ್ಲಿ ಸಂಶಯ ಪಿಶಾಚಿ ಹೊಕ್ಕಿತು. ಅನುಮಾನ ಬಹಳಷ್ಟು ಕಾಡಿತ್ತು. ಇತ್ತೀಚಿಗೆ ವಿಧವೆಯ ಮನೆಗೆ ಬಂದ ಸರ್ವರ್ 'ನೀನು ನನ್ನಿಂದ ಯಾಕೆ ದೂರಾಗುತ್ತಿರುವೆ...? ನಿನ್ನ ಮೊಬೈಲ್ ಯಾಕೆ ಬಿಜಿ ಇರುತ್ತದೆ' ಎಂದು ಜಗಳಕ್ಕಿಳಿದನು. ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು ವಿಕೋಪಕ್ಕೆ ಹೋಗಿದೆ. ಆಕ್ರೋಶಗೊಂಡಿದ್ದ ಸರ್ವರ್ ಚಾಕುವಿನಿಂದ ವಿಧವೆಯ ಕತ್ತು ಸೀಳಿ ಬರ್ಬರವಾಗಿ ಕೊಲೆಗೈದು ಪರಾರಿಯಾಗಿದ್ದಾನೆ. ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದ ಚತುರ ಮತ್ತು ಧಾಡಸಿ ಸಿಪಿಐ ವೆಂಕಟೇಶ ಎನ್., ಪಿಎಸ್‌ಐ ಗಡ್ಡೆಪ್ಪ ಗುಂಜುಟಗಿ ಮತ್ತು ಸಿಬ್ಬಂದಿಗಳು ಎಸ್ಪಿ ಯಶೋಧಾ ವಂಟಗೋಡಿ, ಡಿವೈಎಸ್ಪಿ ಲೋಕೇಶ ಜಿ. ಅವರ ನಿರ್ದೇಶನದಲ್ಲಿ ಕೇವಲ 6 ಗಂಟೆಗಳಲ್ಲಿ ಹಂತಕ ಸರ್ವರ್‌ನನ್ನು ಬಂಧಿಸಿ ಜೈಲಿಗಟ್ಟಿರುವ ಘಟನೆ ಹಾವೇರಿ ಜಿಲ್ಲೆ ರಾಣೆಬೆನ್ನೂರ ನಗರ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**


ಸಂಶಯ ಪಿಶಾಚಿ ಹಂತಕ ಚಂದ್ರಪ್ಪ

ಹಾವೇರಿ
✍ ಮನ್ನಾಪೂರ

ಪರಿಚಯ, ಸಲುಗೆ, ಪ್ರೀತಿ, ಪ್ರೇಮ, ಅಕ್ರಮ ಸಂಬಂಧದ ಕಾಮದಾಟಗಳು ಅದ್ಯಾವಾಗ ಮತ್ತು ಅದ್ಯಾರ ನಡುವೆ ಹುಟ್ಟಿಕೊಳ್ಳುತ್ತವೆ ಎಂದು ಗೊತ್ತಾಗುವುದೇ ಇಲ್ಲ. ಗೊತ್ತಾಗುವುದರೊಳಗಾಗಿ ಸುಖಾಂತ್ಯಕ್ಕಿಂತ ಘೋರ ದುರಂತದಲ್ಲಿ ಕೊನೆಗೊಳ್ಳುವುದನ್ನು ಇತ್ತೀಚಿಗೆ ನೋಡುತ್ತಿದ್ದೇವೆ, ಕೇಳುತ್ತಿದ್ದೇವೆ. ಪರಿಚಯ, ಸಲುಗೆ, ಅಕ್ರಮ ಸಂಬಂಧ ಬೆಸೆಯುವುದಕ್ಕೆ ವಯಸ್ಸು, ಜಾತಿ, ರೂಪ, ಶ್ರೀಮಂತಿಕೆ ಯಾವುದೂ ಅಡ್ಡ ಬರಲಾರದು ಮತ್ತು ಇವುಗಳಿಗೂ ಹೊತ್ತು-ಗೊತ್ತು ಯಾವುದು ಬೇಕಿಲ್ಲ. ಎಲ್ಲಿಯವರೋ ಎಲ್ಲಿಗೆ ಬಂದು ಪರಿಚಯವಾಗಿ, ಸಲುಗೆ ಬೆಳೆದು ಅಕ್ರಮ ಸಂಬಂಧ ಬೆಳೆಸಿಕೊಂಡು, ಮೊದ ಮೊದಲು ಅತ್ಯಾಪ್ತರಾಗಿ ನಂತರ ಮನಸ್ತಾಪ ಬಂದು ಕೊನೆಯಲ್ಲಿ ದುರಂತ ಅಂತ್ಯ ಕಂಡ ಕಥೆ ಇಂದು ಸಾಕಷ್ಟು ಬೆಳಕಿಗೆ ಬರುತ್ತಿವೆ.


ಎಸ್ಪಿ ಯಶೋಧಾ ವಂಟಗೋಡಿ


ಡಿವೈಎಸ್ಪಿ ಲೋಕೇಶ್ ಜೆ.

ಹಾವೇರಿ ಜಿಲ್ಲೆಯ ಬ್ಯಾಡಗಿ ಸಮೀಪದ ಕೆರೂಡಿ ಗ್ರಾಮದ 42 ವರ್ಷದ ವಿಧವೆ ಲಲಿತಮ್ಮ ಕರಬಸಪ್ಪ ಬ್ಯಾಡಗಿ ಎಂಬ ಮಹಿಳೆಯು ರಾಣೆಬೆನ್ನೂರ ಹೋಟೆಲ್ ಒಂದರಲ್ಲಿ ಅಡುಗೆ ಕೆಲಸಕ್ಕೆ ಸೇರಿಕೊಂಡು ಅದೇ ಹೋಟೆಲಿನಲ್ಲಿ ಸರ್ವರ್ ಆಗಿದ್ದ ಹಾವೇರಿ ತಾಲ್ಲೂಕಿನ ಕಳ್ಳಿಯಾಳದ ಚಂದ್ರಪ್ಪ ಶಿವಲಿಂಗಪ್ಪ ಸಣ್ಣಮಲ್ಲಪ್ಪನವರ (36 ವ) ಎಂಬಾತನೊಂದಿಗೆ ಕಳೆದ ಮೂರು ವರ್ಷಗಳ ಹಿಂದೆ ಅನ್ಯೆತಿಕ ಸಂಬಂಧ ವಿರಿಸಿಕೊಂಡು ಕೊನೆಗೆ ಆತನಿಂದಲೇ ಬರ್ಬರವಾಗಿ ಕೊಲೆಯಾಗಿ ಹೋಗಿದ್ದಾಳೆ. ಹತ್ತು ವರ್ಷಗಳ ಹಿಂದೆ ತಂದೆಯನ್ನು ಇದೀಗ ತಾಯಿಯನ್ನು ಕಳೆದುಕೊಂಡ ಎರಡು ಗಂಡು ಮಕ್ಕಳು ಅನಾಥರಾಗಿರುವ ದುರಂತ ಕಥೆಯೊಂದರ ಕುರಿತು 'ಪೊಲೀಸ್ ನ್ಯೂಸ್' ವರದಿ ಮಾಡಿದೆ. ಸರ್ವರ್ ಚಂದ್ರಪ್ಪ ಇಂದು ಹಂತಕನಾಗಿ ಜೈಲು ಸೇರಿದ್ದಾನೆ. ಹೇಗಿದೆ ನೋಡಿ. ಪರಿಚಯ, ಸಲುಗೆ, ಅನ್ಯೆತಿಕ ಸಂಬಂಧದ ದುರಂತ.

### ನತದೃಷ್ಟೆ ಲಲಿತಮ್ಮ...


ಬದುಕಿನಲ್ಲಿ ಅನೇಕ ಬಣ್ಣ ಬಣ್ಣದ ಕನಸುಗಳನ್ನು ಕಂಡಿದ್ದ ಲಲಿತಮ್ಮ ಅಕ್ಷರಶಃ ನತದೃಷ್ಟೆ. ತವರಿನಲ್ಲಿ ಕೂಡಾ ಕಿತ್ತು ತಿನ್ನುವ ಬಡತನದ ನಡುವೆ ಬೆಳೆದು ಬಂದ ಆಕೆ ಗಂಡನ ಮನೆಯಲ್ಲೂ ಕೂಡಾ ಇನ್ನಿಲ್ಲದ ಬವಣೆಯನ್ನು ಅನುಭವಿಸಿದಾಕೆ. ಬ್ಯಾಡಗಿ ತಾಲ್ಲೂಕಿನ ಕೆರೂಡಿ ಗ್ರಾಮದ ಕರಬಸಪ್ಪ ಎಂಬಾತನೊಂದಿಗೆ 20 ವರ್ಷಗಳ ಹಿಂದೆ ಸಪ್ತಪದಿ ತುಳಿದು ಮದುವೆ ಮಾಡಿಕೊಂಡು ಬಂದಿದ್ದಳು. ಎಲ್ಲರಂತೆ ತಾನು ಕೂಡಾ ಗಂಡ, ಮನೆ, ಮಕ್ಕಳು ಎಂದೆಲ್ಲ ಸುಂದರ ಸಂಸಾರದ ಕನಸನ್ನು ಹೊಂದಿದ್ದಳು. ಮೊದ ಮೊದಲು ಎಲ್ಲವೂ ಚೆನ್ನಾಗಿತ್ತು. ದಿನವಿಡಿ ದುಡಿದು ರಾತ್ರಿಯಾದರೆ ಸಾಕು ಗಂಡನ ತೋಳ್ತೆಕ್ಕೆಯ ಬಿಸಿಯುಸಿರಿನ ಹಿತವಾದ ಸ್ಪರ್ಶದಲ್ಲಿ ಎಲ್ಲವನ್ನೂ ಮರೆಯುತ್ತಿದ್ದಳು ಲಲಿತಮ್ಮ.

ಗಂಡ ಕರಬಸಪ್ಪ ಮತ್ತು ಲಲಿತಮ್ಮಳ ಅತ್ಯುತ್ತಮ ದಾಂಪತ್ಯ ಜೀವನದಲ್ಲಿ ಮುದ್ದಾದ ಎರಡು ಗಂಡು ಮಕ್ಕಳು ಜನಿಸಿದವು. ಮಕ್ಕಳ ಪಾಲನೆ-ಪಾಲನೆಯಲ್ಲಿ ದಿನಗಳು ಉರುಳಿದ್ದೇ ಗೊತ್ತಾಗಲಿಲ್ಲ. ಹಾಗೋ-ಹೀಗೋ ಹತ್ತು ವರ್ಷ ಸಂಸಾರ ಕಳೆದು ಹೋದವು. ಆದರೆ 'ತಾನೊಂದು ಬಗೆದರೆ ದೈವವೊಂದು ಬಗೆಯಿತು' ಎನ್ನುವಂತೆ ಲಲಿತಮ್ಮಳ ಜೀವನದಲ್ಲಿ ದುರ್ಘಟನೆಯೊಂದು ನಡೆದು ಹೋಯಿತು.

### ವಿಧವೆಯಾದ ಲಲಿತಮ್ಮ...

ಇದ್ದಕ್ಕಿದ್ದಂತೆ ಲಲಿತಮ್ಮಳ ಗಂಡ ಕರಬಸಪ್ಪ ಬ್ಯಾಡಗಿ ಇದೀಗ ಸುಮಾರು ಹತ್ತು ವರ್ಷಗಳ ಹಿಂದೆ ತೀರಿಕೊಂಡು ಬಿಟ್ಟನು. ವಿಧವೆಯಾದ ಲಲಿತಮ್ಮನಿಗೆ ದಿಕ್ಕು ತೋಚದಂತಾಗಿತ್ತು. ಆರಂಭದಲ್ಲಿ ತವರಿನ ಮತ್ತು ಬಂಧು-ಬಳಗದವರ ಸಹಾಯ ಸಾಂತ್ವನ ಸ್ವಲ್ಪ ಮಟ್ಟಿಗೆ ದೊರಕಿತ್ತು. 'ದಿನ ಸತ್ತರೆ ಅಳುವರ‍್ಯಾರು' ಎಂಬಂತೆ ಕ್ರಮೇಣ ಲಲಿತಮ್ಮ ತನ್ನ ಸಂಸಾರದ ಬಂಡಿಯನ್ನು ಎಳೆಯದೇ ವಿಧಿಯಿರಲಿಲ್ಲ. ಪದರಲ್ಲಿ ಎರಡು ಮಕ್ಕಳ ಶಿಕ್ಷಣ, ಊಟ, ಉಡಿಗೆ, ಆಸ್ಪತ್ರೆ ಎಂದೆಲ್ಲ ಖರ್ಚು-ಕಂದಾಯಗಳು ಇವಳನ್ನು ಬಹಳಷ್ಟು ಹೈರಾಣ ಆಗಿರಿಸಿತು. ಅಡುಗೆ ಕೆಲಸವನ್ನು ಕಲಿತಿದ್ದ ಲಲಿತಮ್ಮ ಇದ್ದೂರಲ್ಲಿ ಅಲ್ಪಮಟ್ಟಿಗೆ ಹೇಗೋ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಳು. ಗಂಡ ಸತ್ತ ನಂತರ ಆರೇಳು ವರ್ಷಗಳ ಕಾಲ ಜ್ವಾಲಾಮುಖಿಯ ಮೇಲೆ ಕಳೆದಂತೆ ಅದ್ಹೇಗೋ ಜೀವನ ಕಳೆದ ಆಕೆ ತನ್ನ ಹಾಗೂ ಎರಡು ಮಕ್ಕಳ ತುತ್ತಿನ ಚೀಲ ತುಂಬುವುದಕ್ಕೆ ಸಮೀಪದ ರಾಣೆಬೆನ್ನೂರ ಪಟ್ಟಣಕ್ಕೆ ಹೋಗಬೇಕೆಂದು ನಿರ್ಧರಿಸಿ ಮೂರು ವರ್ಷಗಳ ಹಿಂದೆ ಇಲ್ಲಿಗೆ ಬಂದಳು. ಆರಂಭದಲ್ಲಿ ಕೆಲಸ ಹುಡುಕುವುದು ಅವಳಿಗೆ ಕಷ್ಟವೆನಿಸಲಿಲ್ಲ.


ಸಿಪಿಐ ವೆಂಕಟೇಶ ಎನ್.


ಪಿಎಸ್‌ಐ ಗಡ್ಡೆಪ್ಪ ಗುಂಜಟಗಿ

### ಹೋಟೆಲಿನಲ್ಲಿ ಅಡುಗೆ ಕೆಲಸ...

ಬದುಕು ನಿಂತ ನೀರಲ್ಲ. ಅದು ನಿರಂತರವಾಗಿ ನಾಗರಿಕವಾಗಿ ಹರಿಯುತ್ತಲೇ ಇರುತ್ತದೆ. ರಾಣೆಬೆನ್ನೂರ ಪಟ್ಟಣದ ಹೋಟೆಲ್ ಒಂದರಲ್ಲಿ ಅಡುಗೆ ಕೆಲಸಕ್ಕೆ ಸೇರಿಕೊಂಡು ಶ್ರದ್ಧೆಯಿಂದ ಕೆಲಸ ಮಾಡಿಕೊಂಡು ಹೋಗತೊಡಗಿದ್ದಳು. ಕೂನಬೇವು ಪ್ಲಾಟ್ ರಸ್ತೆ ಎಂ.ಜಿ. ಪಾಟೀಲ ಇವರ ಜೀನ್ ಕಾಂಪೌಂಡ್‌ನಲ್ಲಿ ಪುಟ್ಟ ಬಾಡಿಗೆ ಮನೆಯೊಂದನ್ನು ಪಡೆದುಕೊಂಡು ತನ್ನ ಮಕ್ಕಳೊಂದಿಗೆ ವಾಸವಾಗಿದ್ದಳು. ತನಗೂ ತನ್ನ ಎರಡು ಮಕ್ಕಳಿಗೂ ಹೋಟೆಲ್ ಬಹಳಷ್ಟು ಆಸರೆ ನೀಡಿತ್ತು. ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ ಚೆನ್ನಾಗಿತ್ತು. ಆದರೆ ಲಲಿತಮ್ಮನ ಜೀವನದಲ್ಲಿ ಹಠಾತ್ತನೇ ತಿರುವು ಸಿಕ್ಕಿತು. ಆ ತಿರುವು ಸಿಗದೇ ಹೋಗಿದ್ದರೆ ಇಂದು ಲಲಿತಮ್ಮ ಎಲ್ಲರಂತೆ ನಮ್ಮ-ನಿಮ್ಮ ನಡುವೆ ಬದುಕಿ ಇರುತ್ತಿದ್ದಳು. ಅವಳ ಮಕ್ಕಳು ಇಂದೂ ಅನಾಥರಾಗುತ್ತಿರಲಿಲ್ಲ

### ಚಂದ್ರಪ್ಪನೆಂಬ ಸರ್ವರ್...

ಲಲಿತಮ್ಮ ಅಡುಗೆ ಮಾಡಿಕೊಂಡಿದ್ದ ಹೋಟೆಲ್‌ನಲ್ಲಿಯೇ ಹಾವೇರಿ ತಾಲ್ಲೂಕಿನ ಕಳ್ಳಿಯಾಳ

☞ 14


ಘಟನಾ ಸ್ಥಳದಲ್ಲಿ ಪೊಲೀಸರು ಸೂಕ್ಷ್ಮ ಪರಿಶೀಲನೆ ಮಾಡುತ್ತಿರುವುದು


ಲಲಿತಮ್ಮನ ವಾಸಿಸುತ್ತಿದ್ದಮನೆಯ ಮುಂದೆ ಪರಿಶೀಲನೆ ಮಾಡುತ್ತಿರುವ ಪೊಲೀಸ್ ಅಧಿಕಾರಿಗಳು

# ದೆಹಲಿಯಲ್ಲಿ ಹೈ ಕಮ್ಯಾಂಡ್ ಟೀಮ್ ಡಿನ್ನರು! ಡಿಕೆಶಿ ಹಾಜರು, ಸಿದ್ದರಾಮಯ್ಯ ಗೈರು!!



**ರಾಜಧಾನಿಯಲ್ಲಿ ಮೊನ್ನೆ ಭಾನುವಾರ ನಡೆದ ವೋಟ್ ಚೋರಿ ಪ್ರತಿಭಟನೆಯಲ್ಲಿ ಭಾಗವಹಿಸಲು ಇಲ್ಲಿಂದ ತೆರಳಿರುವ ಕಾಂಗ್ರೆಸ್ ಮುಖಂಡರಿಗೆ ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೋಜನ ವ್ಯವಸ್ಥೆ ಮಾಡಿದ್ದರು. ಆಯ್ದ ನಾಯಕರಿಗೆ ಮಾತ್ರ ಬೋಜನ ಕೂಟಕ್ಕೆ ಆಹ್ವಾನ ನೀಡಲಾಗಿತ್ತು. ಡಿಸಿಎಂ ಡಿ.ಕೆ ಶಿವಕುಮಾರ್ ಭೋಜನ ಕೂಟದಲ್ಲಿ ಮಿಂಚಿದರೆ, ಸಿಎಂ ಸಿದ್ದರಾಮಯ್ಯ ಗೈರು ಎದ್ದು ಕಾಣುತ್ತಿತ್ತು.....ಹಾಗಾದ್ರೆ ಸಿಎಂ ಕುರ್ಚಿ ಅಲ್ಲಾಡ್ತಾ ಇದೆಯಾ?!**

✍ ಮಹದೇವ್ ಕೆಂಪಯ್ಯ

ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಅಧಿಕಾರ ಹಂಚಿಕೆಯ ಕುರಿತು ಚಿತ್ರ ವಿಚಿತ್ರ ಬೆಳವಣಿಗೆ ನಡೆಯುತ್ತಿರುವ ಈ ಸಂದರ್ಭದಲ್ಲಿ, ಡಿ.ಕೆ.ಶಿವಕುಮಾರ್ ಹೈಕಮಾಂಡ್ ನಾಯಕರು ಆಯೋಜಿಸಿದ್ದ ಭೋಜನ



ಕೂಟದಲ್ಲಿ ತಮ್ಮ ಸಹಚರರೊಡನೆ ಮಿಂಚಿದ್ದು ಹಲವರ ಹುಬ್ಬೇರುವಂತೆ ಮಾಡಿದೆ!

ರಾಜಧಾನಿ ದೆಹಲಿಯಲ್ಲಿ ಮೊನ್ನೆ ಭಾನುವಾರ ನಡೆದ ವೋಟ್ ಚೋರಿ ಪ್ರತಿಭಟನೆಯಲ್ಲಿ ಭಾಗವಹಿಸಲು ರಾಜ್ಯದಿಂದ ತೆರಳಿದ್ದ ಪ್ರಮುಖ ನಾಯಕರಿಗೆ ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭೋಜನ ವ್ಯವಸ್ಥೆ ಮಾಡಿದ್ದರು. ಅದರಲ್ಲಿ ಆಯ್ದ ನಾಯಕರಿಗೆ ಮಾತ್ರ ಬೋಜನ ಕೂಟಕ್ಕೆ ಆಹ್ವಾನ ನೀಡಲಾಗಿತ್ತು. ಸದರಿ ಭೋಜನಕೂಟದಲ್ಲಿ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭಾಗಿಯಾಗಿ ಮಿಂಚಿದ್ದಾರೆ! ಆದರೆ, ಸಿಎಂ ಸಿದ್ದರಾಮಯ್ಯ ದೆಹಲಿಯಲ್ಲೇ ಇದ್ದರೂ ಭೋಜನ ಕೂಟಕ್ಕೆ ಹಾಜರಾಗದೆ ಔಟ್ ಸೈಡ್ ಮುಸ್ಲಿಂ ಲೀಡರ್ ಒಬ್ಬರ ಮನೆಯಲ್ಲಿ ಭೂರಿ ಭೋಜನಂಗೈದು ಖರ್ಗೆ ಅವರಿಗೇ ಸೆಡ್ಡು ಹೊಡೆದಿದ್ದಾರೆ!

ಸಿದ್ದರಾಮಯ್ಯ ಅವರ ಅನುಪಸ್ಥಿತಿಯಲ್ಲಿ ಈ ಭೋಜನಕೂಟ ನಡೆದಿದ್ದು, ಹೈಕಮಾಂಡ್ ನಾಯಕರು ಹಾಗೂ ಡಿ.ಕೆ.ಶಿವಕುಮಾರ್ ನಡುವಿನ ಮಾತುಕತೆ ಕುರಿತು ಹಲವು ಕುತೂಹಲಗಳು ಹುಟ್ಟಿಕೊಂಡಿವೆ! ಉಳಿದಂತೆ, ಕರ್ನಾಟಕ ಭವನದಲ್ಲಿ ಹಲವಾರು ಶಾಸಕರು, ಸಚಿವರು ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಬಳಿಕ ಔತಣ ಕೂಟದಲ್ಲಿ ಭಾಗವಹಿಸಿದ್ದ ಡಿ.ಕೆ.ಶಿವಕುಮಾರ್ ಅಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಸೇರಿದಂತೆ ಪ್ರಮುಖ ನಾಯಕರನ್ನು ಭೇಟಿ ಮಾಡಿದ್ದರು ಎನ್ನಲಾಗಿದೆ. ಈ ವೇಳೆ ಡಿ.ಕೆ. ಶಿವಕುಮಾರ್ ತಮ್ಮ ಪರವಾದ ವಾದವನ್ನು ವರಿಷ್ಠರಿಗೆ ತಲುಪಿಸಿದ್ದಾರೆ ಎಂದು ಕೆಲ ಮೂಲಗಳು ತಿಳಿಸಿವೆ.

### ಕದನ ವಿರಾಮ!

ಕಳೆದ ತಿಂಗಳು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ನಡುವೆ ಅಧಿಕಾರ ಹಂಚಿಕೆಯ ಸಂಬಂಧಪಟ್ಟಂತೆ ಭಾರಿ ಚರ್ಚೆಗಳು ನಡೆಯುತ್ತಿದ್ದವು. ಇಬ್ಬರೂ ನಾಯಕರು ಸುಮ್ಮನಿದ್ದರೂ ಅವರವರ ಹಿಂಬಾಲಕರು ಮಾತ್ರ ತಮಗೆ ಅನ್ನಿಸಿದನ್ನು ವದರುತ್ತಾ, ಮಾಧ್ಯಮಗಳಿಗೆ ಆಹಾರ ಒದಗಿಸುತ್ತಿದ್ದರು! ಪರಿಸ್ಥಿತಿ ವಿಕೋಪಕ್ಕೆ ತಲುಪಿದ್ದರಿಂದಾಗಿ ಹೈಕಮಾಂಡ್ ನಾಯಕರು ಮಧ್ಯ ಪ್ರವೇಶ ಮಾಡುವಂತಾಗಿತ್ತು.ಹೈ ಕಮ್ಯಾಂಡ್ ಆದೇಶದಂತೆ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ



ಡಿ.ಕೆ. ಶಿವಕುಮಾರ್ ನಡುವೆ ಎರಡು ಉಪಹಾರ ಕೂಟಗಳು ನಡೆದವು! ಅವರು ಇವರ ಮನೆಯಲ್ಲಿ, ಇವರು ಅವರ ಮನೆಯಲ್ಲಿ ಭೋಜನ ಸವಿದಿದ್ದರು. ಇದರೊಂದಿಗೆ ಇಬ್ಬರೂ ನಾಯಕರ ನಡುವಿನ ಮನಸ್ತಾಪಕ್ಕೆ ತಾತ್ಕಾಲಿಕ ಕದನ ವಿರಾಮ ಘೋಷಣೆಯಾಗಿತ್ತು!

### ಹಿಂಬಾಲಕರ ಹೇಶಾರವ!



ಆದರೆ, ಇತರೆ ನಾಯಕರು ಮತ್ತು ಶಾಸಕರ ನಡುವೆ ಅಧಿ ಕಾರ ಹಂಚಿಕೆಯ ಚರ್ಚೆ ತೀವ್ರ ಸ್ವರೂಪದಲ್ಲಿ ನಡೆಯುತ್ತಲೇ ಇತ್ತು. ಸೋ, ಹೈ ಕಮ್ಯಾಂಡ್ ಇಬ್ಬರನ್ನೂ ದೆಹಲಿಗೆ ಕರೆಸಿಕೊಂಡಿತ್ತು. ಹೇಗಿದ್ದರೂ ವೋಟ್ ಚೋರಿ ಅಭಿಯಾನ ನಡೆಯುತ್ತಿತ್ತಲ್ಲ, ಅದರಲ್ಲಿ ಭಾಗವಹಿಸೋ ನೆಪದಲ್ಲಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮತ್ತವರ ಹಿಂಬಾಲಕರು ರಾಜಧಾನಿಗೆ ತೆರಳಿದ್ದರು. ಆದರೆ ಕಾಂಗ್ರೆಸ್ ಹೈಕಮಾಂಡ್ ಆಯೋಜಿಸಿದ್ದ ಭೋಜನಕೂಟಕ್ಕೆ ಸಿದ್ದರಾಮಯ್ಯ ಗೈರಾಗಿ ಡಿಕೆ.ಶಿವಕುಮಾರ್ ಏಕಾಂಗಿಯಾಗಿ ಭಾಗಿಯಾಗಿರುವುದು ಹಲವು ಅನುಮಾನಗಳನ್ನು ಹುಟ್ಟು ಹಾಕಿದೆ!

ಕೆಲ ಮೂಲಗಳ ಪ್ರಕಾರ, 2023ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿ ಕಾರಕ್ಕೆ ಬಂದಾಗ ಸಿದ್ದು ಡಿಕೆ ನಡುವೆ ಅಧಿ ಕಾರ ಹಂಚಿಕೆ ಒಪ್ಪಂದವಾಗಿತ್ತು ಎನ್ನಲಾಗುತ್ತಿದೆ! ಆ ಒಪ್ಪಂದ ನಡೆದಿದ್ದರಿಂದಲೇ ಇಂದು ಸಿಎಂ ಹುದ್ದೆ ಬದಲಾವಣೆಯ ಬಗ್ಗೆ ಹೈಕಮಾಂಡ್ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ ಎನ್ನಲಾಗುತ್ತಿದೆ!! ಇನ್ನೊಂದು ಪ್ರಮುಖ ಅಂಶವೇನೆಂದರೆ, ಕಾಂಗ್ರೆಸ್ ಹೈಕಮ್ಯಾಂಡ್ ಬೇಕಂತಲೇ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಇಬ್ಬರಿಗೂ ಒಂದೇ ಬಾರಿಗೆ ಔತಣಕೂಟದಲ್ಲಿ ಅವಕಾಶ ನೀಡಿಲ್ಲವಂತೆ! ಬಹುಷಃ ಇಬ್ಬರನ್ನೂ ಪ್ರತ್ಯೇಕವಾಗಿ ಮಾತನಾಡಿಸಿ, ಇಬ್ಬರ ಹಿಂಬಾಲಕರ ಸಂಖ್ಯೆಯನ್ನು ಗಮನಿಸಿ ಅಂತಿಮ ನಿರ್ಧಾರ ಪ್ರಕಟಿಸುವ ಪ್ಲಾನ್ ನಡೆದಿರಬೇಕು....

### ಇಬ್ಬರ ಬಲ ಪ್ರದರ್ಶನ?!

ದೆಹಲಿಯಲ್ಲಿ ನಡೆದ ವೋಟ್ ಚೋರಿ ರ್‍ಯಾಲಿ ಹೆಸರಿಗಷ್ಟೇ, ಅದು ಬಿಜೆಪಿ ಮತಗಳ್ಳತನದ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಯೇ ಆಗಿದ್ದರೂ, ಒಂದು ರೀತಿಯಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ ಶಿವಕುಮಾರ್ ಅವರು ತಮ್ಮ ಬಲಾ ಬಲ ಪ್ರದರ್ಶಿಸುವ ವೇದಿಕೆಯಂತೆ ಕಂಡು ಬಂದಿದ್ದು ಸುಳ್ಳಲ್ಲ! ಡಿಕೆ. ಶಿವಕುಮಾರ್ ಅವರ ಮಾನಸ ಪುತ್ರ ಎಂದೇ ಬಣ್ಣಿಸಲ್ಪಡುವ ರಾಮನಗರದ ಶಾಸಕ ಇಕ್ಬಾಲ್ ಹುಸೇನ್ 2026 ಜನವರಿ 06ರಂದು ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ ಎಂಬುದಾಗಿ ಸ್ಫೋಟಕವಾಗಿ ಮಾಧ್ಯಮಗಳಿಗೆ ಹೇಳಿದ್ದರಲ್ಲ, ಈ ಹೇಳಿಕೆಯನ್ನಿಟ್ಟುಕೊಂಡು ಡಿಕೆ. ಶಿವಕುಮಾರ್ ಅವರ ಅನೇಕ ಬೆಂಬಲಿಗರು ಘೋಷಣೆಗಳನ್ನು ಕೂಗಿದ್ದರು. ಇದಕ್ಕೆ ಪ್ರತಿಯಾಗಿ ಸಿದ್ದರಾಮಯ್ಯನವರ ಬೆಂಬಲಿಗರು ಕೂಡ ಸಿಡಿದೆದ್ದು ಸಿದ್ದರಾಮಯ್ಯ ಅವರೇ ಐದು ವರ್ಷ ಅಧಿ ಕಾರ ಪೂರ್ಣಗೊಳಿಸುತ್ತಾರೆ... ಎಂಬ ಘೋಷಣೆ ಮೊಳಗಿಸಿದ್ದರು.

ಈ ನಡುವೆ,ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಇಕ್ಬಾಲ್ ಹುಸೇನ್ ಮತ್ತು ಸಿ.ಎಂ. ಪುತ್ರ, ಡಾ.ಯತೀಂದ್ರ, ಹೇಳಿಕೆಗಳು ಅಪ್ರಸ್ತುತ, ಹೈಕಮಾಂಡ್ ನಾಯಕತ್ವ ಬದಲಾವಣೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಹೇಳಿದ್ದರು! ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಅವರು ಇಕ್ಬಾಲ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಲು ನಿರಾಕರಿಸಿ, ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹೈಕಮಾಂಡ್ ನಾಯಕರು, ಪಕ್ಷದ ಸದಸ್ಯರ್‍ಯಾರು ನಾಯಕತ್ವ ಬದಲಾವಣೆಯ ಬಗ್ಗೆ ಮಾತನಾಡದಂತೆ ಸೂಚನೆ ನೀಡಿದ್ದಾರೆ ಎಂದು ಹೇಳಿದ್ದರು! ಇದೆಲ್ಲಾ ಗೊಜಲುಗಳ ನಡುವೆ ಸಿದ್ದರಾಮಯ್ಯ, ಡಿ.ಕೆ ಶಿವಕುಮಾರ್ ನಡುವೆ ಎರಡೆರಡು ಬ್ರೇಕ್ ಫಾಸ್ಟ್ ಮೀಟಿಂಗ್ ನಡೆದಿದ್ದವು! ಜೋಡೆತ್ತುಗಳು ಹೀಗೆ ಒಗ್ಗಟ್ಟು ಪ್ರದರ್ಶಿಸಿದರೂ ಇನ್ನೂ ಮುಗಿದಿಲ್ಲ ಕುರ್ಚಿ ಕದನ!!

### ದಿ ಲಾಸ್ಟ್ ಪಂಚ್...

ಒಂದು ಮೂಲದ ಪ್ರಕಾರ, ಬರೋ ಜನವರಿಯಲ್ಲಿ ಸಿದ್ದರಾಮಯ್ಯ ಕುರ್ಚಿ ಬಿಡೋದು ಖಚಿತವಂತೆ! ಜನವರಿ 26 ಡಿ.ಕೆ ಶಿವಕುಮಾರ್ ಪಟ್ಟಾಭಿಷೇಕ ಗ್ಯಾರಂಟಿಯಂತೆ!! ನಿಜಕ್ಕೂ ಇದು ನಿಜವಾಗುತ್ತ... ಅನ್ನೋದಕ್ಕೆ ಜನವರಿ ಕ್ರಾಂತಿ ಸಾಕ್ಷಿಯಾಗಲಿದೆ!!! ☯

# ಡಿಕೆಶಿ ವಿರುದ್ಧ ಜೆಡಿಎಸ್ ವಾಗ್ದಾಳಿ...

ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ವಿರುದ್ಧ ಜಾತ್ಯಾತೀತ ಜನತಾದಳ ಮತ್ತೆ ವಾಗ್ದಾಳಿ ಮುಂದುವರೆಸಿದ್ದು, ಕೂಡಲೇ ಅವರ ರಾಜಿನಾಮೆ ಪಡೆಯಬೇಕು ಎಂದು ಆಗ್ರಹಿಸಿದೆ. ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಶನ್ ಶನಿವಾರ ಆಯೋಜಿಸಿದ್ದ ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ಮಸೂದೆ 2025ರ ಸಾರ್ವಜನಿಕ ಸಂವಾದ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ನೀಡಿದ್ದ ಹೇಳಿಕೆಗಳನ್ನು ತೀವ್ರವಾಗಿ ವಿರೋಧಿಸಿರುವ ಜೆಡಿಎಸ್, ಇಂತಹವರು ಜನಪ್ರತಿನಿಧಿಯಾಗಿ ಮುಂದುವರೆಯಲು ನಾಲಾಯಕ್ ಎಂದು ಕಿಡಿಕಾರಿದೆ. ಈ ಕುರಿತು ಸರಣಿ ಟ್ವೀಟ್ ಮಾಡಿರುವ ಜೆಡಿಎಸ್, 'ಡಿ.ಕೆ. ಶಿವಕುಮಾರ್ ಅವರೇ, ನೀವು ಶಾಸಕರಾದರೇನು? ಮಂತ್ರಿಯಾದರೇನು? ಡಿಸಿಎಂ ಆದರೇನು? ನೀನೊಬ್ಬ ಮನುಷ್ಯ ಅಷ್ಟೇ! ಜನರಿಂದ ಆಯ್ಕೆಯಾದ ನೀವು, ಜನಸಾಮಾನ್ಯರ ಕಷ್ಟಕ್ಕೆ ಸ್ಪಂದಿಸಿ, ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು ನಿಮ್ಮ ಆದ್ಯ ಕರ್ತವ್ಯ. ಅದನ್ನು ಬಿಟ್ಟು ಪ್ರಶ್ನೆ ಮಾಡಿದವರಿಗೆ ಧಮ್ಕಿ, ಬೆದರಿಕೆ ಹಾಕುವುದು ಸಂವಿಧಾನದ ಪ್ರಕಾರ ಅಪರಾಧ! ನಾವು 80ರ ದಶಕದಲ್ಲಿ ಜೀವಿಸುತ್ತಿಲ್ಲ... ಎಂದು ವಾಗ್ದಾಳಿ ನಡೆಸಿದೆ.

ಅಂತೆಯೇ ಮುಂದುವರೆದು, 'ಡಿಕೆಶಿ ಅವರೇ, ನಿಮ್ಮ ಬಳಿ ದುಡ್ಡಿದ್ದರೆ, ಅದು ನಾಯಿ ಮೊಲೆ ಹಾಲಿದ್ದಂಗೆ... ಯಾರಿಗೂ ಪ್ರಯೋಜನವಿಲ್ಲ. ಅಧಿ ಕಾರದ ಮದ, ದಬ್ಬಾಳಿಕೆ ನೆತ್ತಿಗೇರಿದೆ. ಕೊತ್ವಾಲ್ ಶಿಷ್ಯನ ರೌಡಿಸಂ, ಗೂಂಡಾ ಪ್ರವೃತ್ತಿಗೆ ಕಡಿವಾಣ ಹಾಕದಿರುವುದು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ. ಇಂತಹವರು ಜನಪ್ರತಿನಿಧಿಯಾಗಿ ಮುಂದುವರಿಯಲು ನಾಲಾಯಕ್ಕು. ಸಂವಿಧಾನದ ರಕ್ಷಣೆ ಮಾಡುತ್ತೇವೆ ಎನ್ನುವ ಕಾಂಗ್ರೆಸ್ ಹೈಕಮಾಂಡ್ ಮತ್ತು ರಾಹುಲ್ ಗಾಂಧಿ ಮೊದಲು ಡಿಕೆಶಿಯಂತಹ ರೌಡಿ ರಾಜಕಾರಣಿಯ ರಾಜೀನಾಮೆ ಪಡೆದು, ಬಳಿಕ ದೇಶದ ಜನತೆಗೆ ಸಂವಿಧಾನದ ಬಗ್ಗೆ ಪಾಠ ಮಾಡುವುದು ಒಳಿತು ಎಂದು ಟ್ವೀಟ್ ಮಾಡಿದೆ!

ಜೆಡಿಎಸ್‌ನ ಮತ್ತೊಂದು ಟ್ವೀಟ್‌ನಲ್ಲಿ, 'ಹೌದು..ಮಿಸ್ಟರ್ ಧಮ್ಕಿ ಡಿಕೆಶಿ ಅವರೇ, ಆ ದಿನಗಳಲ್ಲಿ ನೀವು ಯಾರ ಜೊತೆ ಇದ್ದೀರಿ? ನಿಮ್ಮ ಹಿನ್ನೆಲೆ ಏನು? ಎಂಬುದು ಸಾಮಾನ್ಯ ಜನರಿಗೆ ಗೊತ್ತಿಲ್ಲ. ಉಪಮುಖ್ಯಮಂತ್ರಿಯಾಗಿ, ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿ ಬೀದಿರೌಡಿಯಂತೆ ವೇದಿಕೆಯಲ್ಲೇ ನಾಗರಿಕರಿಗೆ ಹೆದರಿಸುವುದು, ಬೆದರಿಸುವುದು ಜನಪ್ರತಿನಿಧಿಗಳಿಗೆ ಶೋಭೆ ತರುವುದಿಲ್ಲ.

ನಾವು ಪ್ರಜಾಪ್ರಭುತ್ವ ದೇಶದಲ್ಲಿದ್ದೇವೆ. ಜನಪ್ರತಿನಿಧಿಯನ್ನು ಪ್ರಶ್ನಿಸುವ ಹಕ್ಕು ಪ್ರತಿಯೊಬ್ಬ ಜನಸಾಮಾನ್ಯರಿಗೂ ಇದೆ. ಸಂವಿಧಾನ ರಕ್ಷಿಸುತ್ತೇವೆ ಎಂದು ಸಂವಿಧಾನ ಪುಸ್ತಕ ಹಿಡಿದರೇ ಸಾಲದು. ಈ ನಿಮ್ಮ ದರ್ಪ, ದುರಂಹಕಾರಕ್ಕೆ ಮತಹಾಕುವ ಜನರೇ ಬುದ್ಧಿ ಕಲಿಸುತ್ತಾರೆ' ಎಂದು ಟ್ವೀಟ್ ಮಾಡಿದೆ!! ☯

# ಮಾಗಡಿ ಪುರಸಭೆ ಗೋಲ್‌ಮಾಲ್ ಕಥೆಯಿದು!

ಮಾಗಡಿ

✍ ಖಂಡಪರಶು

ನಿಜಕ್ಕೂ ಜನಪ್ರತಿನಿಧಿಗಳು, ನಾಗರಿಕರು ನಾಚಿಕೆ ಪಟ್ಟು ವಿರೋಧಿಸಬೇಕಾದ ಕಥೆಯಿದು. ಕಲ್ಯಾಗೇಟ್ ಒಂದು ವಿಶೇಷ ಸರ್ಕಲ್ ಮಾಗಡಿ ಪಾಲಿಗೆ. ಈಗ ಬೆಂಗಳೂರು, ಮಾಗಡಿ ಹೆದ್ದಾರಿ, ಕುಣಿಗಲ್, ತಾಳೆಕೆರೆ, ಮಂಗಳೂರಿನ ಮಹತ್ವದ ರಸ್ತೆಯಾಗಿದೆ. ಅದರ ಜೊತೆಗೆ ಕೆಶಿಪ್ಪಿನ ಸೋಮವಾರಪೇಟೆಯ ರಸ್ತೆಯೂ ಆಗಿದೆ. ಈ ಕಡೆಯಿಂದ ರಾಮನಗರ-ಮೈಸೂರು ರಸ್ತೆಗೆ ನಂಟಿದೆ. ಎಡಕ್ಕೆ ದಾಬಸ್‌ಪೇಟೆಗೂ ಕೆಶಿಪ್ ರಸ್ತೆಯಿದೆ. ಈಗ ಈ ಸರ್ಕಲ್ ಪ್ರಾಮುಖ್ಯವಾದ ತಾಣವಾಗಿದೆ. ಇಂತಹ ಕಡೆ ಒಂದು ನಿವೇಶನ ಗೋಲ್‌ಮಾಲ್‌ಗೆ ಕಾರಣವಾಗಿರುವುದನ್ನು ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಮಾಡಬಾಳ್ ಸಿ.ಜಯರಾಂ ಇದರ ವಿರುದ್ಧ ಹೋರಾಟ ನಡೆಸಿದ್ದಾರೆ ಅದರ ಬಗ್ಗೆ ಈ ಒಂದು ವರದಿ.

ಸಾಮಾಜಿಕ ಕಾರ್ಯಕರ್ತ ಸಿ. ಜಯರಾಂ ಈತ ಇಂದಿಗೂ ಜಿಲ್ಲಾ ರಾಜ್ಯಮಟ್ಟದ ದಲಿತ ಮುಖಂಡರ ಹೀರೋ ಎಂದೇ ತಿಳಿಯಬೇಕು. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಎಲ್ಲಾ ಪಕ್ಷದಲ್ಲಿಯೂ ಈತನಿಗೆ ವಿಶೇಷ ಗೌರವವಿದೆ. ತಾಲೂಕಿನ ಅನೇಕರು ರಾಜಕಾರಣಿಗಳ ಚಮಚಾಗಳ ತರಹ ಹಿಂಬಾಲಕರಾದರೆ ಇವರು ದಲಿತರ ವಿರುದ್ಧ ಯಾವುದೇ ಪಕ್ಷದ ರಾಜಕಾರಣಿ ದಬ್ಬಾಳಿಕೆ ಮಾಡಿದಾಗ ಅದನ್ನು ವಿರೋಧಿಸಿ ನಿಲ್ಲುವ ಛಾತಿಯುಳ್ಳವರು. ಅದರಿಂದೆ ಎಲ್ಲಾ ಪಕ್ಷದವರು ಇವರನ್ನು ಗೌರವಿಸುತ್ತಾರೆ ಎಂಬ ಮಾತನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಅವರು ಏನೆ ಮಾಡಲಿ ಮಾಡಬಾಳ್ ತಮ್ಮ ಗ್ರಾಮದ ಒಲವು ಇಟ್ಟುಕೊಂಡವರು ಟೌನಿನಲ್ಲಿ ವಾಸಿಸುತ್ತಾ ತಾಲೂಕಿನ ದಲಿತ ಸಮುದಾಯದ ಪರವಾಗಿ ಶ್ರಮಿಸುವ ವಿಶೇಷ ವ್ಯಕ್ತಿತ್ವದವರು. ತಾಲೂಕಿನ ಯಾವುದೇ ಊರಿಗೆ ಹೋದರೂ ಇವರನ್ನು ಗುರುತಿಸಿ ಮಾತನಾಡುವವರ ಸಂಖ್ಯೆ ಅಪಾರ. ಇವರು ತಮಗಾಗಿ ಹೋರಾಟ ಮಾಡಿದವರಲ್ಲ. ಸಾರ್ವತ್ರಿಕವಾಗಿ ನಿತ್ಯ ಹೋರಾಟ ಮಾಡುತ್ತಿರುವವರು. ಅವರು ಇಂದು ಕಲ್ಯಾಗೇಟಿನ ಮಹತ್ವದ ಒಂದು ಸ್ಥಳ ಮತ್ತು ನಿವೇಶನದ ರಕ್ಷಣೆಗೆ ಬಗ್ಗೆ ಪತ್ರ ಹೋರಾಟ ಮಾಡಿ ಅದರ ಬಗ್ಗೆ ಮಾಹಿತಿ ಕಲೆ ಹಾಕಿರುವವರು ಅದು ಇಲ್ಲಿನ ವಿಶೇಷ.

### ಕಲ್ಯಾಗೇಟ್ ಪಟ್ಟಣದ ಪ್ರಮುಖ ಸರ್ಕಲ್

ಇಲ್ಲಿ ಒಂದು ಸೈಟಿನ ಬೆಲೆ ಕೋಟಿಗಳನ್ನು ದಾಟುತ್ತದೆ. ಈಗ ರಸ್ತೆ ಮಗ್ಗುಲ ಸೈಟಿನ ಬೆಲೆ ಎಷ್ಟಿರಬಹುದು ಎಂದು ನೀವೇ ಊಹಿಸಿ. ಅಂತಹ ಸ್ಥಳದಲ್ಲಿ ನಿರ್ಮಲ ಟಾಕೀಸಿನ ಪಶ್ಚಿಮಕ್ಕೆ, ವಕ್ಫ್‌ಗೆ ಸೇರಿದ ಖಾಲಿ ಜಾಗ, ದುರ್ಗಾ ವೈನ್ಸ್ , ವಾಸವಿ ಶಾಲಾ ರಸ್ತೆ, ಉತ್ತರಕ್ಕೆ ಕುಣಿಗಲ್ ಕೆಸಿಪ್ ರಸ್ತೆ. ದಕಿಣಕ್ಕೆ ಎಂ.ಡಿ. ನಟರಾಜ್ ಮನೆ ಇದರ ನಡುವೆ ಇರುವ ಖಾಲಿ ಜಾಗ ಇದರ ಮಹತ್ವ ಇವರಿಗೆ ಗೊತ್ತಿಲ್ಲ.



ಇಲ್ಲಿ ಒಂದು ಕಲ್ಲುಬಾವಿ ಅಂದರೆ ಹಗ್ಗಬಿಟ್ಟು ನೀರು ಸೇದುವ ಬಾವಿ, ಜೊತೆಗೆ ಕಲ್ಲುಮಂಟಪವಿತ್ತು.ಇದು ಪಟ್ಟಣಿಗರು ಮಾತ್ರವಲ್ಲ, ಸುತ್ತಲ ಜನರ ಪವಿತ್ರ ಸ್ಥಳವಾಗಿತ್ತು. ಕಾರಣ ತಿರುಪತಿಗೆ ಹೋಗಿ ಬಂದ ಗ್ರಾಮೀಣ ತಿಮ್ಮಪ್ಪನ ಭಕ್ತರು ಇಲ್ಲಿ ತಂಗಿದ್ದು ಬೆಳಗ್ಗೆ ಎದ್ದು ಬಾವಿಯ ನೀರನ್ನು ಬಿಂದಿಗೆಯಲ್ಲಿ ಸೇದಿ ಸ್ನಾನ ಮಾಡಿ ಮಡಿಯುಟ್ಟು ಎದಿರು ಸೇವೆ ಮಾಡಿ ನಂತರ ಮನೆಗೆ ತೆರಳುವ ಸ್ಥಳ. ಇಂತಹ ಸ್ಥಳ ಪಾಳು ಬೀಳದಿರಲಿ ಎಂದು ಕುಲುಮೆ ಕುಶಲ ಕಾರ್ಮಿಕರ ಸಂಘಕ್ಕೆ ಸರಕಾರ ಮಂಜೂರು ಮಾಡಿತ್ತು. ಈಗ ಇದು ಸರಕಾರಿ ಜಮೀನಾದರು ಖಾಸಗಿಯವರ ಕೈಗೆ ತಲುಪಿಸುವ ಕೆಲಸ ಮಾಡುತ್ತಿರುವುದು ಇದೊಂದು ದೊಡ್ಡ ಮೋಸದ ಕೆಲಸ ಎಂದು ಮಾಡಬಾಳ್ ಸಿ.ಜಯರಾಂ ಪುರಸಭೆಗೆ ಮತ್ತು ಲೋಕಾಯುಕ್ತಕ್ಕೆ ಲಿಖಿತ ಮನವಿ ಸಲ್ಲಿಸಿದರು. ಇದರ ಬಗ್ಗೆ ಪುರಸಭೆ ಮೌನವಹಿಸಿರುವುದು ಬಹುದೊಡ್ಡ ಗೋಲ್‌ಮಾಲ್ ಎಂಬುದು ಅವರ ಆರೋಪ.



ಮಾಗಡಿ ಕಲ್ಯಾಗೇಟಿನಲ್ಲಿ ಅಕ್ರಮವಾಗಿ ಯಾತ್ರಿಕರ ತಂಗುದಾಣ ಕಲ್ಲುಬಾವಿಯ ಮುಚ್ಚಿ ಕಟ್ಟಡ ಕಟ್ಟುತ್ತಿರುವುದು

### ಪುರಸಭಾಧಿಕಾರಿಗಳು ಸಿಬ್ಬಂದಿ ಗೋಲ್‌ಮಾಲ್ ಪರ?

ಇದು ಪುರಸಭಾ ಸರಕಾರಿ ಜಮೀನು. ಭಾರಿ ಹಿಂದೆ ಈ ಸ್ಥಳ ಯಾತ್ರಿಕರ ತಂಗುದಾಣವಾಗಿ ಅಲ್ಲಿ ಭಾವಿಯ ನೀರನ್ನು ಬಳಸುತಿದ್ದರು ಎಂಬುದು ಖಚಿತ. ಅಲ್ಲಿ ಕುಲುಮೆ ಕಾರ್ಮಿಕರು ಸುತ್ತಲ ಗ್ರಾಮಗಳಿಂದ ರೈತರ ಉಪಯೋಗಿ ಸಲಕರಣೆ ಮಾಡಿಕೊಡುವ ಒಂದು ಸಂಘವಿತ್ತು. ಅದಕ್ಕೆ ಅಂದಿನ ಶಾಸಕರು ಎಚ್.ಜಿ. ಚನ್ನಪ್ಪ ಆ ಸಂಘಕ್ಕೆ ಗೌರವಾಧ್ಯಕ್ಷರಾಗಿದ್ದರು. ಅವರ ಹೆಸರಿಗೆ ಅಲ್ಲಿ ಒಂದು ನಿವೇಶನ ಸಂಘದ ಹೆಸರಲ್ಲಿ ರೂಪಿತವಾಯಿತು. ಅವರ ಮರಣಾನಂತರ, ಜೊತೆಗೆ ಕುಲುಮೆ ಸಂಘ ಕಾಣದಾಯಿತು. ನಂತರ ಬಂದ ಶಾಸಕರಾದ ಬಾಲಕೃಷ್ಣ ಅವರ ತಂದೆಯ ಹೆಸರಿಗೆ ಕೊಟ್ಟಿದ್ದ ನಿವೇಶನವನ್ನು ತಾಯಿಯ ಹೆಸರಿಗೆ ಮಾಡಿಸಿದರು. ಕ್ರಮೇಣ ತಾಯಿ ಓಡಾಡಲು ಕಷ್ಟವೆಂದರಿತು ಪತ್ನಿಯ ಹೆಸರಿಗೆ ಮಾಡಿಸಿ 60X30 ಅಡಿ ನಿವೇಶನ ಲಾಯರ್ ಸುರೇಶ್‌ರವರ ಪತ್ನಿಯು ಹೆಸರಿಗೆ ಬಿಕರಿಯಾಗುತ್ತದೆ. ಅದು ಈಗ ಪುರಸಭಾ ಸದಸ್ಯ ರೂಪೇಶ್ ಮುಂದೆ ನಿಂತು ಅಂಬಿಕಾ ಹಾಲ್‌ನ ಸಾಯಿರಾಂ ನೀಲಕಂಠಶೆಟ್ಟಿಯವರಿಗೆ 900 ಅಡಿಯ ಬದಲು 1700 ಅಡಿ ಸದರಿ ಜಾಗವನ್ನು ಪರಭಾರೆ ಮಾಡಿಸಿ ಪುರಸಭೆಯ ಅಧಿಕಾರಿಗಳಿಂದ ಖಾತೆ ಮಾಡಿಸಿಕೊಡುತ್ತಾರೆ. ಇದು ನೇರವಾಗಿ ಮಾಡಬಾಳ್ ಸಿ. ಜಯರಾಂ ಪುರಸಭಾ ಅಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಲಿಖಿತ ಸಾರ್ವಜನಿಕ ಹಿತಾಸಕ್ತಿ ದೂರನ್ನು ನೀಡುತ್ತಾರೆ. ದೂರು ನೀಡಿ ಒಂದು ತಿಂಗಳಾದರೂ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡದ ಪುರಸಭಾ ಸಿಬ್ಬಂದಿಯ ಜೊತೆ ಮಾಡಿದ ಸಂಭಾಷಣೆ, ಲಿಖಿತ ಸಾಮಾಜಿಕ ಜಾಲತಾಣಗಳ ವಿವರಗಳು ನಮ್ಮ ಬಳಿ ಮಜಬೂತಾಗಿವೆ ಈ ಬಗ್ಗೆ ಕ್ರಮ ಜರುಗಿಸಬೇಕು.ಇಲ್ಲವಾದರೆ ಕಟ್ಟಡ ಕಾರ್ಯವನ್ನು ನಿಲ್ಲಿಸಬೇಕು, ತನಿಖೆ ನಡೆದ ನಂತರ ಒಂದು ತೀರ್ಪು ಬರುತ್ತದೆ ಆಗ ಏನು ಬೇಕಾದರೂ ನಡೆಯಲಿ ಎಂಬುದು ಜಯರಾಂ ಹೋರಾಟದ ಮಾತು.

### ಕೊನೆ ಕರಣೆಗೆಯ ಕೆಲಸ

ಮಾಗಡಿ ಪಟ್ಟಣದ ಪುರಸಭೆ ವ್ಯಾಪ್ತಿಯ ಎಲ್ಲಾ ವಾರ್ಡಿನ ಅನಧಿಕೃತ ಕಟ್ಟಡಗಳ ತಪಾಸಣೆಗೆ ಜಿಲ್ಲಾಧಿಕಾರಿಗಳು ಪುರಸಭೆಗೆ ಆದೇಶ ಮಾಡಬೇಕು. ನಂತರ ಇಂತಹ ಪ್ರಕರಣಗಳಲ್ಲಿ ತಪ್ಪಿಸ್ಥರು ಯಾರೇ ಇರಲಿ ಅವರ ಮೇಲೆ ಕ್ರಮ ಜರುಗಿಸಬೇಕು. ಇದರ ಬಗ್ಗೆ ಶಾಸಕರು ಮತ್ತು ಸರಕಾರ ಮುಂದಾಗುವರೆ ಎಂಬುದು ಇಲ್ಲಿನ ಪ್ರಶ್ನೆ? ಕಾದು ನೋಡೋಣ ಇವರ ಅಸಲಿಯತ್ತು.

# ಮಾಗಡಿ ಬಿಇಓ ಕಚೇರಿಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ!

**ಮಾಗಡಿ ಬಿಇಓ ಕಚೇರಿಯ ಗುಮಾಸ್ತ ಸಂತೋಷ್‌ರಿಗೆ ಮೃತ ಶಿಕ್ಷಕ ಬಿಟ್ಟಸಂದ್ರ ಬಸವರಾಜು ರವರ ಪತ್ನಿ ಪುಟ್ಟಗೌರಮ್ಮ ಮತ್ತು ಮಗ ಚೇತನ್ ಗುಮಾಸ್ತರನ್ನು ವಾಚಾಮಗೋಚರ ಬೆವರು ಇಳಿಸಿದ ಘಟನೆ ನಡೆಯಿತು. ಅದರ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರದಲ್ಲಿದೆ ಅದರ ಕುರಿತು ವಿವರವಾದ ವರದಿ ಇಲ್ಲಿದೆ.**

ಗುಮಾಸ್ತ ಸಂತೋಷ್ ಯಾರು?

ಈತನ ತಂದೆ ಮರಣಾನಂತರ ಅನುಕಂಪದ ಆಧಾರದ ಮೇಲೆ ಮೂರುವರ್ಷಗಳ ಹಿಂದೆ ವೃತ್ತಿಗೆ ಬಂದವರು. ಮೂಲ ಚಿತ್ರದುರ್ಗದವರು. ಇಂದು ಮಾಗಡಿ ಬಿಇಓ ಕಚೇರಿಯ ಗುಮಾಸ್ತರಾಗಿ ಕಾರ್ಯ ನಿರ್ವಹಣೆ ಮಾಡುತ್ತಿರುವರು. ತಾಲೂಕಿನ ಶಿಕ್ಷಕ ಅನಾರೋಗ್ಯದಿಂದ ಮರಣಿಸಿದ ಶಿಕ್ಷಕರ ಸಂಘದ ನಿರ್ದೇಶಕರಾಗಿದ್ದ ಆರ್.ಎಸ್. ಬಸವರಾಜು ನಿವೃತ್ತಿಯ ನಂತರ ಮೂರು ದಿನಗಳಲ್ಲಿ ಸಾವನ್ನಪ್ಪುತ್ತಾರೆ. ಅವರ ಮಗ ಚೇತನ್, ತಾಯಿ ಪುಟ್ಟಗೌರಮ್ಮ ಪಿಂಚಣಿ ವಿಚಾರವಾಗಿ ಬಿಇಓ ಕಚೇರಿಯ ಕೇಸ್ ವರ್ಕರ್ ಸಂತೋಷ್ ಬಳಿ ಬಂದು ಮಾತನಾಡುತ್ತಾರೆ. ಅದರ ಕೆಲಸ ಮಾಡಲು 25 ಸಾವಿರ ಲಂಚದ ಬೇಡಿಕೆ ಇಡುತ್ತಾರೆ. ಅದರಲ್ಲಿ 13 ಸಾವಿರ ಹಣವನ್ನು ಮುಂಗಡವಾಗಿ ಸದರಿ ಗುಮಾಸ್ತರಿಗೆ ಫೋನ್‌ಪೇ ಮೂಲಕ ಸಲ್ಲಿಸುತ್ತಾರೆ. ಇವರು ಕೆಆರ್‌ಎಸ್ ಪಕ್ಷದ ಸಹಯೋಗದಲ್ಲಿರುವವರು ಎಂಬ ಮಾಹಿತಿಯನ್ನು ತಿಳಿದು 10 ಸಾವಿರ ರೂ.ಗಳನ್ನು ಫೋನ್‌ಪೇ ಮೂಲಕ ಹಿಂತಿರುಗಿಸುತ್ತಾರೆ. ಉಳಿದ ಹಣ 3 ಸಾವಿರವನ್ನು ಹಾಗೆಯೇ ಇರಿಸಿಕೊಂಡು ತನಗೆ, ಸೂಪರಿಂಟೆಂಡೆಂಟ್ ಮತ್ತು ಮೇನೇಜರ್ ಅವರಿಗೆ ತಲಾ ಒಂದೊಂದು ಸಾವಿರ ಹಂಚಿಕೊಂಡಿರುವುದಾಗಿ ತಿಳಿಸಿದ್ದಾರೆ. ಅದಕ್ಕೆ ಡಿಸೆಂಬರ್ 5 ಮಧ್ಯಾಹ್ನ ಕೆಆರ್‌ಎಸ್ ಪಕ್ಷದ ಜಿಲ್ಲಾ ಪ್ರಧಾನಕಾರ್ಯದರ್ಶಿ ಚಂದ್ರಶೇಖರ್, ಸಹಕಾರ್ಯದರ್ಶಿ ಕೆ.ಟಿ.ಎನ್. ಮೂರ್ತಿ ಕುದೂರು, ಜಿಲ್ಲಾಧ್ಯಕ್ಷ ಗಂಗಾಧರ್ ಕಚೇರಿಯಲ್ಲಿಯೇ ತರಾಟೆಗೆ ತೆಗೆದುಕೊಳ್ಳುತ್ತಾರೆ.

ಏನೀ ಲಂಚಗುಳಿತನ...



ಲಂಚ ಪಡೆದು ಹಣ ಹಿಂತಿರುಗಿಸಿದ ಆರೋಪಿ ಸಂತೋಷ್

ಸಂತೋಷ್ ಬಿಇಓರವರ ಲಂಚದ ಮಧ್ಯವರ್ತಿ ಎಂಬುದರ ಬಗ್ಗೆ ಅನೇಕ ಶಿಕ್ಷಕರು ತೆರೆಯ ಮರೆಯಲ್ಲಿ ಹೇಳುತ್ತಾರೆ. ಈ ಕೇಸ್ ವರ್ಕರ್ ಬಳಿಯೆ ನಮ್ಮ ಶಿಕ್ಷಕರು ಕೈಕಟ್ಟಿಕೊಂಡು ಗೋಗರೆಯುವುದನ್ನು ನೋಡಬೇಕು.ಅಯ್ಯೋ ಎನಿಸುತ್ತದೆ. ಕರುಣೆಯೆ ಇಲ್ಲದ ಈ ಗುಮಾಸ್ತರು ಕೀಚಕರಂತೆ ವರ್ತಿಸುತ್ತಾರೆ. ಹಣ ಪೀಕುವುದೆ ಇವರ ಕೆಲಸ ಅವರನ್ನು ಏನು ಸರ್ ಮೂವತ್ತು ವರ್ಷ ನಿರಂತರ ಸೇವೆ ಸಲ್ಲಿಸಿದ ನಮ್ಮ ನಿವೃತ್ತಿ ದಾಖಲೆಯನ್ನು ಸರಿಪಡಿಸಿ ಮಾಡುವುದು ನಿಮ್ಮ ಕೆಲಸ. ನಮ್ಮ ಹಾಗೆ ನಿಮಗೂ ಸರಕಾರ ಸಂಬಳ ಕೊಡುತ್ತದೆ. ಇಲ್ಲಿ ನೀವು ನೋಡಿದರೆ ನಮ್ಮಿಂದಲೆ ನಿಮ್ಮ ಸಂಸಾರ ನಡೆಸುವ ರೀತಿಯಲ್ಲಿ ಲಂಚ ಬಾಕತನ ಮಾಡುತ್ತಿರುವಿರಿ ಎಂದರೆ? ನಾವು ತಾನೆ ಏನು ಮಾಡೋಣ ಸರ್ ಲಂಚ ಕೊಟ್ಟು ಬಿಇಓ ಬಂದಿರುತ್ತಾರೆ. ಅವರಿಗೂ ಹಣ ಕೊಡಬೇಕು, ನಮ್ಮ ಮೇಲಿನ ಅಧಿಕಾರಿಗಳಿಗೂ ಫೈಲಿಗೆ ಸಹಿ ಹಾಕಲು ಹಣ ಕೊಡಬೇಕು.ಇವರುಗಳು ಶಾಸಕರಿಗೂ ಹಣ ಕೊಟ್ಟು ಬಂದಿರುತ್ತಾರೆ.ಅದರ ವಿವರಣೆ ನೀಡಿ

☞10






# ಬುರುಡೆ ಷಡ್ಯಂತ್ರಕ್ಕೆ ಬಲಿಯಾದರಾ ಚುಂಚಶ್ರೀ?

**ದಕ್ಷಿಣ ಕನ್ನಡ**

**✍ ಮೋಹನ್ ಬೋಳಂಗಡಿ**

**ರಾಜ್ಯದ ಅತ್ಯಂತ ಪ್ರಭಾವಿ ಸಮುದಾಯ ಗೌಡರ ಯಾನೆ ಒಕ್ಕಲಿಗರದ್ದು. ಈ ಸಮುದಾಯದ ಪೀಠಾಧಿಪತಿ ಸ್ವಾಮೀ ನಿರ್ಮಲಾನಂದ ಸ್ವಾಮೀಜಿಗಳು. ಹಾಸನ ಜಿಲ್ಲೆಯ ಆದಿ ಚುಂಚನಗಿರಿಯಲ್ಲಿ ಮೂಲ ಮಠ ಇದ್ದರೆ ಬೆಂಗಳೂರಿನ ವಿಜಯನಗರದಲ್ಲಿ ಶಾಖಾ ಮಠ ಇದೆ. ಸ್ವಾಮೀಜಿಗಳ ಭೇಟಿಗೆ ದಿನನಿತ್ಯ ಸಾವಿರಾರು ಮಂದಿ ಭಕ್ತರು ಬರುತ್ತಿರುತ್ತಾರೆ. ವಿವಿಧ ಸಮಸ್ಯೆಗಳನ್ನು ಹೊತ್ತುಕೊಂಡು ಬರುವವರೂ ಇದ್ದಾರೆ. ಅವರಿಗೆಲ್ಲರಿಗೂ ಅಭಯ ನೀಡುವ ನಿರ್ಮಲಾನಂದ ಸ್ವಾಮೀಜಿಗಳು ತನ್ನ ಹೆಸರಿನಂತೆ ನಿರ್ಮಲ ಚಿತ್ತರು. ಇಂತಹ ಸ್ವಾಮೀಜಿಯವರನ್ನು ಶ್ರೀ ಕ್ಷೇತ್ರ, ಧರ್ಮಸ್ಥಳದ ವಿರುದ್ಧ ಎತ್ತಿಕಟ್ಟಲು ಬುರುಡೆ ಗ್ಯಾಂಗ್ ಮಾಡಿದಂತಹ ಷಡ್ಯಂತ್ರ ಇದೀಗ ಬಯಲಾಗಿದೆ.**

2022ರಲ್ಲಿ ಉಜಿರೆಯಲ್ಲಿ ನೈರ್ಮಲ್ಯ ಕಾರ್ಮಿಕನಾಗಿದ್ದ ಚೆನ್ನ ಯಾನೆ ಚಿನ್ನಯ್ಯ ಎಂಬ ಮಂಡ್ಯ ಮೂಲದವ 2012ರಲ್ಲಿ ಹತ್ಯೆಗೀಡಾಗಿದ್ದ ಸೌಜನ್ಯಳ ಮಾವ ವಿಠಲಗೌಡನಿಗೆ ಸಿಕ್ಕಿದ್ದ. ಆಗ ವಿಠಲಗೌಡ ಪರಿಚಯ ಹೇಳಿ ಗುರುತು ಖಚಿತಪಡಿಸಿಕೊಂಡಿದ್ದ. ಅದಕ್ಕಿಂತ ಹಿಂದೆ ವಿಠಲಗೌಡನಿಗೆ ನೇತ್ರಾವತಿ ಸ್ನಾನ ಘಟ್ಟದ ಬಳಿ ಹೊಟೇಲು ಇತ್ತು. ಚಿನ್ನಯ್ಯ ಯಾನೆ ಚೆನ್ನ ಆ ಪರಿಸರದಲ್ಲಿ ನೈರ್ಮಲ್ಯ ಕಾರ್ಮಿಕನಾಗಿದ್ದ. ನೇತ್ರಾವತಿಯಲ್ಲಿ ಮುಳುಗಿ ಮೃತಪಟ್ಟ, ತೇಲಿ ಬಂದ ಶವಗಳನ್ನು ನದಿಯಿಂದ ಮೇಲೆತ್ತುತ್ತಿದ್ದ ತಂಡದಲ್ಲಿ ಇದ್ದವ. ಕಾನೂನು ಪ್ರಕ್ರಿಯೆಗಳು ಮುಗಿದ ಬಳಿಕ ಸ್ಥಳೀಯ ಧರ್ಮಸ್ಥಳ ಗ್ರಾಮ ಪಂಚಾಯತ್‌ನ ಸೂಚನೆಯಂತೆ ಅಪರಿಚಿತ ಮೃತದೇಹಗಳನ್ನು ಹೂತು ಹಾಕುವ ಕೆಲಸವನ್ನು ಮಾಡುತ್ತಿದ್ದ. ಈ ವಿಚಾರ ವಿಠಲಗೌಡನಿಗೆ ಗೊತ್ತಿತ್ತು. ಸ್ವತಃ ವಿಠಲಗೌಡನೇ ತನ್ನ ಹೊಟೇಲಿನಲ್ಲಿ ಕೆಲಸ ಮಾಡುತ್ತಿದ್ದ ಕೇರಳ ಮೂಲದ ನರಸಿಂಹ ಎಂಬಾತನನ್ನು ಕೊಲೆಗೈದು ಹೊಟೇಲ್‌ನ ಹಿಂಬದಿಯ ಗುಡ್ಡದಲ್ಲಿ ಚೆನ್ನಯ್ಯನ ಸಹಾಯದಿಂದಲೇ ಹೂತು ಹಾಕಿದ್ದ. ಆದ್ದರಿಂದ ಅವರಿಬ್ಬರಿಗೆ ಪರಸ್ಪರ ಪರಿಚಯವಿತ್ತು. 2014ರಲ್ಲಿ ಚೆನ್ನಯ್ಯ ಯಾತ್ರಾರ್ಥಿಗಳ ಕಾರಿನಿಂದ


ಮಹೇಶ್ ಶೆಟ್ಟಿ ತಿಮರೋಡಿ


ಚೆನ್ನಯ್ಯ

ಬ್ಯಾಗ್ ಕದ್ದು ಅದನ್ನು ವಿಠಲನ ಹೊಟೇಲ್‌ನಲ್ಲಿ ಇಟ್ಟಿದ್ದ. ಯಾತ್ರಾರ್ಥಿಗಳು ಪೊಲೀಸರಿಗೆ ದೂರು ನೀಡಿದ್ದರು. ಪೊಲೀಸರು ಬಂದು ವಿಚಾರಣೆ ನಡೆಸಿದಾಗ ಬ್ಯಾಗ್ ವಿಠಲನ ಹೊಟೇಲ್‌ನಲ್ಲಿ ಪತ್ತೆಯಾಗಿತ್ತು. ಈ ಸಂಬಂಧ ದೂರು ನೀಡಲು ಯಾತ್ರಾರ್ಥಿಗಳು ನಿರಾಕರಿಸಿದ್ದ ಕಾರಣದಿಂದಾಗಿ ಕೇಸು ದಾಖಲಾಗಲಿಲ್ಲ. ಈ ಮಾಹಿತಿ ಶ್ರೀ ಕ್ಷೇತ್ರ ಧರ್ಮಸ್ಥಳದ ಮಾಹಿತಿ ಕೇಂದ್ರಕ್ಕೆ ತಿಳಿದು ಅವರು ಚೆನ್ನಯ್ಯನನ್ನು ಕರೆಸಿ ಆತನ ಸಂಬಳ ಚುಕ್ತಾ ಮಾಡಿ ಕೆಲಸದಿಂದ ವಜಾ ಮಾಡಿದ್ದರು. ತದನಂತರ ಚೆನ್ನಯ್ಯ ತನ್ನ ಊರಾದ ಮಂಡ್ಯಕ್ಕೆ ಹೋಗಿದ್ದ. ಆತನ ಸಹೋದರಿ ರತ್ನಾ, ಸಹೋದರ ತಾನಾಸಿ ಉಜಿರೆಯಲ್ಲಿ ಪಂಚಾಯತ್‌ನ ನೈರ್ಮಲ್ಯ ಕಾರ್ಮಿಕರಾಗಿ ಮುಂದುವರಿದಿದ್ದರು.

2021ರಲ್ಲಿ ಉಜಿರೆ ಪಂಚಾಯತ್‌ನ ನೈರ್ಮಲ್ಯ ವಿಭಾಗದ ಗುತ್ತಿಗೆದಾರರೊಬ್ಬರಿಗೆ ನೈರ್ಮಲ್ಯ ಕೆಲಸಗಾರನ ಅಗತ್ಯ ಇತ್ತು. ಏಕೆಂದರೆ ಉಜಿರೆ ಬಸ್‌ಸ್ಟ್ಯಾಂಡ್ ಪಕ್ಕದಲ್ಲಿದ್ದ ಸಾರ್ವಜನಿಕ ಶೌಚಾಲಯವನ್ನು ಪಂಚಾಯತ್‌ನವರು ದುರಸ್ತಿಗೊಳಿಸಿ ಅದರ ನಿರ್ವಹಣೆಯನ್ನು ನೈರ್ಮಲ್ಯ ವಿಭಾಗದ ಗುತ್ತಿಗೆದಾರರಿಗೆ ವಹಿಸಿದ್ದರು. ಶೌಚಾಲಯವನ್ನು ನಿರ್ವಹಣೆ ಮಾಡಲು ನೈರ್ಮಲ್ಯ ಕಾರ್ಮಿಕರನ್ನು ಹುಡುಕಾಟ ನಡೆಸುತ್ತಿದ್ದಾಗ ರತ್ನಾ ಊರಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಂಡಿದ್ದ ಚೆನ್ನಯ್ಯನನ್ನು ದೂರವಾಣಿ ಕರೆ ಮಾಡಿ ಕರೆಸಿಕೊಂಡಿದ್ದಳು. ಈ ಸಂದರ್ಭದಲ್ಲಿ ಚೆನ್ನಯ್ಯ ಸೌಜನ್ಯ ಮಾವ ವಿಠಲಗೌಡನಿಗೆ ಸಿಕ್ಕಿದ್ದ. ಆತ ಚೆನ್ನಯ್ಯನನ್ನು ಮಹೇಶ್ ಶೆಟ್ಟಿ ತಿಮರೋಡಿಯ ಮನೆಗೆ ಕರೆದುಕೊಂಡು ಹೋಗಿ ಪರಿಚಯ ಮಾಡಿಸಿದ್ದ. ಆ ಸಂದರ್ಭದಲ್ಲಿ ತಿಮರೋಡಿ ಚೆನ್ನಯ್ಯನೊಂದಿಗೆ ಧರ್ಮಸ್ಥಳ ಸ್ನಾನ ಘಟ್ಟದ ಸುತ್ತಮುತ್ತ ಹೂತು ಹಾಕಿದ್ದಂತಹ ಹೆಣಗಳ ಲೆಕ್ಕ ಕೇಳಿದ್ದ. ಎಲ್ಲಿ ಹೂತು ಹಾಕಿದ್ದೆ ಎನ್ನುವ ಬಗ್ಗೆಯೂ ವಿಚಾರಿಸಿದ್ದ. ಚೆನ್ನಯ್ಯ ಸ್ವಲ್ಪ ಉತ್ಪ್ರೇಕ್ಷೆಯ ಉತ್ತರ ನೀಡಿದ್ದ. ನೂರಾರು ಹೆಣ್ಣುಮಕ್ಕಳ ಮೃತದೇಹಗಳನ್ನು ಅತ್ಯಾಚಾರಕ್ಕೊಳಗಾದ ಸ್ಥಿತಿಯಲ್ಲಿ ಹೂತು ಹಾಕಿರುವುದಾಗಿಯೂ ಶಾಲಾ ಬಾಲಕಿಯ ಮೃತದೇಹವನ್ನು ಆಕೆಯ ಯೂನಿಫಾರ್ಮ್ ಸ್ಕೂಲ್ ಬ್ಯಾಗ್ ಸಹಿತ ಹೂತು ಹಾಕಿರುವುದಾಗಿಯೂ ತಿಳಿಸಿದ್ದ. ಈ ಎಲ್ಲಾ ಸ್ಥಳಗಳನ್ನು ಈಗಲೂ ಗುರುತಿಸಬಲ್ಲೆ ಎಂದು ಭರವಸೆ ನೀಡಿದ್ದ. ಈತನ ಮಾತನ್ನು ನಂಬಿದ ಮಹೇಶ್ ಶೆಟ್ಟಿ ತಿಮರೋಡಿ ತನ್ನೊಂದಿಗಿದ್ದಂತಹ ಗಿರೀಶ್ ಮಟ್ಟಣ್ಣನವರ್, ಜಯಂತ್ ಟಿ., ವಿಠಲಗೌಡರೊಂದಿಗೆ ಚರ್ಚೆ ನಡೆಸಿ ಬುರುಡೆ ಪ್ಲ್ಯಾನ್ ಸಿದ್ಧಪಡಿಸಿದ್ದರು ಅಲ್ಲದೇ ಚೆನ್ನಯ್ಯನಿಗೆ ದುಡ್ಡು ಕೊಟ್ಟು ಊರಿಗೆ ಕಳುಹಿಸಿದರು. ಮತ್ತು ಆತನೊಂದಿಗೆ ನಿರಂತರ ಸಂಪರ್ಕದಲ್ಲಿ ಇದ್ದರು. ಯಾವ ಸಂದರ್ಭದಲ್ಲಿ ಕರೆದರೂ ಬರಬೇಕು ಎಂದು ಸೂಚನೆ ನೀಡಿದ್ದರು.


ಸೌಜನ್ಯ

### ಬೆಂಬಲಕ್ಕಾಗಿ ಸ್ವಾಮೀಜಿ ಭೇಟಿ

ನೈರ್ಮಲ್ಯ ಕೆಲಸಗಾರ ಚೆನ್ನಯ್ಯ ಧರ್ಮಸ್ಥಳದಲ್ಲಿ 1995ರಿಂದ 2014ರವರೆಗೆ ಕೆಲಸ ಮಾಡುತ್ತಿದ್ದ. ಆ ಸಂದರ್ಭದಲ್ಲಿ ಆತನ ಮೊದಲ ಪತ್ನಿ ಮತ್ತು ಮಕ್ಕಳು ಇದ್ದರು. ಆತನ ಸಹೋದರ ತಾನಾಸಿ, ಸಹೋದರಿ ರತ್ನಾ ಮತ್ತು ಇತರ ಕೆಲವರು ಜೊತೆಗಿದ್ದರು. ಅವರೆಲ್ಲರೂ ಕ್ಷೇತ್ರದ ನೈರ್ಮಲ್ಯ ಕೆಲಸಗಾರರಾಗಿದ್ದರು. ಅವರಿಗೆ ಊಟ, ವಸತಿ ಸಹಿತ ಸಂಬಳವಿತ್ತು. ಅನಿವಾರ್ಯ ಸಂದರ್ಭಗಳಲ್ಲಿ ಪಂಚಾಯತ್‌ನವರ ಕೋರಿಕೆಯಂತೆ ಇದೇ ತಂಡದವರು ನೇತ್ರಾವತಿ ನದಿಯಲ್ಲಿ ತೇಲಿ ಬಂದಂತಹ ಅನಾಥ ಶವಗಳನ್ನು ಮೇಲೆತ್ತಿ ಕಾನೂನು ಪ್ರಕ್ರಿಯೆ ಮುಗಿಸಿದ ಬಳಿಕ ಮಣ್ಣು ಮಾಡುತ್ತಿದ್ದರು. ಇಂತಹ ಚೆನ್ನಯ್ಯನನ್ನು ಬಳಸಿಕೊಂಡು ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸಬಹುದು ಎಂದು ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಇತರರು ಆಲೋಚನೆ ಮಾಡಿ ಅದಕ್ಕೆ ಬೆಂಬಲಕ್ಕಾಗಿ ಆದಿ ಚುಂಚನಗಿರಿ ಮಠಾಧೀಶರಾದ ಶ್ರೀ ನಿರ್ಮಲಾನಂದ ಸ್ವಾಮೀಜಿಯವರನ್ನು 2023ರಲ್ಲಿ ಮಠದ ವಿಜಯನಗರದ ಶಾಖಾ ಮಠದಲ್ಲಿ ಭೇಟಿಯಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದ ಸುತ್ತಮುತ್ತ ನೂರಾರು ಹೆಣ್ಣು ಮಕ್ಕಳನ್ನು ಅತ್ಯಾಚಾರಗೈದು ಕೊಲೆ ಮಾಡಿ ಹೂತು ಹಾಕಿದಂತಹ ಅಲ್ಲಿನ ನೈರ್ಮಲ್ಯ ಕೆಲಸಗಾರನಾಗಿದ್ದ ಚೆನ್ನಯ್ಯನೇ ಜೊತೆಗಿದ್ದಾನೆ ಆತ ಹೂತು ಹಾಕಿದ್ದ ಮಹಿಳೆಯ ತಲೆಬುರುಡೆಯೊಂದನ್ನು ತಂದಿದ್ದಾನೆ. ಈ ಬಗ್ಗೆ ಹೋರಾಟ ರೂಪಿಸಿದ್ದೇವೆ. ಬೆಂಬಲ ಕೊಡಬೇಕು ಎಂದು ಕೋರಿದ್ದರು. ಅವರ ಕೇಳಿಕೆಯನ್ನು ಸಾವಧಾನವಾಗಿ ಕೇಳಿಸಿಕೊಂಡಿದ್ದಂತಹ ಶ್ರೀ ನಿರ್ಮಲಾನಂದ ಸ್ವಾಮೀಜಿಯವರು ಬೀದಿ ಹೋರಾಟವನ್ನು ಬಿಟ್ಟು ಕಾನೂನಿನ ಮೂಲಕ ಹೋರಾಟ ಮಾಡಿ ಅಂತ ಕೇಳಿ ಕಳುಹಿಸಿಕೊಟ್ಟಿದ್ದರು. ಆ ಸಂದರ್ಭದಲ್ಲಿ ಸ್ವಾಮೀಜಿಯವರ ಭೇಟಿಯ ಭಾವಚಿತ್ರಗಳನ್ನು ತೆಗೆದು ಅದನ್ನು ಜೋಪಾನವಾಗಿರಿಸಿದ್ದರು.



ಗಿರೀಶ್ ಮಟ್ಟಣ್ಣನವರ್



ಜಯಂತ್ ಟಿ.

### ಯಾಕೆ ಅದೇ ಸ್ವಾಮೀಜಿ?

ಆದಿ ಚುಂಚನಗಿರಿ ಸ್ವಾಮೀಜಿ ಅಂದರೆ ಅಧಿಕಾರರೂಢ ಪಕ್ಷಗಳ ಮುಖಂಡರಿಗೆ ಒಳ್ಳೆಯ ಗೌರವ ಭಾವನೆ ಇದೆ. ಅವರ ಮಾತಿಗೆ ಬೆಲೆ ಇದೆ. 2013ರಲ್ಲಿ ಸೌಜನ್ಯ ಹತ್ಯೆಯನ್ನು ವಿರೋಧಿಸಿ ಪ್ರಜಾಪ್ರಭುತ್ವ ವೇದಿಕೆಯಡಿಯಲ್ಲಿ ಎಡಪಂಥೀಯರೊಂದಿಗೆ ಸೇರಿಕೊಂಡು

☞ 15


ಕುಸುಮಾವತಿ


ವಿಠ್ಠಲಗೌಡ

# ಕೊಡಗಿನಲ್ಲಿ ನಾಲ್ವರ ಕೊಂದ ಹಂತಕನಿಗೆ ಮರಣದಂಡನೆ ಶಿಕ್ಷೆ

**ಕೊಡಗಿನ ವೀರಾಜಪೇಟೆಯ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಎಸ್. ನಟರಾಜ್ ಅವರು ಮಗು ಹಾಗೂ ವೃದ್ಧ ಸೇರಿದಂತೆ ನಾಲ್ಕು ಮಂದಿಯನ್ನು ನಿರ್ಧಯಿಯಾಗಿ ಕೊಂದಿದ್ದ ಹಂತಕನಿಗೆ ಮರಣದಂಡನೆಯ ಐತಿಹಾಸಿಕ ತೀರ್ಪು ನೀಡಿದ್ದಾರೆ. ಕೃತ್ಯ ನಡೆದ 9 ತಿಂಗಳಲ್ಲಿಯೆ ಪ್ರಕರಣದ ವಿಚಾರಣೆ ನಡೆಸಿದ್ದು ಆರೋಪ ಸಾಭೀತಾದ ಹಿನ್ನಲೆಯಲ್ಲಿ ಹಂತಕನಿಗೆ ಮರಣದಂಡನೆ ಶಿಕ್ಷೆ ನೀಡಿದ್ದಾರೆ. ಸದ್ಯ ಈ ತೀರ್ಪಿನಿಂದ ಜನ ಖುಷಿಯಾಗಿದ್ದಾರೆ. ಇಷ್ಟಕ್ಕೂ ಮರಣದಂಡನೆ ಶಿಕ್ಷೆಗೆ ಒಳಗಾದ ಹಂತಕ ಯಾರು? ಈತ ನಾಲ್ಕು ಕೊಲೆ ಮಾಡಿದ್ದೇಕೆ? ಇಲ್ಲಿದೆ ಸಂಪೂರ್ಣ ಸ್ಟೋರಿ...**

ಕೊಡಗು
ಬಿ.ಎಂ. ಲವಕುಮಾರ್


ಹಂತಕ ಗಿರೀಶ್


ಕೊಲೆಯಾದವರಾದ ಕರಿಯ, ನಾಗಿ ಹಾಗೂ ಕಾವೇರಿ

ನಾಲ್ಕು ಜನರನ್ನು ನಿರ್ಧಯಿಯಾಗಿ ಕೊಂದು ಜೈಲ್ ಸೇರಿ ಇದೀಗ ಮರಣದಂಡನೆ ಶಿಕ್ಷೆಗೆ ಒಳಗಾದ ಹಂತಕನ ಹೆಸರು ಗಿರೀಶ್... ಈತ ಮಾರ್ಚ್ 27, 2025ರಂದು ದಕ್ಷಿಣ ಕೊಡಗಿನ ಪೊನ್ನಂಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಬೇಗೂರು ಗ್ರಾಮದ ಬಾಳಂಗಾಡು ಎಂಬಲ್ಲಿ ಗಂಡನಿಂದ ದೂರವಿದ್ದ ಮಹಿಳೆಯನ್ನು ತನ್ನ ಬಲೆಗೆ ಬೀಳಿಸಿಕೊಂಡು ಮದುವೆಯಾಗಿ ಬಳಿಕ ದೂರವಾಗಿ ಮತ್ತೆ ಬಂದು ಸಂಸಾರ ನಡೆಸಿದ್ದಲ್ಲದೆ, ಅವಳು ಸೇರಿದಂತೆ ಅವಳ ಮಗಳು, ಅಜ್ಜ, ಅಜ್ಜಿ ಹೀಗೆ ನಾಲ್ವರನ್ನು ನಿರ್ಧಯಿಯಾಗಿ ಕೊಚ್ಚಿ ಕೊಂದು ಪರಾರಿಯಾಗಿದ್ದನು ಆದರೆ ಕೊಡಗು ಪೊಲೀಸರು ಕೇರಳ ಪೊಲೀಸರ ಸಹಕಾರದೊಂದಿಗೆ ಬಂಧಿಸಿ ಜೈಲಿಗಟ್ಟಿದ್ದರು. ಅಷ್ಟೇ ಅಲ್ಲದೆ ಆತ ಎಸಗಿದ ಕೃತ್ಯದ ಸಂಬಂಧ ಆರೋಪಪಟ್ಟಿಯನ್ನು ಮೇ 12ರಂದು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.



ಈ ಪ್ರಕರಣದ ವಿಚಾರಣೆ ನಡೆಸಿದ ವೀರಾಜಪೇಟೆಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಶ ಎಸ್. ನಟರಾಜ್ ಅವರು ಸಾಕ್ಷ್ಯಾಧಾರಗಳಿಂದ ಆರೋಪ ಸಾಭೀತಾದ ಹಿನ್ನಲೆಯಲ್ಲಿ ಅಪರಾಧಿ ಗಿರೀಶನಿಗೆ ಮರಣ ದಂಡನೆ ವಿಧಿಸಿ ತೀರ್ಪು ನೀಡುವ ಮೂಲಕ ಗಮನ ಸೆಳೆದಿದ್ದಾರೆ. ಹಾಗಾದರೆ ಗಿರೀಶ್ ಯಾರು, ಆತ ಎಸಗಿದ ಕೃತ್ಯವೇನು? ಎಂಬುದನ್ನು ನೋಡುತ್ತಾ ಹೋದರೆ ಆತ ಮಾಡಿರುವ ಕೃತ್ಯಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ.

ಮೂಲತ: ಕೇರಳದ ವೈನಾಡು ಜಿಲ್ಲೆಯ ತಿರುನಲ್ಲಿಯ ಉಣಿತು ಪರಂಬು ಗ್ರಾಮದ ನಿವಾಸಿ ಗಿರೀಶನ ಬದುಕೇ ಒಂದು ರೋಚಕ ಕ್ರೈಂ ಸ್ಟೋರಿ. ಒಂಥರಾ ಸೈಕೋ ಕಿಲ್ಲರ್ ಆಗಿದ್ದ ಗಿರೀಶ್ ಪೊನ್ನಂಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಬೇಗೂರು ಗ್ರಾಮದ ಬಾಳಂಗಾಡು ಎಂಬಲ್ಲಿಗೆ ಬಂದು ಒಂದು ಇಡೀ ಕುಟುಂಬವನ್ನು ಬಲಿ ಪಡೆದಿದ್ದು ದುರಂತವೇ.. ಈತನ ಮಚ್ಚಿಗೆ ಬಲಿಯಾದವರು ಅಮಾಯಕರು, ಬಡವರು, ಕೂಲಿ ಮಾಡಿಕೊಂಡು ಮುರುಕಲು ಗುಡಿಸಲಲ್ಲಿ ಬದುಕುತ್ತಿದ್ದವರು.

ಸೈಕೋ ಕಿಲ್ಲರ್ ಗಿರೀಶನ ಕೃತ್ಯಕ್ಕೆ ಬಲಿಯಾದ ಕರಿಯ, ಗೌರಿ, ನಾಗಿ ಮತ್ತು ಆರು ವರ್ಷದ ಬಾಲಕಿ ಕಾವೇರಿ ಪೊನ್ನಂಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಬೇಗೂರು ಗ್ರಾಮದ ಬಾಳಂಗಾಡಿನ ನಿವಾಸಿಗಳು. ಇವರು ಇಲ್ಲಿ ಕಳೆದ 40 ವರ್ಷಗಳಿಂದ ವಾಸಿಸುತ್ತಿದ್ದು, ಇವರು ಗುಡಿಸಲವಾಸಿಯಾಗಿದ್ದು, ಕೂಲಿ ಕೆಲಸ ಮಾಡಿಕೊಂಡು ಅದರಲ್ಲಿ ಜೀವನ ಮಾಡಿಕೊಂಡು ಬದುಕು ಸಾಗಿಸುತ್ತಾ ಬರುತ್ತಿದ್ದರು. ಸುತ್ತಮುತ್ತಲಿನ ತೋಟಗಳಲ್ಲಿ ಕೆಲಸ ಮಾಡಿಕೊಂಡಿದ್ದ ಇವರು ಗುಡಿಸಲ ಜೀವನಕ್ಕೆ ತೃಪ್ತಿ ಪಟ್ಟುಕೊಂಡಿದ್ದರು. ಆದರೆ ತಲೆಮಾರುಗಳಿಂದ ಯಾರದ್ದೋ ಮನೆಯಲ್ಲಿ ಕೆಲಸ ಮಾಡಿ ಅವರು ಕೊಟ್ಟ ಕೂಲಿಯಲ್ಲಿ ಹೊಟ್ಟೆ ತುಂಬಿಸಿಕೊಂಡು ಅದರಲ್ಲಿಯೇ ತೃಪ್ತಿ ಪಡುತ್ತಿದ್ದ ಕರಿಯ ಮತ್ತು ಗೌರಿ ತನ್ನ ಮೊಮ್ಮಗಳು ನಾಗಿ ಮತ್ತು ಮರಿಮಗಳು ಕಾವೇರಿ ಎಲ್ಲರೂ ಗುಡಿಸಲಲ್ಲಿಯೇ ವಾಸವಾಗಿದ್ದರು.

ಕೆಲವು ವರ್ಷಗಳ ಹಿಂದೆ ಕರಿಯನ ಮೊಮ್ಮಗಳು ನಾಗಿಯುನ್ನು ಸುಬ್ರಮಣಿ ಎಂಬಾತ ಮದುವೆಯಾಗಿದ್ದು ಇವರಿಗೆ ಕಾವೇರಿ ಎಂಬ ಮಗಳಿದ್ದಳು. ನಾಗಿ ಮತ್ತು ಸುಬ್ರಮಣಿ ಮದುವೆಯ ನಂತರ ದಾಂಪತ್ಯ ಸರಿ ಹೋಗಿರಲಿಲ್ಲ. ಹೀಗಾಗಿ ಅಜ್ಜನ ಮನೆಯಲ್ಲಿ ನಾಗಿ ಸೇರಿಕೊಂಡಿದ್ದಳಲ್ಲದೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದಳು. ಹತ್ತಿರದ ತೋಟಗಳಲ್ಲದೆ ಜೀಪುಗಳಲ್ಲಿ ಹೆಂಗಸರೊಂದಿಗೆ ಬೇರೆಡೆಗೆ ಹೋಗಿ ಕೆಲಸ ಮಾಡುತ್ತಿದ್ದಳು ಹೀಗಿರುವಾಗಲೇ ಅವಳಿಗೆ ಪರಿಚಯವಾದವನೇ ಸೈಕೋ ಗಿರೀಶ್. ಈತ ಮೂಲತ: ಕೇರಳದ ವೈನಾಡು ಜಿಲ್ಲೆಯ ತಿರುನಲ್ಲಿಯ ಉಣಿತು ಪರಂಬು ಗ್ರಾಮದವನಾಗಿದ್ದು, ತಲಪುಝ ಠಾಣಾ ವ್ಯಾಪ್ತಿಯ ಅತ್ತಿಮಲ ಕಾಲೋನಿಯ ಮತ್ತು ತಿರುನೆಲ್ಲಿಯ ಉಂಡಿಗ ಪರಂಬು ಕಾಲೋನಿಯಲ್ಲಿ ಹೆಚ್ಚಾಗಿರುತ್ತಿದ್ದನು. ಈತ ನಿಯತ್ತಿನ ಪ್ರಾಣಿ ಅಂತು ಅಲ್ಲವೇ ಅಲ್ಲ. ಅದಾಗಲೇ ಆತ ಹಲವು ಕೃತ್ಯಗಳಲ್ಲಿ ಭಾಗಿಯಾಗಿದ್ದನು. ಅಷ್ಟೇ ಅಲ್ಲದೆ ಶೋಕಿಲಾಲನಾಗಿದ್ದ ಆತ ಹೆಂಗಸರನ್ನು ತನ್ನ ಬಲೆಗೆ ಬೀಳಿಸಿಕೊಳ್ಳುವುದರಲ್ಲಿಯೂ ನಿಸ್ಸೀಮನಾಗಿದ್ದನು.

ಕೇರಳದಲ್ಲಿದ್ದಾಗಲೇ ಈತ ಎರಡು ಮದುವೆಯಾಗಿದ್ದು, ಮೊದಲ ಹೆಂಡತಿ ಪ್ರಿಯುಗೆ ಐದು ಮಕ್ಕಳಿದ್ದು, ಮೂರು ಮಕ್ಕಳು ಪ್ರಿಯ ಜತೆಗಿದ್ದರೆ ಇನ್ನಿಬ್ಬರು ಆತನ(ಗಿರೀಶ) ತಂದೆ ತಾಯಿ ಬಳಿಯಿದ್ದಾರೆ. ಮೊದಲ ಮದುವೆ ಬಳಿಕ ಆಗಾಗ್ಗೆ ಹೆಂಡತಿ ಜತೆ ಜಗಳ ಮಾಡಿಕೊಂಡು ಮನೆ ಬಿಟ್ಟು ಹೋಗುತ್ತಿದ್ದ ಈತ ಮಾನಂದವಾಡಿಯಲ್ಲಿ ಮತ್ತೊಬ್ಬಾಕೆಯನ್ನು ಮದುವೆಯಾಗಿದ್ದನು ಒಂದಷ್ಟು ದಿನ ಆಕೆ ಜತೆಗಿದ್ದು ಆಕೆಯ ಜತೆಗೂ ಜಗಳವಾಡಿಕೊಂಡು ಅಲ್ಲಿಂದ ಎಸ್ಕೇಪ್ ಆಗಿದ್ದ ಗಿರೀಶ ಅಲ್ಲಿಂದ ಕೆಲಸ ಹುಡುಕಿಕೊಂಡು ಕೊಡಗಿನತ್ತ ಬಂದಿದ್ದನು.

ಕೇರಳದಲ್ಲಿದ್ದಾಗಲೇ ಈತ ಹಲವು ಅಪರಾಧ ಚಟುವಟಿಕೆಯಲ್ಲಿ ಭಾಗಿಯಾದ ಆರೋಪವಿದೆ. ಜತೆಗೆ ಕೊಡಗಿಗೆ ಬಂದ ಬಳಿಕ ಇಲ್ಲಿಯೂ ಖತರ್‌ನಾಕ್ ಕೆಲಸ ಮಾಡಿದ್ದನು. ಅದು ಏನೆಂದರೆ, ವಯನಾಡು ಜಿಲ್ಲೆಯ ತಲಪುಝ




ಠಾಣಾ ವ್ಯಾಪ್ತಿಯಲ್ಲಿ ನಾಲ್ಕು ವರ್ಷಗಳ ಹಿಂದೆ ವ್ಯಕ್ತಿಯೊಬ್ಬರಿಗೆ ಪಾನಮತ್ತನಾಗಿ ಡಿಕ್ಕಿಪಡಿಸಿದ ಪರಿಣಾಮ ಆತ ಸಾವನ್ನಪ್ಪಿದ್ದನು. ಈ ಪ್ರಕರಣದಲ್ಲಿ ಹಲವು ಬಾರಿ ವಾರೆಂಟ್ ಇದ್ದರೂ ನ್ಯಾಯಾಲಯಕ್ಕೆ ಹಾಜರಾಗದೆ ಪೊಲೀಸರ ಕಣ್ಣು ತಪ್ಪಿಸಿ ಕೊಡಗು, ಕೇರಳದಲ್ಲಿ


ಘಟನಾ ಸ್ಥಳದಲ್ಲಿ ಪೊಲೀಸರ ಪರಿಶೀಲನೆ



ಓಡಾಡಿಕೊಂಡಿದ್ದನು. ಇನ್ನು ಕೊಡಗಿಗೆ ಬಂದ ಬಳಿಕ ಪೊನ್ನಂಪೇಟೆಯ ಠಾಣಾ ವ್ಯಾಪ್ತಿಯಲ್ಲಿ ಶ್ರೀಗಂಧ ಮಾರಾಟ ಪ್ರಕರಣದಲ್ಲೂ ಈತ ಭಾಗಿಯಾದ ಬಗ್ಗೆ ಪ್ರಕರಣವಿದೆ.

ಜತೆಗೆ ಕಾಫಿ ಕೊಯ್ಲು ಸಂದರ್ಭ ಕೇರಳದಿಂದ ತನ್ನದೇ ಜೀಪಿನಲ್ಲಿ ಕೊಡಗಿಗೆ ಕಾರ್ಮಿಕರನ್ನು ತಂದು ಬಿಡುತಿದ್ದ ಗಿರೀಶ ಕಾರ್ಮಿಕರ ಹಣವನ್ನು ತಾನೇ ಪಡೆದು ಹಣ ನೀಡದೆ ವಂಚಿಸುತ್ತಿದ್ದ ಬಗ್ಗೆಯೂ ಈತನ ಮೇಲೆ ಪ್ರಕರಣವಿದೆ. ಕೇರಳದಿಂದ ಕೆಲಸದವರನ್ನು ವಾಹನದಲ್ಲಿ ಕರೆ ತಂದು ತೋಟಗಳಿಗೆ ಕೆಲಸಕ್ಕೆ ಬಿಡುವ ಸಂದರ್ಭ ತೋಟದ ಕೆಲಸಕ್ಕೆ ಹೋಗುತ್ತಿದ್ದ ನಾಗಿಯ ಪರಿಚಯವಾಗಿತ್ತು. ಅದಾಗಲೇ ನಾಗಿ ಗಂಡ ಸುಬ್ರಹ್ಮಣಿಯಿಂದ ದೂರವಿರುವ ವಿಚಾರ ಗಿರೀಶನಿಗೆ ಗೊತ್ತಾಗಿತ್ತು. ಹೀಗಾಗಿ ಅವಳನ್ನು ಪಟಾಯಿಸುವ ಕೆಲಸ ಮಾಡಿದ್ದನು. ನಾಗಿಗೂ ಆತನ ಪೂರ್ವಾಪರ ಗೊತ್ತಿರಲಿಲ್ಲ. ಹೀಗಾಗಿ ನಾನು ನಿನ್ನನ್ನು ಮದುವೆಯಾಗುತ್ತೇನೆ ಎಂದು ಮನೆಗೆ ಬಂದವನು ಒಂದಷ್ಟು ದಿನ ಜತೆಗಿದ್ದು, ತನ್ನ ಕಾಮತೃಷೆ ತೀರಿಸಿಕೊಂಡಿದ್ದನು. ಆದರೆ ಸಂಸಾರದ ಜವಬ್ದಾರಿ ಹೊತ್ತುಕೊಳ್ಳಲು ತಯಾರಿರಲಿಲ್ಲ. ಅಲ್ಲದೆ ಎಂದಿನಂತೆ ತನ್ನ ಹಳೆ ಚಾಳಿಯನ್ನು ಮುಂದುವರೆಸಿ ಕೇರಳದ ಕಡೆಗೆ ಹೋದರೆ ಮತ್ತೆ ಬರುತ್ತಿರಲಿಲ್ಲ.


ಬಂಧಿತ ಆರೋಪಿಯೊಂದಿಗೆ ಪೊಲೀಸರು

ನಾಗಿ ಜತೆಗಿದ್ದಾಗ ಸೆಲ್ಪಿ ತೆಗೆದುಕೊಂಡು ಆಕೆಯ ಜತೆಗೆ ಜಾಲಿಯಾಗಿದ್ದನಲ್ಲದೆ ತನ್ನದೆಲ್ಲ ಮುಗಿದ ಬಳಿಕ ಹೆಂಡ ಕುಡಿದು ಆಕೆಯ ಜತೆಗೆ ಜಗಳ ತೆಗೆದು ಹೊಡಿದು ಬಡಿದು ಮಾಡಿ ಪರಾರಿಯಾಗಿ ಬಿಟ್ಟಿದ್ದನು. ಆತ ಹೋದ ಬಳಿಕ ಹಳೆಯ ಗಂಡನ ಪಾದವೇ ಗತಿ ಎಂಬ ಸ್ಥಿತಿ ನಾಗಿಯದ್ದಾಗಿತ್ತು. ಹೀಗಾಗಿ ಅವಳು ಹಳೆಯ ಗಂಡ ಸುಬ್ರಹ್ಮಣಿ ಜತೆಗೆ ಮತ್ತೆ ಕ್ಲೋಸ್ ಆಗಿದ್ದಳು ಹೀಗಾಗಿ ಗಿರೀಶನ ದೂರವಿಟ್ಟಿದ್ದಳು. ಈ ನಡುವೆ ನಾಗಿ ಮತ್ತು ಸುಬ್ರಹ್ಮಣಿ ಹತ್ತಿರವಾಗಿರುವ ವಿಚಾರ ತಿಳಿದ ಗಿರೀಶ ಬುಡಕ್ಕೆ ಮೆಣಸಿಟ್ಟುಕೊಂಡವನಂತೆ ಆಡಿದ್ದನು. ಅಲ್ಲದೆ ನಾಗಿಗೂ ಆವಾಜ್ ಹಾಕಿದ್ದನು. ಆದರೆ ಆಕೆ ಸೊಪ್ಪು ಹಾಕಿರಲಿಲ್ಲ. ಹೀಗಾಗಿ ಆತನಿಗೆ ಅವಳ ಮೇಲೆ ದ್ವೇಷ ಹುಟ್ಟಿಕೊಂಡಿತ್ತು.

ನನ್ನನ್ನು ಬಿಟ್ಟು ಮತ್ತೆ ಗಂಡನ ಜತೆಗೆ ಹೋಗಿದ್ದ ನಾಗಿಯ ಮೇಲೆ ಇನ್ನಿಲ್ಲದ ಕೋಪ ಬಂದಿತ್ತಲ್ಲದೆ ಆಕೆಯುನ್ನು ಮುಗಿಸಿಯೇ ಬಿಡಬೇಕೆಂಬ ತೀರ್ಮಾನಕ್ಕೆ ಗಿರೀಶ ಬಂದು ಬಿಟ್ಟಿದ್ದನು. ಹೀಗಾಗಿ ಮಾರ್ಚ್ 27, 2025ರಂದು ಗುರುವಾರ ರಾತ್ರಿ ಹೆಂಡವನ್ನಿಟ್ಟುಕೊಂಡು ನಾಗಿಯಿದ್ದ ಮನೆಗೆ ಹೋಗಿದ್ದನು. ಎಲ್ಲರಿಗೂ ಹೆಂಡಕೊಟ್ಟು ತಾನು ಕುಡಿದಿದ್ದಾನೆ. ರಾತ್ರಿ ನಾಗಿ ಜತೆಗೆ ಜಗಳ ತೆಗೆದಿದ್ದಾನೆ. ಅದು ಅತಿರೇಕಕ್ಕೆ ಹೋಗುತ್ತಿದ್ದಂತೆಯೇ ಕತ್ತಿಯನ್ನು ಆಕೆ ಮೇಲೆ ಬೀಸಿದ್ದಾನೆ. ಅಷ್ಟೇ ಅಲ್ಲದೆ ರಾಕ್ಷಸ ಅವತಾರ ತಾಳಿದ ಆತ ಮನೆಯಲ್ಲಿದ್ದ ಕರಿಯ, ಗೌರಿ, ನಾಗಿ ಮತ್ತು ಬಾಲಕಿ ಮೇಲೆ ಕತ್ತಿ ಬೀಸಿ ಹೇಗೆಂದರೆ ಹಾಗೆ ಕೊಚ್ಚಿ ಹಾಕಿದ್ದಾನೆ.

ಆ ಭೀಕರ ದೃಶ್ಯ ಹೇಗಿತ್ತೆಂದರೆ, ಇಡೀ ಗುಡಿಸಲು ರಕ್ತದಲ್ಲಿ ತೇವವಾಗಿತ್ತು. ಬಾಲಕಿಯ ಅಂಗಗಳೇ ಬೇರ್ಪಟ್ಟಿದ್ದವು. ತುಂಡಾದ ದೇಹಗಳು ಕೃತ್ಯದ ಭೀಕರತೆಯನ್ನು ಹೇಳುತ್ತಿದ್ದವು. ಆ ಗುಡಿಸಲ ಪಕ್ಕದಲ್ಲಿ ಯಾರ ಮನೆಯೂ ಇಲ್ಲದ ಕಾರಣ ಇಂತಹದೊಂದು ಕೃತ್ಯ ನಡೆದಿದೆ ಎಂಬುದೇ ಗೊತ್ತಾಗಿರಲಿಲ್ಲ. ಕೊಲೆ ಮಾಡಿದ ಬಳಿಕ ಗಿರೀಶ್ ಅಲ್ಲಿಂದ ಎಸ್ಕೇಪ್ ಆಗಿದ್ದನು. ಹಾಗೆ ಹೋದವನು ತನ್ನ ವಾಟ್ಸಪ್‌ನಲ್ಲಿ ನಾಗಿಯ ಪೋಟೋ ಹಾಕಿ ಮಲಯಾಳದಲ್ಲಿ ಶ್ರದ್ಧಾಂಜಲಿ ಸಲ್ಲಿಸಿದ್ದನು. ಇತ್ತ ಮಾರನೆಯ ದಿನ ಅಂದರೆ ಮಾರ್ಚ್ 28, ಶುಕ್ರವಾರ ಎಂದಿನಂತೆ ಕೆಲಸ ಮಾಡುವವರು ಬಂದಿದ್ದರು. ಗುಡಿಸಲ ಬಳಿ ಸದ್ದು ಕೇಳಿಸದಾಗ ಬಂದು ನೋಡಿದ್ದಾರೆ ಆಗ ಕೃತ್ಯ ಬಯಲಾಗಿದೆ. ಕೂಡಲೇ ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು ಪೊನ್ನಂಪೇಟೆ ಪೊಲೀಸರು ಹಾಗೂ ಕೊಡಗು ಎಸ್ಪಿ ರಾಮರಾಜನ್, ಹೆಚ್ಚುವರಿ ಎಸ್ಪಿ ಸುಂದರ್ ರಾಜ್, ದಕ್ಷಿಣ ವಲಯ ಐಜಿಪಿ ಡಾ. ಬೋರಲಿಂಗೇಗೌಡ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ಹಾಗು ಸಿಬ್ಬಂದಿ ಆಗಮಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು.


ಆದರೆ ಹತ್ಯೆ ಮಾಡಿದ ಹಂತಕ ಗಿರೀಶ್ ಕೇರಳಕ್ಕೆ ಪರಾರಿಯಾಗಿದ್ದನು. ಆತನ ಕುರಿತಂತೆ ಮಾಹಿತಿ ನೀಡಿದ ಹಿನ್ನಲೆಯಲ್ಲಿ ಅಲರ್ಟ್ ಆದ ವೈನಾಡು ಜಿಲ್ಲೆಯ ತಾಲಪೋಯ ಪೊಲೀಸ್ ಠಾಣೆಯ ಎಎಸ್‌ಐ ಟಿ. ಅನೀಶ್, ವಿಶೇಷ ಶಾಖೆಯ ಠಾಣಾಧಿಕಾರಿ ಜಿ. ಅನಿಲ್, ಸಿಬ್ಬಂದಿ ಶಫೀರ್ ಆರೋಪಿಯನ್ನು ಬಂಧಿಸಿದ್ದರಲ್ಲದೆ, ಆ ನಂತರ ಆತನ ವಿರುದ್ಧ ಆರೋಪಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ ವೀರಾಜಪೇಟೆಯ ಎರಡನೇ ಅಪರ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ಸೈಕೋ ಗಿರೀಶ ಮಾಡಿದ ಕೃತ್ಯಕ್ಕೆ ತಕ್ಕ ಶಿಕ್ಷೆಯಾಗಿದೆ... ☯

## ಯಾರೂ ಇಲ್ಲದ ಹೊತ್ತು... ಹರಿಯಿತು ನೆತ್ತರ ಕೋಡಿ... ಪುಣೆಗೆ ತೆರಳುತ್ತಿದ್ದ ಹಂತಕ ಬಸ್‌ನಲ್ಲಿ ಸಿಕ್ಕಿಬಿದಿದ್ದೇ ರೋಚಕ


ಕೊಲೆಯಾದ ಮಂಜುಳಾ

ತುಮಕೂರಿನ ಹಿಂಡೆಸೆಕೆರೆಯ ತೋಟದ ಮನೆಯಲ್ಲಿ ನಡೆದಿದ್ದ ಕೊಲೆ ಇಡೀ ಊರನ್ನೇ ಬೆಚ್ಚಿ ಬೀಳಿಸಿತ್ತು. ತೋಟದ ಮನೆಯಲ್ಲಿ ಒಂಟಿಯಾಗಿದ್ದ ಮಹಿಳೆಯ ಕೊಲೆ ಹತ್ತಾರು ಅನುಮಾನಕ್ಕೆ ಕಾರಣವಾಗಿತ್ತು. ಈ ಪ್ರಕರಣ ಕೈಗೆತ್ತಿಕೊಂಡು ತನಿಖೆ ಆರಂಭಿಸಿದ ಪೊಲೀಸರು, ಹಂತಕನನ್ನು ಪುಣೆಯಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದರ ಬೆನ್ನಲ್ಲೇ ಕೊಲೆಯ ಹಿಂದಿನ ರಹಸ್ಯ ಬಯಲಾಗಿದೆ. ಇನ್ನು ಆರೋಪಿಯನ್ನ ಬಂಧಿಸಿದ್ದೇ ರೋಚಕವಾಗಿದೆ.

ಜಿಲ್ಲೆಯ ಗುಬ್ಬಿ ತಾಲೂಕಿನ ಹಿಂಡೆಸೆಕೆರೆ ಗ್ರಾಮದ ತೋಟದ ಮನೆಯಲ್ಲಿ ಮಂಜುಳಾ ಕೊಲೆ ಪ್ರಕರಣದ ಆರೋಪಿಯನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಡಿಸೆಂಬರ್ 1ರಂದು ತೋಟದ ಮನೆಯಲ್ಲಿ ಮಂಜುಳಾಳ ಕತ್ತು ಸೀಳಿ ಬರ್ಬರವಾಗಿ ಕೊಲೆ ಮಾಡಲಾಗಿತ್ತು. ಈ ಹತ್ಯೆ ದಿನವೇ ಮಧು ಎಂಬಾತನ ಮೇಲೆ ಕುಟುಂಬಸ್ಥರು ಅನುಮಾನ ವ್ಯಕ್ತಪಡಿಸಿದ್ದರು. ಅದರ ಆಧಾರದ ಮೇಲೆ ತನಿಖೆ ಕೈಗೊಂಡ ಪೊಲೀಸರಿಗೆ ಆರೋಪಿ ಪುಣೆಗೆ ಪರಾರಿಯಾಗುತ್ತಿರುವುದು ಮಾಹಿತಿ ಸಿಕ್ಕಿದೆ. ಕೂಡಲೇ ಅಲರ್ಟ್ ಆದ ಪೊಲೀಸರು, ಖಾಸಗಿ ಬಸ್ ಚಾಲಕನ ಕೈಯಿಂದಲೇ ಆರೋಪಿ ಮಧುನನ್ನು ಲಾಕ್ ಮಾಡಿಸಿದ್ದಾರೆ. ಹೌದು.. ಪೊಲೀಸರ ಹೇಳಿದಂತೆ ಚಾಲಕ ನೇರವಾಗಿ ಪುಣೆಯ ವಿದ್ಯಾಪೀಠ ಪೊಲೀಸ್ ಠಾಣೆಗೆ ಬಸ್ ಚಲಾಯಿಸಿಕೊಂಡು ಹೋಗಿ ಆರೋಪಿಯನ್ನು ಒಪ್ಪಿಸಿ ಅಲ್ಲಿಂದ ತೆರಳಿದ್ದಾನೆ.


ಆರೋಪಿ ಮಧು

**ಕೊಲೆ ಮಾಡಿ ದೇವರಿಗೆ ಮುಡಿ ಕೊಟ್ಟಿದ್ದ ಹಂತಕ**

ನವೆಂಬರ್ 30ರ ಸಂಜೆ 6.30ಕ್ಕೆ ಮಧು ಮಂಜುಳ ಮನೆ ಬಳಿ ಬಂದಿದ್ದ. ಈ ವೇಳೆ ಮಂಜುಳಾ ಹಾಗೂ ಮಧು ನಡುವೆ ಗಲಾಟೆ ನಡೆದಿದ್ದು, ಈ ವೇಳೆ ಮದು ಮಂಜುಳಾನನ್ನು ಹತ್ಯೆ ಮಾಡಿದ್ದ. ಬಳಿಕ ಆ ದಿನ ರಾತ್ರಿ ತನ್ನ ಮನೆಯಲ್ಲಿ ಕಾಲ ಕಳೆದಿದ್ದು, ಮರು ದಿನ ಬೆಳಿಗ್ಗಿಯೇ ಪೊಷಕರ ಜೊತೆ ಕುಣಿಗಲ್ ನ ಆಲಪ್ಪ ಗುಡ್ಡಕ್ಕೆ ತೆರಳಿ ಮನೆ ದೇವರಿಗೆ ಮುಡಿ ಕೊಟ್ಟಿದ್ದಾನೆ. ನಂತರ ಪೊಷಕರನ್ನು ಮನೆಗೆ ಬಿಟ್ಟು ನೇರವಾಗಿ ಬೆಂಗಳೂರಿಗೆ ಬಂದು ಕಾರು ಮಾರಿ ಕಲಾಸಿಪಾಳ್ಯದಲ್ಲಿ ಪುಣೆಗೆಂದು ಖಾಸಗಿ ಬಸ್ ಹತ್ತಿದ್ದಾನೆ.

**ಕೊಲೆಗಾರನನ್ನು ಪೊಲೀಸರು ಖೆಡ್ಡಕ್ಕೆ ಕೆಡವಿದ್ದೇಗೆ?**

ಮತ್ತೊಂದೆಡೆ ಆತನಿಗಾಗಿ ಬಲೆ ಬೀಸಿದ್ದ ಶಿರಾ ಡಿವೈಎಸ್ಪಿ ತಂಡಕ್ಕೆ ಆರೋಪಿ ಮಧು ಬಸ್‌ನಲ್ಲಿ ಪ್ರಯಾಣ ಮಾಡುತ್ತಿರುವ ಮಾಹಿತಿ ದೊರೆತಿದೆ. ಕೂಡಲೇ ಪೊಲೀಸರು, ಖಾಸಗಿ ಟ್ರಾವೆಲ್ಸ್‌ನಿಂದ ಬಸ್ ಚಾಲಕನ ಮಾಹಿತಿ ಪಡೆದುಕೊಂಡಿದ್ದು, ಬಸ್‌ನಲ್ಲಿ ಆರೋಪಿ ಮಧು ಇರುವ ಬಗ್ಗೆ ತಿಳಿಸಿದ್ದಾರೆ. ಬಳಿಕ ಡ್ರೈವರ್ ಪೊಲೀಸರ ಸಲಹೆಯಂತೆ ಪಯಾಣಿಕರಿದ್ದ



ಬಸ್ ಅನ್ನು ನೇರವಾಗಿ ಪುಣೆಯ ವಿದ್ಯಾಪೀಠ ಪೊಲೀಸ್ ಠಾಣೆಗೆ ಚಾಲಾಯಿಸಿಕೊಂಡು ಹೋಗಿ ಆರೋಪಿ ಮಧುನನ್ನು ಪೊಲೀಸರ ವಶಕ್ಕೆ ನೀಡಿ ತೆರಳಿದ್ದಾನೆ.

ಸದ್ಯ ಆರೋಪಿಯುನ್ನು ಮಹಾರಾಷ್ಟ್ರದ ಪುಣೆಯಲ್ಲಿ ಬಂಧಿಸಿದ ತುಮಕೂರಿನ ಶಿರಾ ಡಿವೈಎಸ್ಪಿ ನೇತೃತ್ವದ ಪೊಲೀಸರ ತಂಡ, ಕೋರ್ಟ್ ಪ್ರಕ್ರಿಯೆ ಮುಗಿಸಿ ತುಮಕೂರಿನತ್ತ ಕರೆತರುತ್ತಿದೆ.. ತನಿಖೆ ವೇಳೆ ಆರೋಪಿಗೆ ಮಹಿಳೆ ಜೊತೆ ಅನೈತಿಕ ಸಂಬಂಧ ಇದ್ದು, ಈ ಸಲುಗಿಯಿಂದಲೇ ಕೊಟ್ಟ ಹಣವನ್ನು ಆರೋಪಿ ವಾಪಾಸ್ ನೀಡಲು ಕಿರಿಕ್ ಮಾಡಿದ್ದ ಎನ್ನಲಾಗಿದೆ. ಆದ್ರೆ ನಿಜಕ್ಕೂ ಕೊಲೆಗೆ ಕೇವಲ ಹಣಕಾಸಿನ ವಿಚಾರವೇ ಕಾರಣವೇ ಹೊರತಾಗಿ ಬೇರೆನಾದರೂ ಇತ್ತಾ ಅನ್ನೊದು ಪೊಲೀಸರ ತನಿಖೆಯಿಂದಷ್ಟೇ ತಿಳಿದು ಬರಬೇಕಿದೆ. ☯



# ವಾರದ ಉತ್ತಮ ವಿಚಾರ

## ಕೊಡಗಿನಲ್ಲಿ ಧಾನ್ಯ ಲಕ್ಷ್ಮಿಯನ್ನು ಮನೆಗೆ ಕೊಂಡೊಯ್ದು ಸಂಭ್ರಮಿಸುವ ಹುತ್ತರಿ ಹಬ್ಬ

ಕೊಡಗಿನಲ್ಲಿ ಒಂದೆಡೆ ಮಳೆ ಕಡಿಮೆಯಾಗಿ ಸಣ್ಣಗೆ ನಡುಕ ಹುಟ್ಟಿಸುವ ಚಳಿ ಆರಂಭವಾಗಿದೆ. ಮತ್ತೊಂದೆಡೆ ಹಚ್ಚಹಸಿರಾಗಿದ್ದ ಭತ್ತದಗದ್ದೆಯ ಬಯಲುಗಳು ತೆನೆಬಿಟ್ಟು ಹೊಂಬಣ್ಣಕ್ಕೆ ತಿರುಗಿವೆ. ಮನೆ, ಮನಗಳಲ್ಲಿ ಹುತ್ತರಿ ಹಬ್ಬದ ಸಂಭ್ರಮ ಮನೆ ಮಾಡಿದೆ. ಡಿಸೆಂಬರ್ 4ರಂದು ಕೊಡಗಿನಾದ್ಯಂತ ಹುತ್ತರಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಕೊಡಗಿನವರಿಗೆ ಹುತ್ತರಿ ಹಬ್ಬ ಸುಗ್ಗಿ ಹಬ್ಬವಾದರೂ ಇದರಲ್ಲಿ ಇಲ್ಲಿನ ಸಂಸ್ಕೃತಿ, ಸಂಪ್ರದಾಯದ ಲೇಪನ, ಜಾನಪದ ಮಿಳಿತವಾಗಿದೆ. ಗದ್ದೆಯಿಂದ ತೆನೆಯೊಡೆದ ಧಾನ್ಯ(ಭತ್ತ)ವನ್ನು ತಂದು ಅದನ್ನು ಪೂಜಿಸಿ, ಹೊಸ ಅಕ್ಕಿಯ ಪಾಯಸ ಮಾಡಿ ಮನೆಮಂದಿಯೆಲ್ಲಾ ಸೇವಿಸುವ ಮೂಲಕ ವರ್ಷಪೂರ್ತಿ ಮನೆಯಲ್ಲಿ ಧಾನ್ಯ ತುಂಬಿರಬೇಕೆಂದು ಪ್ರಾರ್ಥಿಸುವುದು ಹಬ್ಬದ ಆಶಯವಾಗಿದೆ.

ಹಿರಿಯಮನೆ (ಐನ್‌ಮನೆ)ಯಲ್ಲಿ ಸೇರಿ ಮನೆಯ 'ನೆಲ್ಲಕ್ಕಿ' ನಡುಬಾಡೆಯಲ್ಲಿ ತೂಗು ದೀಪದ ಕೆಳಗೆ ಚಾಪೆ ಹಾಸಿ ಹುತ್ತರಿ ಕುಕ್ಕೆಯಲ್ಲಿ ಮಾವಿನ ಎಲೆ, ಅರಳಿ ಎಲೆ, ಹಲಸಿನ ಎಲೆ, ಕುಂಬಳಿ ಎಲೆ, ಕಾಡು ಗೇರು ಎಲೆ ಹೀಗೆ ಐದು ತರಹದ ಎಲೆಯನ್ನು ಹಾಗೂ ಕಾಡಿನಲ್ಲಿ ಸಿಗುವ ಅಚ್ಚುನಾರನ್ನು ಇರಿಸಲಾಗುತ್ತದೆ. ಮತ್ತೊಂದು ಕುಕ್ಕೆಯ ತುಂಬ ಭತ್ತ ತುಂಬಿ ಅದರ ಮೇಲೆ ಅರ್ಧ ಸೇರಿನಲ್ಲಿ ಅಕ್ಕಿ ತುಂಬಿಡಲಾಗುತ್ತದೆ. ಹುತ್ತರಿ ಕುಡಿಕೆಯಲ್ಲಿ ತಂಬಿಟ್ಟು ಹಾಕಿ ಅದರ ಜೊತೆ ಹಾಲು, ತುಪ್ಪ, ಜೇನು, ಎಳ್ಳು, ಶುಂಠಿ, ತೆಂಗಿನಕಾಯಿ, ಹಾಗಲಕಾಯಿ, ಮುಳ್ಳು ಇಡಲಾಗುತ್ತದೆ. ಇದರ ಪಕ್ಕದಲ್ಲಿ ಕುಡುಗೋಲು, ಮುಕ್ಕಾಲಿಯ ಮೇಲೆ 'ತಳಿಯಕ್ಕಿ ಬೊಳ್ಚ', ಮೂರು ವೀಳ್ಯದೆಲೆ ಹಾಗೂ ಮೂರು ಅಡಿಕೆಯನ್ನು ಇಡಲಾಗುತ್ತದೆ.

ಮುತ್ತೈದೆಯರು ಅಕ್ಕಿ ಹಿಟ್ಟಿನಿಂದ ಹಬ್ಬಾಚರಣೆಗೆ ಇರಿಸಲಾದ ವಸ್ತುಗಳ ಮುಂದೆ ರಂಗೋಲಿ ಇಡುತ್ತಾರೆ. ಬಳಿಕ ದೇವರನ್ನು ಪ್ರಾರ್ಥಿಸುತ್ತಾ ಎಲೆಗಳನ್ನು ಸಂಪ್ರದಾಯದಂತೆ ಒಂದರ ಮೇಲೊಂದು ಇಟ್ಟು ನಾರಿನಿಂದ ಕಟ್ಟಲಾಗುತ್ತದೆ. ಇದನ್ನು ನೆರೆ ಕಟ್ಟುವುದು ಎಂದು ಕರೆಯುತ್ತಾರೆ. ಬಳಿಕ ಬೇಯಿಸಿದ ಹುತ್ತರಿ ಗೆಣಸನ್ನು ಜೇನುತುಪ್ಪ, ಬೆಲ್ಲ ಹಾಗೂ ತುಪ್ಪದೊಂದಿಗೆ ಸೇರಿಸಿ ಸೇವಿಸುತ್ತಾರೆ. ಜೊತೆಗೆ ಇತರೆ ತಿಂಡಿ ತೀರ್ಥಗಳೂ ಇರುತ್ತವೆ. ಇದನ್ನು ಫಲಹಾರ ಎನ್ನುತ್ತಾರೆ. ಫಲಹಾರದ ಬಳಿಕ ಸಿದ್ದಪಡಿಸಲಾದ 'ಕುತ್ತಿ'ಯನ್ನು ಕುಟುಂಬದ ಹಿರಿಯರೊಬ್ಬರು ಹೊತ್ತು ಊರಿನಲ್ಲಿರುವ ಅಂಬಲ (ಮೈದಾನ)ಕ್ಕೆ ತೆರಳುತ್ತಾರೆ. ಅಲ್ಲಿಗೆ ಸುತ್ತಮುತ್ತಲಿನ ಕುಟುಂಬದವರು, ಸಂಬಂಧಿಕರು ಬರುತ್ತಾರೆ. ಅಲ್ಲಿಂದ ಮನೆಯ ಹಿರಿಯ ವ್ಯಕ್ತಿ ಕದಿರು ತೆಗೆಯಲು ಕುಡುಗೋಲನ್ನು ಕದಿರು ತೆಗೆಯುವವನ ಕೈಗೆ ನೀಡುತ್ತಾರೆ. ಈ ಸಂದರ್ಭ ಮುತ್ತೈದೆಯೊಬ್ಬರು 'ತಳಿಯಕ್ಕಿ ಬೊಳ್ಚ'ವನ್ನು ಹಿಡಿದುಕೊಳ್ಳುತ್ತಾರೆ. ಬಳಿಕ ಮನೆಯವರೆಲ್ಲರೂ ಒಡ್ಡೋಲಗದೊಂದಿಗೆ ಕದಿರು ಕೊಯ್ಯುವ ಗದ್ದೆಯತ್ತ ತೆರಳುತ್ತಾರೆ.

ಗದ್ದೆ ತಲುಪಿದ ಬಳಿಕ ಹಾಲುಜೇನು ಮೊದಲಾದವುಗಳನ್ನು ಕದಿರಿನ ಬುಡಕ್ಕೆ ಸುರಿಯಲಾಗುತ್ತದೆ. ಹುತ್ತರಿ ಕುಕ್ಕೆಯಲ್ಲಿ ಕೊಂಡೊಯ್ದ ಅಚ್ಚುನಾರಿನಿಂದ ಕಟ್ಟಿದ ಎಲೆಗಳನ್ನೊಳಗೊಂಡ ನೆರೆಯನ್ನು ಕದಿರಿನ ಬುಡಕ್ಕೆ ಕಟ್ಟಲಾಗುತ್ತದೆ. ಆ ನಂತರ ಹುತ್ತರಿ ಮುಹೂರ್ತಕ್ಕೆ ಸುಸೂತ್ರವೆನಿಸುವಂತೆ ಗುಂಡೊಂದನ್ನು ಹಾರಿಸಲಾಗುತ್ತದೆ. ಕುತ್ತಿ ಹೊತ್ತ ಕುಟುಂಬದ ಹಿರಿಯ ವ್ಯಕ್ತಿ ದೇವರನ್ನು



ಪ್ರಾರ್ಥಿಸಿ, ಕದಿರನ್ನು ಬೆಸ ಸಂಖ್ಯೆಯಲ್ಲಿ ಕೊಯ್ದು ಹುತ್ತರಿ ಕುಕ್ಕೆಯಲ್ಲಿ ಇಡಲಾಗುತ್ತದೆ. ಈ ಸಂದರ್ಭ ನೆರೆದವರು 'ಪೊಲಿ ಪೊಲಿ ದೇವಾ' ಎಂದು ಘೋಷಣೆ ಕೂಗುತ್ತಾರೆ. ಈ ವೇಳೆ ಪಟಾಕಿ ಸಿಡಿಸಿ ಸಂಭ್ರಮಿಸಲಾಗುತ್ತದೆ.

ಕದಿರು ತುಂಬಿದ ಕುಕ್ಕೆಯನ್ನು ತಲೆಯಲ್ಲಿ ಹೊತ್ತು 'ಪೊಲಿ ಪೊಲಿ ದೇವಾ' ಎಂದು ಘೋಷಣೆ ಕೂಗುತ್ತಾ ಬರಲಾಗುತ್ತದೆ. ಅಲ್ಲದೆ ಕದಿರನ್ನು ಕೆಲವು ಕುಟುಂಬದವರು ದೇವಸ್ಥಾನಕ್ಕೆ ಅರ್ಪಿಸಿ ಬಳಿಕ ಮನೆಗೆ ತೆರಳಿದರೆ ಇನ್ನು ಕೆಲವರು ನೇರವಾಗಿ ಒಕ್ಕಲು ಕಣಕ್ಕೆ ತೆರಳಿ ಮನೆಗೆ ತೆರಳುತ್ತಾರೆ. ಮನೆಯಲ್ಲಿದ್ದ ಮುತ್ತೈದೆ ಕದಿರು ಕೊಯ್ದವನ ಕಾಲು ತೊಳೆದು ಹಾಲು ನೀಡಿ ಧಾನ್ಯ ಲಕ್ಷ್ಮಿಯನ್ನು ಮನೆತುಂಬಿಸಿಕೊಳ್ಳುತ್ತಾರೆ. ಧಾನ್ಯ ಲಕ್ಷ್ಮಿಯನ್ನು ಮನೆಗೆ ತುಂಬಿಸಿಕೊಂಡ ನಂತರ ಕದಿರನ್ನು ಆಯುಧ, ವಾಹನ ಮುಂತಾದವುಗಳಿಗೆ ಕಟ್ಟಲಾಗುತ್ತದೆ. ಬಳಿಕ ಮನೆಯಲ್ಲಿ ಹೊಸ ಅಕ್ಕಿ ಪಾಯಸ ಮಾಡಿ ಸದಸ್ಯರೆಲ್ಲಾ ಒಂದೆಡೆ ಕುಳಿತು ಊಟ ಮಾಡುತ್ತಾರೆ.

ಹಬ್ಬದ ಕುರಿತಂತೆ ಇತಿಹಾಸವನ್ನು ಮೆಲುಕು ಹಾಕಿದರೆ ಭತ್ತವೇ ಸರ್ವಸ್ವವಾಗಿದ್ದ ಕಾಲದಲ್ಲಿ ಅದರ ಸುತ್ತಲೂ ಹಬ್ಬ, ಆಚರಣೆಗಳು ಬಂದಿದ್ದು, ಎಲ್ಲಿ ನೀರಿನ ವ್ಯವಸ್ಥೆಯಿದೆಯೋ ಅಲ್ಲೆಲ್ಲ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಗದ್ದೆಗಳನ್ನು ನಿರ್ಮಿಸಿ ಉಳುಮೆ ಮಾಡಿ ಭತ್ತ ಬೆಳೆಯುತ್ತಿದ್ದ ಅವತ್ತಿನ ಕೃಷಿಕರು ಭತ್ತ ಮನೆಯ ಕಣಜವನ್ನು ಸದಾ ತುಂಬಿರಬೇಕೆಂದು ಬಯಸುತ್ತಿದ್ದರು. ಹೀಗಾಗಿ ಹುತ್ತರಿ ಹಬ್ಬಕ್ಕೆ ತನ್ನದೇ ಆದ ಮಹತ್ವವಿದೆ.. ಕೃಷಿ ಹಿನ್ನಲೆಯಿದೆ..

ಅವತ್ತಿನ ದಿನಗಳಲ್ಲಿ ಭತ್ತದ ಗದ್ದೆ ಉಳುಮೆ ಮಾಡಿ ನಾಟಿ ನೆಡುವುದು, ಅದನ್ನು ಕುಯ್ಲು ಮಾಡಿ ಮನೆಗೆ ತುಂಬಿಸಿಕೊಳ್ಳುವುದು ಎಲ್ಲದರಲ್ಲೂ ಸಂಭ್ರಮ ಕಾಣುತ್ತಿದ್ದರು. ವರ್ಷ ಪೂರ್ತಿ ದುಡಿಮೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದ ರೈತರು ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಿ ತಮ್ಮ ದುಡಿಮೆಯ ಸುಸ್ತನ್ನು ಮರೆಯುತ್ತಿದ್ದರು. ಅವತ್ತು ಹುತ್ತರಿ ಹಬ್ಬವೆಂದರೆ ಅದೇನೋ ಸಡಗರ, ಸಂಭ್ರಮ ಮನೆಮಾಡುತ್ತಿತ್ತು. ಹಬ್ಬಕ್ಕೆ ತಿಂಗಳು ಇರುವಾಗಲೇ ಮನೆಗೆ ಸುಣ್ಣ, ಬಣ್ಣ ಬಳಿಯುವುದು, ಸೇರಿದಂತೆ ಶುಚಿ ಕಾರ್ಯಮಾಡುತ್ತಾ, ಕಣಕ್ಕೆ ಸೆಗಣಿ ಸಾರಿಸಿ ರಂಗೋಲಿಯಿಟ್ಟು ಹಬ್ಬಕ್ಕೆ ಕಾಯಲಾಗುತ್ತಿತ್ತು.

ಮಕ್ಕಳಿಗೆ ಹಬ್ಬದ ಸಂಭ್ರಮ ಪಟಾಕಿ ಹೊಡೆಯುವ ತವಕ. ಒಟ್ಟಾರೆ ಹುತ್ತರಿ ಎಂದರೆ ಸಂಭ್ರಮ ಸಡಗರ ಎದ್ದು ಕಾಣುತ್ತಿತ್ತು. ಕಾಲಕಾಲಕ್ಕೆ ತಕ್ಕಂತೆ ಮಳೆ, ಬಿಸಿಲು, ಚಳಿ ಎಲ್ಲವೂ ಇದ್ದುದರಿಂದ ಹುತ್ತರಿ ಬರುತ್ತಿದ್ದಂತೆಯೇ ನಡುಕ ಹುಟ್ಟಿಸುವ ಚಳಿ, ಮೈತೋಯ್ದು ಹೋಯಿತೇನೋ ಎಂಬಂತೆ ಸುರಿಯುತ್ತಿದ್ದ ಇಬ್ಬನಿ, ಹಸಿರಾಗಿದ್ದ ಭತ್ತದ ಬೆಳೆ ಹೊಂಬಣ್ಣಕ್ಕೆ ತಿರುಗಿ ತೆನೆ ಬಾಗಿ ಹುತ್ತರಿ ಹಬ್ಬವನ್ನು ಸ್ವಾಗತಿಸಲು ನಿಂತಿದೆಯೇನೋ ಎಂಬಂತೆ ಭಾಸವಾಗುತ್ತಿತ್ತು. ಸೇನೆಯಲ್ಲಿದ್ದ ಯೋಧರು ಹಬ್ಬದ ಸಮಯಕ್ಕೆ ಸರಿಯಾಗಿ ರಜೆ ಪಡೆದು ಬರುವ ಪ್ರಯತ್ನ ಮಾಡುತ್ತಿದ್ದರು. ಕೊಡಗಿನಿಂದ ಹೊರಗಿದ್ದು ದುಡಿಯುವ ಮಂದಿಯೂ



ತಪ್ಪದೆ ಬರುತ್ತಿದ್ದರು. ಎಲ್ಲರೂ ಕುಟುಂಬದ ಸದಸ್ಯರೊಂದಿಗೆ ಕಲೆತು ಹಬ್ಬ ಆಚರಿಸುತ್ತಿದ್ದರು.

ಅವತ್ತಿನ ಹಬ್ಬದ ಸಂಭ್ರಮಕ್ಕೂ ಇವತ್ತಿನ ಹಬ್ಬಕ್ಕೂ ವ್ಯತ್ಯಾಸಗಳಾಗಿದೆ. ಆಧುನಿಕ ಭರಾಟೆ ಹಬ್ಬವನ್ನು ಅದ್ದೂರಿತನಕ್ಕೆ ಒಳಪಡಿಸಿದೆಯಾದರೂ ನೈಜ ಸಂತೋಷ ಮರೆಯಾಗಿದೆ. ಹಬ್ಬದ ಸಂಪ್ರದಾಯಗಳು ಬದಲಾಗಿ ಒಂದಷ್ಟು ಉಳಿದುಕೊಂಡಿದೆ ಎನ್ನುವುದನ್ನು ಬಿಟ್ಟರೆ ಅದನ್ನು ಮನಸ್ಸುಪೂರ್ತಿ ಒಪ್ಪಿಕೊಳ್ಳುವ ಮನಸ್ಥಿತಿ ಇಲ್ಲವಾಗಿದೆ. ಭತ್ತ ಬೆಳೆದು ಅದರಿಂದ ಲಾಭ ಪಡೆಯುವುದು ಸಾಧ್ಯವಿಲ್ಲ ಎಂಬ ಲೆಕ್ಕಚಾರದಿಂದಾಗಿ ನಷ್ಟ ಮಾಡಿಕೊಳ್ಳಲು ತಯಾರಿಲ್ಲದ ಬೆಳೆಗಾರರು ಅದನ್ನು ತೋಟವಾಗಿ ಮಾರ್ಪಡಿಸಿದ್ದಾರೆ. ಜತೆಗೆ ಭತ್ತದ ಬೆಳೆಯತ್ತ ಆಸಕ್ತಿಯೂ ಕಡಿಮೆಯಾಗಿದೆ. ಆಧುನಿಕತೆಯ ಭರಾಟೆ, ವಾಣಿಜ್ಯ ಬೆಳೆಗಳ ಲಗ್ಗೆ ಸೇರಿದಂತೆ ಹಲವು ವಿದ್ಯಮಾನಗಳಿಂದಾಗಿ ಹುತ್ತರಿ ಹಬ್ಬದ ಆಚರಣೆಯಲ್ಲಿ ಒಂದಷ್ಟು ಬದಲಾವಣೆಯಾಗಿದ್ದರೂ ಹಬ್ಬದ ಬಗೆಗಿನ ಭಾವನಾತ್ಮಕ ಸಂಬಂಧ ಮಾತ್ರ ಕಡಿಮೆಯಾಗಿಲ್ಲ ಎಂಬುದಕ್ಕೆ ತಾವು ಎಲ್ಲಿಯೇ ಇದ್ದರೂ ಹಬ್ಬಕ್ಕಾಗಿ ತವರಿನತ್ತ ಹೊರಡುವ ಕೊಡಗಿನ ಕುವರ ಕುವರಿಯರು ಸಾಕ್ಷಿಯಾಗಿದ್ದಾರೆ!

---

4 ☞

ಸಾಮಾನ್ಯ ಶಿಕ್ಷಕರ ಜೇಬಿನಿಂದ ಹಣ ಕಸಿಯಲು ಇಂತಹ ಕೇಸ್ ವರ್ಕರ್ ಸಿದ್ದರಿರುತ್ತಾರೆ.

**ತಡವಾದ ಕೇಸ್ ಫೈಲ್**

ಇಲ್ಲಿ ಸರಕಾರಿ ನೌಕರರ ಸಂಘದ ಪದಾಧಿಕಾರಿಗಳು,ಶಿಕ್ಷಕರ ಸಂಘದ ಪ್ರತಿನಿಧಿಗಳು ನಿವೃತ್ತರಾದ ಬಸವರಾಜು ಮೃತರಾದವರ ಪರ ನಿಲ್ಲುವುದೆ ಇಲ್ಲ.ಅವರ ಪತ್ನಿ, ಮಗನಿಗೆ ನ್ಯಾಯಯುತ ಹಣವನ್ನು ಕೊಡಿಸಲು ಮುಂದಾಗದೆ ಇರುವ ಕಾರಣಕ್ಕೆ ಅವರು ಕೆಆರ್‌ಎಸ್ ಪಕ್ಷದ ನೆರವು ಕೋರುತ್ತಾರೆ. ಅವರು ಧಾವಿಸಿದಾಗ ಇದೇ ಕೇಸ್ ವರ್ಕರ್ ಮೃತ ಶಿಕ್ಷಕನ ಪತ್ನಿಯಿಂದ ಅವರ ಮುಂದೆಯೇ ಸಹಿ ಪಡೆದು ಫೈಲ್ ಕಳುಹಿಸುವುದಾಗಿ ಹೇಳುತ್ತಾನೆ. ಬಿಇಓ ಅವರು ಕೂಡ ಮೃತ ಶಿಕ್ಷಕನ ಪರವಾಗಿ ಫೈಲ್‌ನ್ನು ಅವರ ಮಗ ಖುದ್ದು ನೀಡಿದಾಗ ಸುಮ್ಮನೆ ಪುಟಗಳನ್ನು ತಿರುವಿ ಹಾಕಿ ಬೇಕಾದ ದಾಖಲೆಗಳನ್ನು ಲಗತ್ತಿಸಿ ಎಂಬ ಮಾತನ್ನು ಹೇಳಿ ಕಳುಹಿಸುತ್ತಾರೆ. ಇದು ಮಾಗಡಿ ಬಿಇಓ ಕಚೇರಿಯ ನಿವೃತ್ತ ಶಿಕ್ಷಕರ ಸೇವೆ ಸಲ್ಲಿಸುವ ಪರಿ. ಇವರ ಮೇಲಿನ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿರುವರು ಎಂಬುದಂತೂ ಸತ್ಯ.



ಮೃತ ಶಿಕ್ಷಕನ ಪುತ್ರ ಚೇತನ್

**ಶಿಕ್ಷಕರಿಂದ ಪಾಠ ಕಲಿತವರೆ ಲಂಚಕೋರರಾದರೆ?**

ಹೌದು ಎಲ್ಲಾ ಇಲಾಖೆಯ ಅಧಿಕಾರಿ ವರ್ಗ ಪ್ರಾಥಮಿಕ ಶಾಲಾ ಶಿಕ್ಷಕರಿಂದ ಮೂಲ ಶಿಕ್ಷಣದ ಪಾಠವನ್ನು ಕಲಿತು ದೊಡ್ಡವರಾಗಿರುತ್ತಾರೆ. ಶಿಕ್ಷಣ ಇಲಾಖೆ ಕೂಡ ಹೊರತಾಗಿಲ್ಲ. ಇಲ್ಲಿನ ಬಿಇಓ ಮತ್ತು ಸಿಬ್ಬಂದಿ ಶಿಕ್ಷಕರ ವಿಚಾರದಲ್ಲಿ ಲಂಚ ಸ್ವೀಕರಿಸಿ ಹಣ ಮಾಡಿ ತೊಂದರೆ ಕೊಡುವುದು ಸರಿಯಲ್ಲ. ಆದರೂ ಇವರ ದುರಾಸೆ, ಶಿಕ್ಷಣ ಇಲಾಖೆಯ ಬೇರೆ ಆದಾಯವಿಲ್ಲದೆ ಪಾಠ ಹೇಳಿ ಸಂಬಳ ಪಡೆಯುವ ಇವರಿಗೆ ಈ ರೀತಿಯ ಫೈಲ್ ದಾಖಲೆ ಸರಿಯಾಗಿ ಒದಗಿಸದೆ ಸತಾಯಿಸಿ ಲಂಚಕ್ಕೆ ಬೇಡಿಕೆ ಇಡುವುದು ಸರಿಯೇ? ನಾಗರಿಕರು, ಇಲಾಖೆ ಒಮ್ಮೆ ಇದರ ಪರಿಹಾರಕ್ಕೆ ಪ್ರಯತ್ನ ಮಾಡಿ.

**ಕೊನೆ ಫೈಲ್**

ಡಿಲೆ -ಡಿಮ್ಯಾಂಡ್ ಪದ್ದತಿ ಶಿಕ್ಷಣ ಇಲಾಖೆಯಲ್ಲಿಯೆ ಹೆಚ್ಚು. ನಿವೃತ್ತರಾದ ಶಿಕ್ಷಕರು ನೆಮ್ಮದಿಯಾಗಿ ಮನೆಗೆ ಹೋಗಿ ನಿಟ್ಟುಸಿರು ಬಿಡಲು ಶಿಕ್ಷಣ ಇಲಾಖೆ ಸಚಿವರು, ಕರ್ನಾಟಕ ಸರಕಾರ ಕ್ರಮ ವಹಿಸಬೇಕು ಅವರ ನಿಟ್ಟುಸಿರು ನಿಮ್ಮೆಲ್ಲರನ್ನು ಸುಡುವುದಂತೂ ಗ್ಯಾರಂಟಿ.

ಜನಗಣತಿ, ಜಾತಿಗಣತಿ, ನಾಯಿಗಣತಿ ಬದಿಗಿಡಿ.ಎಲ್ಲದಕ್ಕೂ ಶಿಕ್ಷಕರನ್ನು ಬಳಸುವ ಸರಕಾರ ಒಮ್ಮೆ ನಿವೃತ್ತ ಶಿಕ್ಷಕರು ನೆಮ್ಮದಿಯಾಗಿ ಲಂಚ ಕೊಡದೆ ಈ ರಾಜ್ಯದಲ್ಲಿ ಪಿಂಚಣಿ ಪಡೆಯುತ್ತಿರುವರೆ ಅದರ ಗಣರತಿ ಮಾಡಿ ತಿಳಿಸಿ. ಪಾಠ ಮಾಡಿ ದೇಶದ ಭವಿಷ್ಯವನ್ನು ರೂಪಿಸುವ ಶಿಕ್ಷಕರಿಂದಲೆ ಲಂಚ ಪಡೆದು ಸರಕಾರ ನಡೆಸುವ, ಶಾಸಕರನ್ನು ಓಲೈಸುವ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಧಿಕ್ಕಾರ.

-ಖಂಡಪರಶು



ಕೆಆರ್‌ಎಸ್ ಪಕ್ಷದ ಜಿಲ್ಲಾ ಪ್ರತಿನಿಧಿಗಳು ಪ್ರಶ್ನೆಮಾಡುತ್ತಿರುವುದು

# ಮಂಗಳೂರು ಜಿಲ್ಲೆಯ ಇತಿಹಾಸದಲ್ಲೇ ಡ್ರಗ್ ಪೆಡ್ಲರ್‌ಗಳಿಗೆ ಕಠಿಣ ಶಿಕ್ಷೆ ವಿಧಿಸಿದ ಮಂಗಳೂರು ನ್ಯಾಯಾಲಯ

**ದಕ್ಷಿಣ ಕನ್ನಡ**

ಮೋಹನ್ ಬೋಳಂಗಡಿ

ವಿದೇಶದಿಂದ ಮಾದಕ ವಸ್ತುಗಳನ್ನು ಕಳ್ಳ ಸಾಗಾಣಿಕೆಯ ಮೂಲಕ ತರಿಸಿಕೊಂಡು ರಾಜ್ಯದಾದ್ಯಂತ ವಿತರಣೆ ಮಾಡುವಂತಹ ವ್ಯವಸ್ಥಿತ ಜಾಲ ಹಲವು ಸಮಯಗಳಿಂದ ನಡೆಯುತ್ತಿದೆ. ರಾಜ್ಯದ ಪ್ರತಿಯೊಂದು ಜಿಲ್ಲೆಯ ಪೊಲೀಸರು ಈ ಜಾಲದ ಬೆನ್ನುಮೂಳೆ ಮುರಿಯಲು ಟೊಂಕ ಕಟ್ಟಿ ನಿಂತಿದ್ದಾರೆ. ಐಟಿ ಸಿಟಿಯಾಗಿರುವ ಬೆಂಗಳೂರು, ಸಾಂಸ್ಕೃತಿಕ ನಗರಿ ಮೈಸೂರು, ವಿದ್ಯಾಕಾಶಿ ಮಂಗಳೂರು ವ್ಯಾವಹಾರಿಕ ರಾಜಧಾನಿ ಹುಬ್ಬಳ್ಳಿ, ಧಾರವಾಡ ಮೊದಲಾದ ನಗರಗಳನ್ನು ಕೇಂದ್ರೀಕರಿಸಿಕೊಂಡು ಈ ಜಾಲ ಕಾರ್ಯನಿರ್ವಹಿಸುತ್ತಿದೆ. ಒಂದು ಲೆಕ್ಕಾಚಾರದ ಪ್ರಕಾರ ದಿನವೊಂದಕ್ಕೆ 10 ಕೋಟಿ ರೂ.ಗಳಿಗೂ ಮಿಕ್ಕಿದ ವ್ಯವಹಾರ ಇದಾಗಿದೆ. ಇದರಲ್ಲಿ ಹಲವು ವಿಧದ ಮಾದಕ ವಸ್ತುಗಳನ್ನು ಸಾಗಾಟ ಮಾಡಲಾಗುತ್ತಿದೆ. ಗಾಂಜಾದಂತಹ ಮಾದಕ ವಸ್ತುವನ್ನು ಗಿಡಗಳ ರೂಪದಲ್ಲಿ ಬೆಳೆಸಲಾಗುತ್ತಿದ್ದರೆ ಉಳಿದ ಮಾದಕ ವಸ್ತುಗಳನ್ನು ಪ್ರಯೋಗಾಲಯದಲ್ಲಿ ವಿವಿಧ ರೀತಿಯ ರಾಸಾಯನಿಕ ಪದಾರ್ಥಗಳನ್ನು ಮಿಶ್ರಣ ಮಾಡಿ ತಯಾರಿಸಲಾಗುತ್ತಿದೆ. ಇದನ್ನು ಗ್ರಾಹಕನಿಗೆ ಒದಗಿಸುವ ಸಂಪರ್ಕ ಜಾಲವು ಅತ್ಯಂತ ಗೌಪ್ಯವಾಗಿ ಕಾರ್ಯ ನಿರ್ವಹಿಸುತ್ತಿದೆ. ಇಂತಹ ಜಾಲವನ್ನು ಪೊಲೀಸರು ಶತಪ್ರಯತ್ನ ಪಟ್ಟು ಭೇದಿಸಿದರೂ ಅವರಿಗೆ ನ್ಯಾಯಾಲಯ ಕಠಿಣ ಶಿಕ್ಷೆ ವಿಧಿಸುವುದು ಅಪರೂಪ. ಯಾಕೆಂದರೆ ಕೆಲವೊಂದು ತಾಂತ್ರಿಕ ಕಾರಣಗಳಿಂದ ಆರೋಪಿಗಳ ಮೇಲೆ ಹೊರಿಸಲಾಗಿರುವಂತಹ ಆರೋಪವನ್ನು ಸಾಬೀತು ಪಡಿಸಲು ಪ್ರಾಸಿಕ್ಯೂಶನ್‌ಗೆ ಸಾಧ್ಯವಾಗುವುದಿಲ್ಲ. ಆದರೆ ಮಂಗಳೂರಿನ ನ್ಯಾಯಾಲಯ ಮಾದಕ ವಸ್ತು ಪೂರೈಕೆ ಮಾಡಿದ್ದಂತಹ ಐವರು ಆರೋಪಿಗಳಿಗೆ 12ರಿಂದ 14 ವರ್ಷಗಳ ಕಾಲ ಕಠಿಣ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ಇದು ರಾಜ್ಯದ ನ್ಯಾಯಾಂಗ ಇತಿಹಾಸದಲ್ಲಿಯೇ ಪ್ರಥಮವಾದಂತಹ ತೀರ್ಪು. ಇದರ ಪರಿಣಾಮವಾಗಿ ರಾಜ್ಯದ ಪೊಲೀಸರು ಸತತವಾಗಿ ನಡೆಸುತ್ತಿರುವಂತಹ ಮಾದಕ ವಸ್ತು ಸಾಗಾಣೆಯ ವಿರುದ್ದದ ಕಾರ್ಯಾಚರಣೆಗೆ ಬ್ರೇಕ್ ಬೀಳುವ ಸಾಧ್ಯತೆಗಳಿವೆ.


ಆರೋಪಿಗಳಾದ ಡೇನಿಯಲ್, ರಮೀಜ್, ಸಬಿತಾ

**ಅಂದೇನಾಗಿತ್ತು?**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರಲ್ಲೂ ಮಂಗಳೂರು ನಗರವನ್ನು ಕೇಂದ್ರೀಕರಿಸಿಕೊಂಡು ಮಾದಕ ವಸ್ತುಗಳ ಸಾಗಾಣೆ ಜಾಲ ಸಕ್ರಿಯವಾಗಿದ್ದಂತಹ ಕಾಲ. ಮಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದವರು ಅನುಪಮ್ ಅಗರ್‌ವಾಲ್. ಈ ಜಾಲವನ್ನು ಬುಡ ಸಹಿತ ಕಿತ್ತು ಹಾಕಬೇಕೆಂದು ಟೊಂಕಕಟ್ಟಿ ನಿಂತಿದ್ದರು. ಇನ್ಸ್‌ಪೆಕ್ಟರ್ ಮಹೇಶ್ ಪ್ರಸಾದ್ ನೇತೃತ್ವದ ಸಿಸಿಬಿ ಪೊಲೀಸರ ತಂಡವನ್ನು ಈ ಜಾಲವನ್ನು ಪತ್ತೆಹಚ್ಚುವ ಸಲುವಾಗಿಯೇ ಕಾರ್ಯಾಚರಣೆಗೆ ಸೂಚನೆ ನೀಡಿದ್ದರು. ಆ ತಂಡದ ಎಲ್ಲಾ ಸಿಬ್ಬಂದಿಗಳು ಈ ಜಾಲದ ವಿರುದ್ಧ ಮುರಕೊಂಡು ಬಿದ್ದಿದ್ದರು.


ಆರೋಪಿಗಳಾದ ರಾಶೀದ್, ರವೂಫ್

ಇಂತಹ ಸಂದರ್ಭದಲ್ಲಿಯೇ ಅಂದರೆ 2022 ಜೂನ್ 14ರಂದು ರಾತ್ರಿ 11 ಗಂಟೆಯ ವೇಳೆಗೆ ಇನ್ಸ್ ಪೆಕ್ಟರ್ ಮಹೇಶ್ ಪ್ರಸಾದ್ ಅವರಿಗೆ ಸ್ಪಷ್ಟವಾದ ಮಾಹಿತಿಯೊಂದು ಬಂದಿತ್ತು. ಬೆಂಗಳೂರಿನಿಂದ ಮಂಗಳೂರಿಗೆ ಕಾರಿನಲ್ಲಿ ಭಾರೀ ಪ್ರಮಾಣದ ಎಂಬಿಎಂ ಮಾತ್ರೆಗಳನ್ನು ಸಾಗಾಟ ಮಾಡಲಾಗುತ್ತಿದೆ. ತೋರಿಕೆಗೆ ಕಾರಿನಲ್ಲಿ ಕುಟುಂಬವೊಂದು ಪ್ರಯಾಣಿಸುತ್ತಿದೆ ಎನ್ನುವ ರೀತಿಯಲ್ಲಿದೆ. ಕಾರನ್ನು ಮತ್ತು ಅದರಲ್ಲಿ ಪ್ರಯಾಣಿಸುವವರನ್ನು ಅಮೂಲಾಗ್ರವಾಗಿ ತಪಾಸಣೆ ನಡೆಸಿದರೆ ಭಾರೀ ಪ್ರಮಾಣದ ಮಾದಕ ವಸ್ತು ಸಿಗುವ ಸಾಧ್ಯತೆಗಳಿದೆ ಎಂಬ ಮಹತ್ವದ ಮಾಹಿತಿ ಅದಾಗಿತ್ತು. ಅಪರಾತ್ರಿಯಲ್ಲೂ ಇಂತಹ ಮಾಹಿತಿಯನ್ನು ಸಂಗ್ರಹಿಸಿ ಕಾರ್ಯಾಚರಣೆಗೆ ತಂಡವೊಂದನ್ನು ತಯಾರಿಸಿದರು ಇನ್ಸ್‌ಪೆಕ್ಟರ್ ಮಹೇಶ್ ಪ್ರಸಾದ್. ಅಂದಿನ ಸಿಸಿಬಿ ಸಬ್‌ಇನ್ಸ್‌ಪೆಕ್ಟರ್ ಪ್ರದೀಪ್ ಟಿಆರ್ ನೇತೃತ್ವದಲ್ಲಿ ಪೊಲೀಸರ ತಂಡ ಮಂಗಳೂರಿಗೆ ಮುಖ್ಯ ಹೆಬ್ಬಾಗಿಲೇ ಆಗಿರುವಂತಹ ಪಡೀಲ್ ಜಂಕ್ಷನ್‌ನಲ್ಲಿ ರಾತ್ರಿ ಇಡೀ ಕಾದು ನಿಂತಿದ್ದರು. ಜೂನ್ 15ರಂದು ಮುಂಜಾನೆ 6.15ರ ವೇಳೆಗೆ ಮಾಹಿತಿದಾರ ಕೊಟ್ಟ ಮಾಹಿತಿಯ ಕಾರು ಬರುತ್ತಿತ್ತು. ಅದನ್ನು ತಡೆದು ಶೋಧಿಸಿದಾಗ ಅದರಲ್ಲಿ ಪ್ರಯಾಣಿಸುತ್ತಿದ್ದವರ ಬಳಿ ಎಂಡಿಎಂಎ ಎಂಬ ಮಾದಕ ವಸ್ತು ಪತ್ತೆಯಾಯಿತು. ಕಾರಿನಲ್ಲಿ ಡಿಜಿಟಲ್ ತೂಕ ಮಾಪಕ, ತಾಮ್ರದ ತಂತಿ ಸುತ್ತಿದ್ದಂತಹ ಗಾಜಿನ ಕೊಳವೆ ಪತ್ತೆಯಾಗಿತ್ತು. ಕಾರಿನಲ್ಲಿದ್ದ ಆರೋಪಿತರನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿದಾಗ ಅವರೆಲ್ಲರೂ ಮಾದಕ ವಸ್ತುಗಳು ಸೇವಿಸಿದ್ದರು ಅಲ್ಲದೆ ಅವರ ಬಳಿ ಮಾದಕ ವಸ್ತುಗಳು ಪತ್ತೆಯಾಗಿತ್ತು. ಅವರನ್ನು ವಶಕ್ಕೆ ತೆಗೆದುಕೊಂಡು ಸಿಸಿಬಿ ಕಚೇರಿಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಿದಾಗ ಅವರಲ್ಲಿ ಒಬ್ಬ ಸೂಡಾನ್ ದೇಶದ ಪ್ರಜೆಯಾಗಿದ್ದ. ಆತನ ಹೆಸರು ಲೂಯಿಸ್ ಡೇನಿಯಲ್ ಜಸ್ಟಿನ್ ಬೌಲೋ ಅಲಿಯಾಸ್ ಡ್ಯಾನಿ ಆಗಿತ್ತು. ಆತ ಕೆಲವು ವರ್ಷಗಳ ಹಿಂದೆ ಸೂಡಾನ್ ದೇಶದಿಂದ ವಿದ್ಯಾರ್ಥಿ ವೀಸಾದಲ್ಲಿ ಬೆಂಗಳೂರಿಗೆ ಬಂದು ವಾಸವಿದ್ದು, ಈ ದಂಧೆಯಲ್ಲಿ ನಿರತನಾಗಿದ್ದ. ಈತನ ಜೊತೆ ಕಾಸರಗೋಡು ಜಿಲ್ಲೆಯ ಉಪ್ಪಳದ ರಮೀರ್ (24), ಸಿರಿಯಾದ ಮೊಹಿಯುದ್ದೀನ್ ರಾಶಿದ್ (24), ಉಪ್ಪಳ ಮುಳಿಂಜದ ಅಬ್ದುಲ್ ರವೂಫ್ ಯಾನೆ ಟಫ್ ರವೂಫ್ (35) ಮತ್ತು ತಮಿಳ್ನಾಡು ಊಟಿಯ, ಬೆಂಗಳೂರಿನಲ್ಲಿ ವಾಸವಿದ್ದ ಸಬಿತಾ ಅಲಿಯಾಸ್ ಚಿಂಚು (25) ರವರನ್ನು ವಶಕ್ಕೆ ಪಡೆದುಕೊಂಡು ಮಾದಕ ವಸ್ತುಗಳನ್ನು ಮತ್ತು ಕಾರನ್ನು ವಶಪಡಿಸಿಕೊಳ್ಳಲಾಗಿತ್ತು.

ಸೂಡಾನ್ ದೇಶದ ಪ್ರಜೆಯಾಗಿದ್ದ ಲೂಯಿಸ್ ಡೇನಿಯಲ್ ಜಸ್ಟಿನ್ ಬೌಲೋ ಅಲಿಯಾಸ್ ಡ್ಯಾನಿ ಈ ದಂಧೆಯ ಪ್ರಮುಖ ರೂವಾರಿಯಾಗಿದ್ದು, ವಿದೇಶದಿಂದ ವಿವಿಧ ರೀತಿಯಲ್ಲಿ ಮಾದಕ ವಸ್ತುಗಳನ್ನು ತರಿಸಿಕೊಂಡು ವ್ಯವಹಾರ ಮಾಡುತ್ತಿದ್ದ. ಆತನನ್ನು ಸಂಪರ್ಕಿಸಿದ್ದ ಇತರ ಆರೋಪಿಗಳು ಆತನಿಂದ ಮಾದಕ ವಸ್ತುಗಳನ್ನು ಖರೀದಿಸಿ ತಂದು ಮಂಗಳೂರು ಮತ್ತು ಕಾಸರಗೋಡು ಪರಿಸರದಲ್ಲಿ ವಿತರಿಸುತ್ತಿದ್ದರು. ಮಹಮ್ಮದ್ ರಮೀರ್‌ನ ಉಪ್ಪಳದ ಮನೆಯಲ್ಲಿ ಶೋಧ ನಡೆಸಿದ್ದ ಸಂದರ್ಭದಲ್ಲಿ 10.21 ಗ್ರಾಂ ಮಾದಕ ವಸ್ತು ಪತ್ತೆಯಾಗಿತ್ತು. ಮಾದಕ ವಸ್ತುಗಳನ್ನು ಸಾಗಾಟ ಮಾಡಲು ವಿಎಂ ಇಮ್ತಿಯಾರ್ ಅಹ್ಮದ್ ಹೊಂದಿದ್ದ ಕಾರನ್ನು ಬಳಸಲಾಗುತ್ತಿತ್ತು. ಅದನ್ನು ರಮೀರ್ ಚಲಾಯಿಸುತ್ತಿದ್ದ. ಈ ಪ್ರಕರಣ ತನಿಖೆ ನಡೆಸಿದ್ದ ಸೆನ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸತೀಶ್ ಎಂ.ಪಿ ಅವರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಈ ಪ್ರಕರಣದ ವಿಚಾರಣೆ ನಡೆಸಿದ ಮಂಗಳೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಬಸವರಾಜ ಅವರು 24 ಸಾಕ್ಷಿಗಳನ್ನು ವಿಚಾರಣೆಗೊಳಪಡಿಸಿದ್ದು, 172 ದಾಖಲೆಗಳನ್ನು ಗುರುತಿಸಿದ್ದರು. ಡಿ. 1ರಂದು ಆರೋಪಿಗಳು ತಪ್ಪಿತಸ್ತರು ಎಂದು ಘೋಷಿಸಿದ್ದು, ಡಿ.6ರಂದು ಶಿಕ್ಷೆ ಪ್ರಕಟಿಸಿದ್ದಾರೆ.

ಈ ಪ್ರಕರಣದ ಪ್ರಮುಖ ಆರೋಪಿಗಳಾದ ಲೂಯಿಸ್ ಡೇನಿಯಲ್ ಜಸ್ಟಿನ್ ಬೌಲೋ ಅಲಿಯಾಸ್ ಡ್ಯಾನಿ, ಮೊಹಿಯುದ್ದೀನ್ ರಾಶಿದ್, ಸಬಿತಾ ಅಲಿಯಾಸ್

☞13

## ಸಮರ್ಥ ವಾದ ಮಂಡಿಸಿ ಸರಕಾರಿ ಅಭಿಯೋಜಕರಿಗೆ ಮಂಗಳೂರು ಪೊಲೀಸ್ ಆಯುಕ್ತ ಕಚೇರಿಯಲ್ಲಿ ಸನ್ಮಾನ

ಮಂಗಳೂರು ನಗರಕ್ಕೆ ನಿಷೇಧಿತ ಮಾದಕ ವಸ್ತು ಎಂಡಿಎಂಎ ಪೂರೈಕೆ ಮಾಡುತ್ತಿದ್ದ ಆರೋಪಿಗಳನ್ನು ಮಂಗಳೂರು ಸಿಸಿಬಿ ಘಟಕದ ಅಧಿಕಾರಿ, ಸಿಬ್ಬಂದಿಗಳು ಪತ್ತೆಹಚ್ಚಿ, ಮಾದಕ ವಸ್ತುಗಳನ್ನು ಸ್ವಾಧೀನಪಡಿಸಿ, ಆರೋಪಿತರನ್ನು ಬಂಧಿಸಿ ತನಿಖೆ ನಡೆಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತಾರೆ.

ದಿನಾಂಕ 14-06-2022ರಂದು ಮಂಗಳೂರು ಸೆನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಅ.ಕ್ರ. 54/2022 ಪ್ರಕರಣಕ್ಕೆ ಸಂಬಂಧಿಸಿ, ಮಂಗಳೂರಿನ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ದಿನಾಂಕ 6-12-2025ರಂದು ಓರ್ವ ಸುಡಾನ್ ದೇಶದ ಪ್ರಜೆ ಸಹಿತ ಐದು ಮಂದಿ ಆರೋಪಿಗಳಿಗೆ ತಲಾ 12ರಿಂದ 14 ವರ್ಷದ ತನಕ ಕಠಿಣ ಸಜೆ ಮತ್ತು ದಂಡದ ಶಿಕ್ಷೆ ವಿಧಿಸಿ ಮಾನ್ಯ ನ್ಯಾಯಾಲಯವು ತೀರ್ಪು ನೀಡಿರುತ್ತದೆ.

ಈ ಪ್ರಕರಣದಲ್ಲಿ ಅಭಿಯೋಜನೆಯ ಪರವಾಗಿ ಸಮರ್ಥವಾಗಿ ವಾದ ಮಂಡಿಸಿ, ಸಾಕ್ಷ್ಯಾಧಾರಗಳನ್ನು ನ್ಯಾಯಾಲಯದ ಮುಂದೆ ಸಾಬೀತುಪಡಿಸುವಲ್ಲಿ ಮಹತ್ತರದ ಪಾತ್ರ ವಹಿಸಿದ ಸರಕಾರಿ ಅಭಿಯೋಜಕರಾದ ಶ್ರೀಮತಿ ಜುಡಿತ್ ಓಲ್ಗ ಮಾರ್ಗರೇಟ್ ಕ್ರಾಸ್ತಾ ಇವರನ್ನು ಸುಧೀರ್ ಕುಮಾರ್ ರೆಡ್ಡಿ, ಐಪಿಎಸ್, ಪೊಲೀಸ್ ಆಯುಕ್ತರು, ಮಂಗಳೂರು ನಗರ ಇವರು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಪೊಲೀಸ್ ಇಲಾಖೆಯ ವತಿಯಿಂದ ಸನ್ಮಾನಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ) ಮಿಥುನ್ ಐಪಿಎಸ್, ಎಸಿಪಿ ರವೀಶ್ ನಾಯಕ್‌ರವರು ಉಪಸ್ಥಿತರಿದ್ದರು.



# ಸೌಜನ್ಯ ಫೈಲ್ಸ್



10

ನಿರೂಪಣೆ :

ಮೋಹನ್ ಬೋಳಂಗಡಿ

# ನ್ಯಾಯಾಲಯಕ್ಕೆ ಸಂತೋಷ್ ಪರ ಜಾಮೀನು ಅರ್ಜಿ ಸಲ್ಲಿಕೆ!

ಸೌಜನ್ಯ ಹತ್ಯಾ ಪ್ರಕರಣದ ಪೂರಕ ತನಿಖೆಯನ್ನು ಮುಗಿಸಿದ ಸಿಬಿಐ ಅಧಿಕಾರಿಗಳು ಬೆಂಗಳೂರಿನ ಸಿಬಿಐ ನ್ಯಾಯಾಲಯಕ್ಕೆ ಆರೋಪ ಪಟ್ಟಿಯನ್ನು ಸಲ್ಲಿಸಿದ ತಕ್ಷಣ ಎಚ್ಚೆತ್ತುಕೊಂಡದ್ದು ಸೌಜನ್ಯ ಪರ ಹೋರಾಟ ನಡೆಸುತ್ತಿದ್ದ ರಾಷ್ಟ್ರೀಯ ಹಿಂದೂ ಜಾಗರಣಾ ವೇದಿಕೆಯ ಸ್ಥಾಪಕಾಧ್ಯಕ್ಷ ಮಹೇಶ್ ತಿಮರೋಡಿ. ಅವರಿಗೆ ಸಾಥ್ ಕೊಟ್ಟದ್ದು ಗುರುವಾಯನಕೆರೆಯ ನಾಗರೀಕ ಸೇವಾ ಟ್ರಸ್ಟ್‌ನ ಸೋಮನಾಥ ನಾಯಕ್. ಇಬ್ಬರೂ ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಹಾಗೂ ಡಿ. ವಿರೇಂದ್ರ ಹೆಗ್ಗಡೆಯವರ ವಿರುದ್ಧ ಒಂದಲ್ಲ ಒಂದು ಕಾರಣದಿಂದ ಹೋರಾಟ ಮಾಡಿಕೊಂಡು ಬಂದಿದ್ದವರು. ಇಬ್ಬರೂ ಜೊತೆಯಾಗಿ ಸೌಜನ್ಯ ಪ್ರಕರಣವನ್ನು ಕಾನೂನು ಬದ್ಧವಾಗಿ ಕ್ಷೇತ್ರದ ವಿರುದ್ಧ ಜನಾಭಿಪ್ರಾಯ ಮೂಡಿಸಲು ಯೋಜನೆ ರೂಪಿಸಿದರು. ಯಾವಾಗ ಸಿಬಿಐ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿತೋ ಆ ಸಂದರ್ಭದಲ್ಲಿ ಮೂರು ವರ್ಷಗಳ ಕಾಲ ನ್ಯಾಯಾಂಗ ಬಂಧನದಲ್ಲಿರುವಂತಹ ಆರೋಪಿ ಸಂತೋಷ್‌ರಾವ್‌ನನ್ನು ಜಾಮೀನಿನ ಮೇರೆಗೆ ಬಿಡುಗಡೆಗೊಳಿಸುವಂತಹ ಐಡಿಯಾವನ್ನು ಸೋಮನಾಥ ನಾಯಕ್ ಅವರು ರೂಪಿಸಿದರು. ಅಲ್ಲದೇ ತಿಮರೋಡಿಯೊಂದಿಗೆ ಮಾತನಾಡಿ ಆತನಿಗೆ ವಕೀಲರ ನೆರವು ನೀಡಲು ನಿರ್ಧರಿಸಿ ಬೆಂಗಳೂರಿನಲ್ಲಿ ವಕೀಲ ವೃತ್ತಿ ನಡೆಸುತ್ತಿರುವ ಸುಳ್ಯ ಮೂಲದ ಮೋಹಿತ್ ಕುಮಾರ್ ಅವರನ್ನು ಸಂಪರ್ಕಿಸಿದರು. ಸಿಬಿಐನವರು ಈ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡ ಹಿನ್ನೆಲೆಯಲ್ಲಿ ಮತ್ತು ಬೆಂಗಳೂರಿನ ಸಿಬಿಐ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲಾಗಿದ್ದರಿಂದ ಸಂತೋಷ್‌ರಾವ್‌ನನ್ನು ಮಂಗಳೂರಿನ ಸಬ್ ಜೈಲಿನಿಂದ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರೀಯ ಕಾರಾಗೃಹಕ್ಕೆ ವರ್ಗಾಯಿಸಲಾಗಿತ್ತು.



ಮೋಹಿತ್ ಕುಮಾರ್

ಈ ಸಂದರ್ಭದಲ್ಲಿ ನ್ಯಾಯಾಲಯದಲ್ಲಿ ಆತನ ಪರವಾಗಿ ವಕಾಲತ್ತು ವಹಿಸಿಕೊಳ್ಳಲು ಆರೋಪಿಯ ಸಹಿ ಅಗತ್ಯ ಇಲ್ಲದೇ ಇದ್ದುದರಿಂದ ಮಹೇಶ್ ಶೆಟ್ಟಿ ತಿಮರೋಡಿ ಮತ್ತಯ ಸೋಮನಾಥ್ ನಾಯಕ್ ಅವರು ಸುಳ್ಯ ಮೂಲದ ಮೋಹಿತ್ ಕುಮಾರ್ ಅವರನ್ನು ಸಂಪರ್ಕಿಸಿದ್ದರು. ಸಾಮಾನ್ಯವಾಗಿ ಸಾರ್ವಜನಿಕ ವಲಯದಲ್ಲಿ ಅಲ್ಲೋಲ ಕಲ್ಲೋಲ ಎಬ್ಬಿಸಿದಂತಹ ಪ್ರಕರಣವನ್ನು ಕೈಗೆತ್ತಿಕೊಳ್ಳಲು ವಕೀಲರು ಹಿಂದೆ ಮುಂದೆ ಯೋಚನೆ ಮಾಡುತ್ತಾರೆ. ಆದರೆ ಮೋಹಿತ್ ಕುಮಾರ್ ಈ ಪ್ರಕರಣವನ್ನು ಕೈಗೆತ್ತಿಕೊಂಡರು. ಅವರನ್ನು ಈ ಪ್ರಕರಣವನ್ನು ನಿರ್ವಹಿಸಲು ಸಂಪರ್ಕಿಸಿದ್ದು, ಆರೋಪಿಯ ಪರವಾಗಿ ಇರುವವರು ಅಲ್ಲ. ಬದಲಾಗಿ ಆರೋಪಿಯ ವಿರುದ್ಧ ಹೋರಾಟವನ್ನು ಸಂಘಟಿಸಿದ್ದಂತಹ ವ್ಯಕ್ತಿಗಳು. ಆಗಲೇ ಮೋಹಿತ್ ಕುಮಾರ್ ಅವರಿಗೆ ಈ ಪ್ರಕರಣವನ್ನು ನ್ಯಾಯಾಲಯದಲ್ಲಿ ಹೇಗಾದರೂ ಮಾಡಿ ಬಡಿದಾಡಿ ಗೆಲ್ಲಬಹುದು ಎನ್ನುವ ವಿಶ್ವಾಸ ಇತ್ತು. ಏಕೆಂದರೆ ಪ್ರಕರಣವನ್ನು ವಹಿಸಿಕೊಟ್ಟವರು ಸಂತ್ರಸ್ತ ಕುಟುಂಬಕ್ಕೆ ಹತ್ತಿರವಾಗಿದ್ದವರು. ಸಾಮಾನ್ಯವಾಗಿ ಕೊಲೆ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಪೊಲೀಸರು ಸಂತ್ರಸ್ತ ಕುಟುಂಬಕ್ಕೆ ಸಂಬಂಧಪಟ್ಟವರನ್ನು ಸಾಕ್ಷಿಗಳನ್ನಾಗಿ ಹೆಸರಿಸುತ್ತಾರೆ. ಅಂತಹ ಸಾಕ್ಷಿಗಳೇ ಆರೋಪಿಯ ಪರವಾಗಿ ಇರುವಂತೆ ನೋಡಿಕೊಂಡರೆ ಕೇಸು ಅರ್ಧ ಗೆದ್ದಂತೆ. ಯಾವುದೇ ತನಿಖಾ ಏಜೆನ್ಸಿಗಳು ತನಿಖೆ ನಡೆಸಿದ್ದರೂ ಸಹ ನ್ಯಾಯಾಲಯ ತಮ್ಮ ಮುಂದಿರುವಂತಹ ದಾಖಲೆಗಳು ಮತ್ತು ಸಾಕ್ಷ್ಯಗಳು ಮಾತ್ರ ಪರಿಗಣಿಸುತ್ತದೆ. ಸಾಕ್ಷ್ಯಗಳಲ್ಲಿ ಮತ್ತು ಸಾಕ್ಷಿಗಳ ಹೇಳಿಕೆಯಲ್ಲಿ ವ್ಯತ್ಯಾಸಗಳು ಕಂಡು ಬಂದರೆ ಸಂಶಯದ ಲಾಭ ಸೃಷ್ಟಿಯಾಗುತ್ತದೆ. ಅಂತಹ ಲಾಭ ಆರೋಪಿಗೆ ವರದಾನವಾಗುತ್ತದೆ. ಇದು ಕಾನೂನಿನ ಮೂಲ ಮಂತ್ರ. ಈ ವಿಚಾರ ಗೊತ್ತಿಲ್ಲದವರು ಮೋಹಿತ್ ಕುಮಾರ್ ಅಲ್ಲ. ಆದ್ದರಿಂದಲೇ ಅವರು ಈ ಪ್ರಕರಣವನ್ನು ಕೈಗೆತ್ತಿಕೊಂಡರು ಮತ್ತು ಆರೋಪಿ ಸಂತೋಷ್‌ರಾವ್ ಪರ ಸಿಬಿಐ ನ್ಯಾಯಾಲಯಕ್ಕೆ ವಕಾಲತ್ತು ಸಲ್ಲಿಸಿದರು. ಆ ಪ್ರಕರಣ ನ್ಯಾಯಾಲಯದ ಮುಂದೆ ಬಂದ ಸಂದರ್ಭದಲ್ಲಿ ನ್ಯಾಯಾಲಯವು ಆರೋಪ ಪಟ್ಟಿ ಪ್ರತಿಯನ್ನು ಆರೋಪಿಗೆ ಕೊಡಬೇಕು ಆರೋಪಿಯ ಪರವಾಗಿ ಮೋಹಿತ್ ಕುಮಾರ್ ವಕಾಲತ್ತು ಸಲ್ಲಿಸಿದ್ದರಿಂದ ಆರೋಪ ಪಟ್ಟಿಯ ಪ್ರತಿ ಯನ್ನು ಅವರು ಸ್ವೀಕರಿಸಿದ್ದರು.



ಸೋಮನಾಥ್ ನಾಯಕ್

ನೂರಾರು ಪುಟಗಳಿದ್ದ ಆರೋಪ ಪಟ್ಟಿಯಲ್ಲಿ 80ಕ್ಕೂ ಹೆಚ್ಚು ಸಾಕ್ಷಿದಾರರಿದ್ದರು. ಅವರಲ್ಲಿ ಯಾರೊಬ್ಬರೂ ಪ್ರತ್ಯಕ್ಷದರ್ಶಿ ಸಾಕ್ಷಿಗಳಲ್ಲ. ತನಿಖೆ ನಡೆಸಿದಂತಹ ಪೊಲೀಸರು, ಸಿಓಡಿ ಅಧಿಕಾರಿಗಳು ಮತ್ತು ಸಿಬಿಐ ಅಧಿಕಾರಿಗಳು ಸಾಂದರ್ಭಿಕ ಸಾಕ್ಷಿಗಳನ್ನೇ ಬಳಸಿಕೊಂಡು ಆರೋಪಿಯ ಮೇಲೆ ಆರೋಪ ಹೊರಿಸಿ ಆರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ಮೂಲ ದೂರುದಾರ ಸಂತ್ರಸ್ತೆಯ ತಂದೆ ಚಂದಪ್ಪಗೌಡರಿಂದ ಹಿಡಿದು 16 ಸಾಕ್ಷಿಗಳು ಆ ಕುಟುಂಬಕ್ಕೆ ಸಂಬಂಧಪಟ್ಟವರು ಮತ್ತು ಪರಿಚಿತರು ಆಗಿದ್ದರು. ಆದ್ದರಿಂದ ಆ ಕುಟುಂಬದೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಸೋಮನಾಥ್ ನಾಯಕ್ ಅವರೇ ಈ ಪ್ರಕರಣವನ್ನು ವಹಿಸಿಕೊಟ್ಟಿದ್ದರಿಂದ ಸಾಕ್ಷಿದಾರರನ್ನು ಪ್ರಾಸಿಕ್ಯೂಶನ್‌ಗೆ ವಿರುದ್ಧವಾಗಿ ಸಾಕ್ಷಿ ಹೇಳಿಕೆಯನ್ನು ದಾಖಲಿಸಿಕೊಳ್ಳಬಹುದು ಎಂದು ವಕೀಲ ಮೋಹಿತ್ ಕುಮಾರ್ ಆಲೋಚಿಸಿದ್ದರು. ಸಾಕ್ಷಿಗಳ ವಿಚಾರಣೆಯ ಸಂದರ್ಭದಲ್ಲಿ ಸಿಬಿಐ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗುವ ವಕೀಲರು ಯಾವ ರೀತಿಯಲ್ಲಿ ವಾದವನ್ನು ಮಂಡಿಸಬಹುದೋ ಅದಕ್ಕೆ ಪ್ರತಿಯಾಗಿ ವಾದ ಮಂಡಿಸಿದರೆ ಪ್ರಕರಣ ಗೆಲ್ಲುವುದು ಕಷ್ಟವಲ್ಲ ಎಂಬ ಭಾವನೆ ವಕೀಲ ಮೋಹಿತ್ ಕುಮಾರ್‌ರವರದ್ದು ಆಗಿತ್ತು. ಆದರೆ ಆರೋಪಿ ಸಂತೋಷ್ ರಾವ್ ನ್ಯಾಯಾಂಗ ಬಂಧನದಲ್ಲಿ ಇರುವಂತಹ ಸಂದರ್ಭದಲ್ಲಿ ವಿಚಾರಣೆಯನ್ನು ಕೈಗೆತ್ತಿಕೊಂಡರೆ ನ್ಯಾಯಾಲಯ ಬೇರೆ ರೀತಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಬಹುದು ಎನ್ನುವ ಕಾರಣದಿಂದಾಗಿ ಸಂತೋಷ್‌ರಾವ್‌ಗೆ ಜಾಮೀನು ಕೋರಲು ನಿರ್ಧರಿಸಲಾಯಿತು. ಅದರಂತೆ ವಕೀಲ ಮೋಹಿತ್ ಕುಮಾರ್ ಅವರು ಸಿಬಿಐ ನ್ಯಾಯಾಲಯಕ್ಕೆ ಜಾಮೀನು ಅರ್ಜಿ ಸಲ್ಲಿಸಿ ವಾದ ಮಂಡಿಸಿದರು.



ಸಂತೋಷ್ ರಾವ್

ಅವರ ವಾದದ ಸಾರಾಂಶ ಏನೆಂದರೆ ಸಂತ್ರಸ್ತೆಯನ್ನು ಅತ್ಯಾಚಾರ ಮಾಡಿ ಕೊಲೆಗೈಯ್ಯಲಾಗಿದೆ ಎಂದು ಪ್ರಾಸಿಕ್ಯೂಶನ್ ಆರೋಪಿಸಿದೆ. ಕೃತ್ಯ ನಡೆದಿದೆ ಎನ್ನುವುದಕ್ಕೆ ಪ್ರತ್ಯಕ್ಷ ಸಾಕ್ಷಿಗಳಿಲ್ಲ. ಆರೋಪಿ ಘಟನಾ ಸ್ಥಳದಲ್ಲಿ ಇದ್ದ ಎನ್ನುವುದಕ್ಕೆ ಪೂರಕ ಸಾಕ್ಷ್ಯಗಳಿಲ್ಲ. ಸಂತ್ರಸ್ಥೆಯ ವಿದ್ಯಾರ್ಥಿನಿಯಾಗಿದ್ದು, ಕಾಲೇಜಿನಿಂದ ಬಂದು ಘಟನಾ ಸ್ಥಳದ ಪಕ್ಕದಲ್ಲಿ ನಡೆದುಕೊಂಡು ಹೋಗಿರುವುದಕ್ಕೆ ಸಾಕ್ಷಿ ಇದೆ. ಅಲ್ಲಿ ಸಂತೋಷ್ ಇದ್ದ ಎನ್ನುವುದಕ್ಕೆ ಸಾಕ್ಷಿ ಇಲ್ಲ. ಆತನೇ ಕೃತ್ಯ ನಡೆಸಿದ್ದಾನೆ ಎನ್ನುವುದಕ್ಕೆ ಸಾಕ್ಷಿ ಇಲ್ಲ. ಘಟನೆ ಬೆಳಕಿಗೆ ಬಂದ ಒಂದು ದಿನದ ಬಳಿಕ ಸಂತೋಷ್‌ನನ್ನು ಧರ್ಮಸ್ಥಳದಲ್ಲಿ ಸ್ಥಳೀಯರು ಹಿಡಿದು ಪೊಲೀಸರ ವಶಕ್ಕೆ ಒಪ್ಪಿಸಿದ್ದರು. ಈ ಸಂಬಂಧವಾಗಿ ಪೊಲೀಸರು ಅದೇ ದಿನ ಮಹಜರು ಪ್ರಕ್ರಿಯೆ ನಡೆಸಿಲ್ಲ. ಆರೋಪಿಯು ಧರ್ಮಸ್ಥಳದ ವಾಸಿಯಲ್ಲ. ಆತ ಸುಮಾರು 50 ಕಿ.ಮೀ. ದೂರದ ಕಾರ್ಕಳದ ಕುಕ್ಕುಂದೂರಿನವ. ಶೃಂಗೇರಿಯ ಹೋಟೇಲಿನಲ್ಲಿ ಕೆಲಸ ಮಾಡುತ್ತಿದ್ದವ. ಆತ ಧರ್ಮಸ್ಥಳಕ್ಕೆ ಬಂದಿದ್ದಾನೆ ಎಂಬುವುದಕ್ಕೆ ಸಾಕ್ಷ್ಯಗಳಿಲ್ಲ. ಆತನ ಬಳಿ ಇರಬಹುದಾಗಿದ್ದ ಬಸ್ ಟಿಕೆಟನ್ನು ಪೊಲೀಸರು ಸ್ವಾಧೀನಪಡಿಸಿಕೊಂಡಿರಲಿಲ್ಲ. ಈ ಎಲ್ಲಾ ತನಿಖಾ ವೈರುದ್ಯಗಳನ್ನು ನ್ಯಾಯಾಲಯದಲ್ಲಿ ಮುಂದಿರಿಸಿ ವಕೀಲ ಮೋಹಿತ್ ಕುಮಾರ್ ತನ್ನ ಕಕ್ಷಿದಾರರಿಗೆ ಜಾಮೀನು ಕೋರಿದ್ದರು. ಪ್ರಕರಣದಲ್ಲಿ ಸಾಕ್ಷಿದಾರರೆಲ್ಲರೂ ಸ್ಥಳೀಯರು. ಆರೋಪಿಯು ಬೇರೆಯೇ ತಾಲೂಕಿನ ವಾಸಿ. ಹೋಟೇಲು ಕಾರ್ಮಿಕ. ಪ್ರಭಾವಿ ವ್ಯಕ್ತಿಯಲ್ಲ. ಸಾಕ್ಷಿಗಳನ್ನು ಖರೀದಿಸುವಷ್ಟು ಬಲಾಢ್ಯನಲ್ಲ. ಆತನಿಗೆ ಕೆಲವೊಂದು ದೈಹಿಕ ಸಮಸ್ಯೆಗಳಿವೆ. ಮಾನಸಿಕವಾಗಿಯೂ ತೊಂದರೆಗಳಿವೆ. ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಪಡೆದಿದ್ದಾನೆ. ಈ ಹಿಂದೆ ಶಿವಮೊಗ್ಗದ ಮಾನಸ ಆಸ್ಪತ್ರೆಯಲ್ಲೂ ಚಿಕಿತ್ಸೆ ಪಡೆದಿದ್ದಾನೆ. ಪ್ರಕರಣದ ತನಿಖೆಯೂ ಮುಗಿದಿದೆ. ನ್ಯಾಯಾಲಯಕ್ಕೆ ಆರೋಪ ಪಟ್ಟಿಯನ್ನೂ ಸಲ್ಲಿಲಾಗಿದೆ. ಆರೋಪಿಯನ್ನು ಈ ಹಂತದಲ್ಲಿ ನ್ಯಾಯಾಂಗ ಬಂಧನದಲ್ಲಿ ಇರಿಸುವಂತಹ ಆವಶ್ಯಕತೆ ಇಲ್ಲ. ಆದ್ದರಿಂದ ಆತನಿಗೆ ಜಾಮೀನು ನೀಡಬೇಕು ಎಂದು ವಾದ ಮಂಡಿಸಿದ್ದರು. ಆದರೆ ನ್ಯಾಯಾಲಯವು ಪ್ರಕರಣವು ಗಂಭೀರವಾದದ್ದು. ಅಪ್ರಾಪ್ತ ವಯಸ್ಸಿನ ಹೆಣ್ಣು ಮಗಳನ್ನು ಅತ್ಯಾಚಾರಕ್ಕೆ ಯತ್ನಿಸಿ ಕ್ರೂರವಾಗಿ ಕೊಲೆ ಮಾಡಲಾಗಿದೆ. ದೇಶದ ಅತ್ಯುನ್ನತ ತನಿಖಾ ಸಂಸ್ಥೆ ಸಿಬಿಐ ತನಿಖೆ ನಡೆಸಿದೆ. ಈ ಹಂತದಲ್ಲಿ ಆರೋಪಿಗೆ ಜಾಮೀನು ಮಂಜೂರು ಮಾಡಿದರೆ ವಿಚಾರಣೆಯ ಹಂತದಲ್ಲಿ ತೊಂದರೆಯಾಗಬಹುದು ಎಂಬ ತೀರ್ಮಾನಕ್ಕೆ ಬಂದು ಜಾಮೀನು ಅರ್ಜಿಯನ್ನು ತಿರಸ್ಕರಿಸಿತ್ತು. ಆರೋಪಿ ಪರ ವಕೀಲರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದರು. ಅಲ್ಲಿಯೂ ಕೆಳನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಲಾಯಿತು.



ಮಹೇಶ್ ಶೆಟ್ಟಿ ತಿಮರೋಡಿ

ಮುಂದುವರಿಯುವುದು.....

# ಪತ್ರಕರ್ತ ವೀರಶೆಟ್ಟಿ ಕುಂಬಾರಗೆ ಮಾಧ್ಯಮ ರತ್ನ ಪ್ರಶಸ್ತಿ

'ಪೊಲೀಸ್ ನ್ಯೂಸ್' ವಾರಪತ್ರಿಕೆಯ ಬೀದರ ಜಿಲ್ಲಾ ವರದಿಗಾರರಾದ ವೀರಶೆಟ್ಟಿ ಕುಂಬಾರರವರು ಅಪರಾಧ ಸುದ್ದಿಗಳಲ್ಲಿ ತಮ್ಮದೇ ಛಾಪನ್ನು ಮೂಡಿಸುತ್ತಿರುವ ಪ್ರತಿಭಾವಂತ ಪತ್ರಕರ್ತರಾಗಿ ಗುರುತಿಸಿಕೊಂಡಿದ್ದಾರೆ. ಅವರ ವರದಿಗಳು ನಿಖರ, ನಿಷ್ಪಕ್ಷಪಾತ ಹಾಗೂ ಜನಸಾಮಾನ್ಯರಿಗೆ ಉಪಯುಕ್ತವಾಗಿರುವುದರಿಂದ ಸಾಮಾಜಿಕವಾಗಿ ಪ್ರಶಂಸನೀಯವಾಗಿವೆ.

ಈ ಸಾಧನೆಗಾಗಿ ಅವರನ್ನು ಅನ್ವೇಷಣೆ ಸಾಂಸ್ಕೃತಿಕ ಅಕಾಡೆಮಿ, ಬೆಂಗಳೂರು ಇವರ ಮಾಧ್ಯಮ ರತ್ನ ರಾಜ್ಯೋತ್ಸವ ಪ್ರಶಸ್ತಿ 2025 ನೀಡಿ ಗೌರವಿಸಲಾಯಿತು. ಪ್ರಶಸ್ತಿಯನ್ನು ನವೆಂಬರ್ 30,2025ರಂದು ಬೆಂಗಳೂರಿನ ನಯನ ಸಭಾಂಗದಲ್ಲಿ ಭವ್ಯ ಸಮಾರಂಭದ ಮೂಲಕ ಪ್ರದಾನ ಮಾಡಲಾಯಿತು.



# ಪತಿ ಕಿರುಕುಳಕ್ಕೆ ಬೇಸತ್ತು ಮೂರು ವರ್ಷದ ಮಗನೊಂದಿಗೆ ಬಾವಿಗೆ ಹಾರಿ ತಾಯಿ ಆತ್ಮಹತ್ಯೆ!

ಬಾಗಲಕೋಟೆ

✍ ಮಂಜುನಾಥ ಕರೋಳಿ

ಅವರಿಬ್ಬರೂ ಪರಸ್ಪರ ಪ್ರೀತಿಸಿ ಮದುವೆಯಾಗಿ ಸಂಸಾರ ಮಾಡುತ್ತಿದ್ದ ಜೋಡಿ ಹೊಸತರದಲ್ಲಿ ಗಂಡ-ಹೆಂಡತಿ ಅನ್ಯೋನ್ಯವಾಗಿ ಸಂಸಾರ ಮಾಡುತ್ತಿದ್ದರು. ಮತ್ತೊಂದು ಸಂಗತಿ ಏನೆಂದರೆ ಗಂಡನಿಗೆ ಈಗಾಗಲೇ ಮೊದಲನೇ ಮದುವೆ ಕೂಡಾ ಆಗಿತ್ತು. ಆತ ಮತ್ತೊಂದು ಹುಡುಗಿಯನ್ನು ಪ್ರೀತಿಸಿದ್ದ ಮದುವೆ ಶುರು ಮಾಡಿದ್ದ. ಆಕೆಗೆ ಒಂದು ಗಂಡು ಮಗು ಸಹ ಆಗಿತ್ತು. ಆರಂಭದಲ್ಲಿ ಆಕೆಯನ್ನು ಚೆನ್ನಾಗಿಯೇ ನೋಡಿಕೊಂಡಿದ್ದ. ಬರಬರುತ್ತ ಆತ ಆಕೆಯನ್ನು ದೈಹಿಕವಾಗಿ, ಮಾನಸಿಕವಾಗಿ ಕಿರುಕುಳ ನೀಡುತ್ತಿಲೇ ಬರುತ್ತಿದ್ದ. ಆಕೆ ಎಷ್ಟೇ ಆದರೂ ಗಂಡ ಅಲ್ಲವೇ ಪತಿಯೇ ಪರದೈವ ಅಂದುಕೊಂಡು ಸಂಸಾರ ನಡೆಸಿದ್ದಳು. ಆದರೆ ಈ ಕಿತಾಪತಿ ಚಾಳಿ ಹೆಚ್ಚಾಗುತ್ತಲೇ ಬಂದಿದ್ದು, ಇದರಿಂದ ತೀವ್ರ ಮನನೊಂದು ಹೆಂಡತಿ ತನ್ನ ಮೂರು ವರ್ಷದ ಮಗುವಿನೊಂದಿಗೆ ಬಾವಿಗೆ ಹಾರಿ ಪ್ರಾಣ ಬಿಟ್ಟ ಹೃದಯ ವಿದ್ರಾವಕ ಘಟನೆ ಬಾಗಲಕೋಟ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಕೆರೂರ ನಗರದಲ್ಲಿ ಜರುಗಿದರ ಬಗ್ಗೆ ಕೆರೂರ ಪೊಲೀಸ್ ಠಾಣೆಯಿಂದ ವರದಿಯಾಗಿದೆ.





ಮೃತಪಟ್ಟ ಫಾತಿಮಾ ಹಾಗೂ ಮಗು

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಕೆರೂರ ಪಟ್ಟಣದ ನಿವಾಸಿ ಮಸ್ತಾನ ಸಾಬ (30) ಎಂಬ ಯುವಕ ಕೂಲಿನಾಲಿ ಮಾಡಿಕೊಂಡು ಜೀವನ ನಡೆಸಿದ್ದ ಹೇಗೋ ಸಂಸಾರವನ್ನು ನಡೆಸಿಕೊಂಡು ಬದುಕು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದ. ಈತನ ಧರ್ಮಪತ್ನಿ ಫಾತಿಮಾ (21) ಇಬ್ಬರೂ ದಂಪತಿಗಳು ಅನ್ಯೋನ್ಯ ಸಂಸಾರ ನಡೆಸಿದ್ದರು. ಇವರಿಬ್ಬರ ದಾಂಪತ್ಯದ ಫಲವಾಗಿ ಒಂದು ಪುಟ್ಟಮಗುವಿನೊಂದಿಗೆ ಜೀವನ ಮಾಡಿಕೊಂಡಿದ್ದರು. ಮಸ್ತಾನಸಾಬ್ ಹಾಗೂ ಫಾತಿಮಾ ಕೆಲ ವರ್ಷಗಳಿಂದ ಪ್ರೀತಿಸಿ ಮದುವೆಯಾಗಿದ್ದರು. ಮೊದಲಿಗೆ ಮಸ್ತಾನ್‌ಸಾಬ್ ಹೆಂಡತಿ ಫಾತಿಮಾಳನ್ನು ಚೆನ್ನಾಗಿಯೇ ನೋಡಿಕೊಂಡಿದ್ದ ಹಾಗೂ ಮಸ್ತಾನ್‌ಸಾಬ್ ಕುಟುಂಬದಬರಿಗೂ ಫಾತಿಮಾ ಅಚ್ಚುಮೆಚ್ಚಿನವರ ಮಾತು ಕೇಳಿಯೋ ಅಥವಾ ಇನ್ನೊಬ್ಬರ ಮಾತು ಕೇಳಿಯೋ ಹೆಂಡತಿ ಫಾತಿಮಾಳಿಗೆ ಮಾನಸಿಕವಾಗಿ, ದೈಹಿಕವಾಗಿ ಕಿರುಕುಳ ನೀಡುತ್ತ ಬಂದ. ದಿನನಿತ್ಯ ಅವಳಿಗೆ ಯಾವುದಾದರೂ ಒಂದು ವಿಷಯಕ್ಕೆ ಹಿಯಾಳಿಸುವುದು, ಹೊಡೆದು ಬಡಿದು ಮಾಡಿ ಕಿರುಕುಳ ನೀಡುತ್ತಿದ್ದ. ಆಗ ಫಾತಿಮಾ ಯಾಕೆ ಹೀಗೆ ಆಡುತ್ತಿದ್ದೀರ, ನಾವಿಬ್ಬರೂ ಪ್ರೀತಿಸಿ ಮದುವೆಯಾಗಿದ್ದೀವಿ, ಒಂದು ಮುದ್ದಾದ ಮಗೂ ಸಹ ಇದೆ. ಆದರ ಮುಂದಿನ ಭವಿಷ್ಯದ ಚಿಂತೆ ನಿಮಿಗಿಲ್ಲವೇ? ಅಂತ ಪ್ರಶ್ನೆ ಮಾಡಿದರೂ, ಈ ಕಿತಾಪತಿ ಮಸ್ತಾನ್ ಸಾಬ್ ಹಿಂಸೆಯಿಂದ ಹೊರಬರಲೇ ಇಲ್ಲ. ಕೆಲದಿನಗಳ ನಂತರ ಹಬ್ಬಕ್ಕೆ ಅಂತ ಫಾತಿಮಾ ತವರುಮನೆಗೆ ಹೋಗಿ ಬಂದು ಮಾಡುತ್ತಿದ್ದರಿಂದ ಅದಕ್ಕೂ ಒಂದು ಪ್ರಶ್ನೆ ಮಾಡಿ ಫಾತಿಮಾಳಿಗೆ ಚಿತ್ರಹಿಂಸೆ ನೀಡುತ್ತಿದ್ದ. ಆದರೆ ಇವೆಲ್ಲವನ್ನೂ ಸಹಿಸಿಕೊಂಡು ಎಷ್ಟೇ ಆದರೂ ಗಂಡ ಮುಂದಾದರೂ ಸರಿಹೋದಾನು ಅಂತ ಹೇಗೋ ಸಂಸಾರ ನಿಭಾಯಿಸಿಕೊಂಡು ಹೋಗುತ್ತಿದ್ದಳು. ಆದರೆ ಮಸ್ತಾನ್‌ಸಾಬ್ ಕಿರುಕುಳ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಬರುತ್ತಿತ್ತು. ಆದರೆ ಫಾತಿಮಾ ತನ್ನ ಹಣೆಬರಹದಲ್ಲಿ ಏನಿದೆಯೋ ಅದಾಗುತ್ತದ್ದಂತೆ ಅಂದುಕೊಂಡು ಸುಮ್ಮನಾಗಿದ್ದಳು. ಆದರೆ ಈ ಮಸ್ತಾನ್‌ಸಾಬ್‌ಗೆ ಈ ಫಾತಿಮಾ ಎರಡನೇ ಹೆಂಡತಿ...

ಹೌದು ಫಾತಿಮಾ ಪೋಷಕರ ಹೇಳಿಕೆ ಪ್ರಕಾರ ಈ ಮಸ್ತಾನ್‌ಸಾಬ್‌ಗೆ ಮೊದಲೇ ಎಂಟು ವರ್ಷದ ಹಿಂದೆ ಜಮೇಲಾ ಎಂಬ ಯುವತಿಯೊಂದಿಗೆ ಮದುವೆಯಾಗಿದ್ದನಂತೆ. ನಂತರದಲ್ಲಿ ಫಾತಿಮಾಳನ್ನು ಪ್ರೀತಿಸಿ ಎರಡನೇ ಮದುವೆಯಾದ ಎಂದು ಪೋಷಕರ ವಾದವಾಗಿದೆ. ಕಿರುಕುಳ ಕೊಡುತ್ತಲೇ ಬಂದ ಮಸ್ತಾನ್ ಸಾಬ್ ಇದರಿಂದ ಬೇಸತ್ತ ಫಾತಿಮಾ ಒಂದು ನಿರ್ಧಾರ ಮಾಡಿದ್ದಳು.

**ಮಗುವಿನೊಂದಿಗೆ ಬಾವಿಗೆ ಹಾರಿ ಪ್ರಾಣ ಬಿಟ್ಟ ಫಾತಿಮಾ!**


ಗಂಡ ಮಸ್ತಾನ್ ಸಾಬ್ ಕಾಟ ದಿನದಿಂದ ದಿನಕ್ಕೆ ಜಾಸ್ತಿಯಾಗಿತ್ತು. ಇದರಿಂದ ತುಂಬಾ ನೋವು ಅನುಭವಿಸುತ್ತಿದ್ದ ಫಾತಿಮಾ ಕಳೆದ ವಾರ ಅಂದರೆ ಡಿಸೆಂಬರ 2ರಂದು ತನ್ನ ಮೂರು ವರ್ಷದ ಮಗು ಅಬ್ದುಲ್‌ನನ್ನ ಎತ್ತಿಕೊಂಡು ಕೆರೂರದ ಒಂದು ಬಾವಿಗೆ ಹೋಗಿ ಮಗುವಿನೊಂದಿಗೆ ಬಾವಿಗೆ ಹಾರಿ ಪ್ರಾಣ ಬಿಟ್ಟಳು. ಈ ವಿಷಯ ಫಾತಿಮಾ ಕುಟುಂಬಸ್ಥರಿಗೆ ತಿಳಿದು ಸ್ಥಳಕ್ಕೆ ಬಂದು ನೋಡಿದಾಗ ತಾಯಿ-ಮಗು ಪ್ರಾಣ ಚೆಲ್ಲಿದ್ದರು. ಮೃತಳ ಕುಟುಂಬದವರು ನೇರವಾಗಿ ಕೆರೂರ ಪೊಲೀಸ್ ಠಾಣೆಗೆ ಬಂದು ಆಕೆಯ ಗಂಡ ಮಸ್ತಾನ್ ಆತನನ್ನು ಬಂಧಿಸಿ ತಮಗೆ ನ್ಯಾಯ ಒದಗಿಸುವಂತೆ ದೂರು ಕೊಟ್ಟಿದ್ದಾರೆ. ಸದ್ಯ ಕೆರೂರ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.



ಎಸ್ಪಿ ಸಿದ್ದಾರ್ಥ್ ಗೋಯಲ್



ಡಿವೈಎಸ್ಪಿ ಗಜಾನಂದ ಸುತಾರ



ಸಿಪಿಐ ಕರಿಯಪ್ಪ ಬನ್ನೆ

# ಕಠಿಣ ಶಿಕ್ಷೆ ವಿಧಿಸಿದ ಮಂಗಳೂರು ನ್ಯಾಯಾಲಯ

11 ☞

ಚಿಂಚು ಅವರಿಗೆ 12 ವರ್ಷಗಳ ಕಠಿಣ ಸಜೆ ಮತ್ತು 1.25 ಲಕ್ಷ ದಂಡ ಪಾವತಿಸಬೇಕು. ದಂಡ ಪಾವತಿಸಲು ತಪ್ಪಿದ್ದಲ್ಲಿ 4 ತಿಂಗಳ ಕಠಿಣ ಶಿಕ್ಷೆ ಅನುಭವಿಸಬೇಕು. ರಮೀರ್‌ಗೆ ಮಾದಕ ವಸ್ತು ಹೊಂದಿದ್ದ ಅಪರಾಧಕ್ಕೆ 14 ವರ್ಷಗಳ ಕಠಿಣ ಸಜೆ 1.45 ಲಕ್ಷ ರೂ. ದಂಡ ಪಾವತಿಸಲು ತಪ್ಪಿದರೆ 6 ತಿಂಗಳ ಕಠಿಣ ಸಜೆ ವಿಧಿಸಲಾಗಿದೆ. ಅಬ್ದುಲ್ ರವೂಫ್‌ಗೆ 13 ವರ್ಷಗಳ ಕಠಿಣ ಸಜೆ, 1.35 ಲಕ್ಷ ರೂ ದಂಡ ವಿಧಿಸಲಾಗಿದೆ. ದಂಡ ತೆರಲು ತಪ್ಪಿದ್ದಲ್ಲಿ 5 ತಿಂಗಳ ಕಠಿಣ ಸಜೆ 5 ತಿಂಗಳ ಕಠಿಣ ಸಜೆ ಅನುಭವಿಸಬೇಕು ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಪೊಲೀಸರು ಆರೋಪಿಗಳನ್ನು ವಶಕ್ಕೆ ತೆಗೆದುಕೊಳ್ಳುವ ವೇಳೆಯಲ್ಲಿ ಎಲ್ಲರೂ ಗಾಂಜಾ ಸೇವನೆ ಮಾಡಿದ್ದು, ವೈದ್ಯಕೀಯ ಪರೀಕ್ಷೆಯಲ್ಲಿ ದೃಢ ಪಟ್ಟಿತ್ತು. ಆದ್ದರಿಂದ ಅವರೆಲ್ಲರಿಗೂ 6 ತಿಂಗಳ ಕಾಲ ಪ್ರತ್ಯೇಕ ಕಠಿಣ ಶಿಕ್ಷೆ ಮತ್ತು 10000 ದಂಡ ಪಾವತಿಸಬೇಕು. ತಪ್ಪಿದ್ದಲ್ಲಿ ಒಂದು ತಿಂಗಳ ಕಠಿಣ ಸಜೆ ಅನುಭವಿಸಬೇಕು ಎಂದು ತೀರ್ಪು ನೀಡಲಾಗಿದೆ. ಸರಕಾರದ ಪರವಾಗಿ ಸರಕಾರಿ ಅಭಿಯೋಜಕಿ ಜ್ಯುಡಿತ್ ಓಲ್ಗಾ ಮಾರ್ಗರೇಟ್ ಕ್ರಾಸ್ತ ವಾದಿಸಿದ್ದರು. ಈ ತೀರ್ಪು ರಾಜ್ಯದ ನ್ಯಾಯಾಂಗ ಇತಿಹಾಸದಲ್ಲಿ ದಾಖಲೆ ಬರೆದಿದೆ.

**50 ಲಕ್ಷ ರೂ. ಮೌಲ್ಯದ ಎಂಡಿಎಂಎ ಮಾದಕ ವಸ್ತು ವಶ**

ಮಂಗಳೂರು ನಗರ ಪೊಲೀಸರು ಫುಲ್ ಅಲರ್ಟ್ ಆಗಿದ್ದಾರೆ. ನಗರ ವ್ಯಾಪ್ತಿಯಲ್ಲಿ ಮಾದಕ ವಸ್ತು ಜಾಲವನ್ನು ಬೇರು ಸಹಿತ ಕಿತ್ತೊಗೆಯಲು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಮೂರು ವರ್ಷಗಳ ಹಿಂದೆ ಭೇದಿಸಿದ್ದ ಮಾದಕ ವಸ್ತು ಜಾಲದ ಆರೋಪಿಗಳಿಗೆ ಕಠಿಣ ಶಿಕ್ಷೆಯಾದ ದಿನದಂದೇ ಮಂಗಳೂರು ಸಿಸಿಬಿ ಪೊಲೀಸರು ಮತ್ತೊಂದು ಕಾರ್ಯಾಚರಣೆ ನಡೆಸಿ ನಾಲ್ವರು ಆರೋಪಿಗಳನ್ನು ಬಂಧಿಸಿ ಸುಮಾರು 50 ಲಕ್ಷ ರೂ. ಮೌಲ್ಯದ 517 ಗ್ರಾಂ. ಎಂಡಿಎಂಎ ಮಾದಕ ವಸ್ತು ಮತ್ತು 10 ಲಕ್ಷ ರೂ. ಮೌಲ್ಯದ ಕಾರು ಹಾಗೂ 5 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನ ನಾವುಂದ ಗ್ರಾಮದ ಮಹಮ್ಮದ್ ಶಿಯಾಬ್ ಯಾನೆ ಶಿಯಾಬ್ ಉಳ್ಳಾಲ ತಾಲೂಕಿನ ನರಿಂಗಾಣ ಗ್ರಾಮದ ನೌಶಾದ್ ಯಾನೆ ನೌಶಾದ್, ಮಂಗಳೂರಿನ ಕಸ್ಬಾ ಬೆಂಗ್ರೆ ಇಮ್ರಾನ್ ಯಾನೆ ಇಂಬ, ಬ್ರಹ್ಮರಕೂಟ್ಲುವಿನ ನಿಸಾರ್ ಅಹ್ಮದ್ ಯಾನೆ ನಿಸಾರ್ ಎಂಬವರು ಕಾರೊಂದರಲ್ಲಿ ಕುಳಿತುಕೊಂಡು ಯಾವುದೋ ವ್ಯವಹಾರ ನಡೆಸಲು ಮುಲ್ಕಿ ಸಮೀಪದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಮುಲ್ಕಿ ಸುಂದರರಾಮ್ ಶೆಟ್ಟಿ ಕನ್ವೆನ್ಷನ್ ಹಾಲ್ ಬಳಿ ಹೊಂಚು ಹಾಕುತ್ತಿದ್ದಾರೆ ಎಂಬ ಖಚಿತ ಮಾಹಿತಿಯ ಮೇರೆಗೆ ಮಂಗಳೂರು ಸಿಸಿಬಿ, ಎಸಿಪಿ ಮನೋಜ್ ಕುಮಾರ್ ನಾಯ್ಕ್ ನೇತೃತ್ವದ ಪೊಲೀಸ್ ತಂಡ ನಾಲ್ವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿದಾಗ ಅವರ ಬಳಿ 50 ಲಕ್ಷ ರೂ. ಮೌಲ್ಯದ 517 ಗ್ರಾಂ ಎಂಡಿಎಂಎ ಮಾತ್ರೆಗಳು ಪತ್ತೆಯಾಯಿತು. ಅವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿದಾಗ ಆರೋಪಿಗಳು ಬೆಂಗಳೂರಿನಲ್ಲಿ ನೈಜೀರಿಯಾ ಪ್ರಜೆಯೊಬ್ಬನಿಂದ ಎಂಡಿಎಂಎ ಮಾತ್ರೆಗಳನ್ನು ಖರೀದಿಸಿ ತಂದಿದ್ದು, ಅದನ್ನು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಮಾರಾಟ ಮಾಡಲು ಯತ್ನಿಸುತ್ತಿದ್ದರು ಎನ್ನುವುದು ಬೆಳಕಿಗೆ ಬಂದಿದೆ. ಆರೋಪಿಗಳ ವಿರುದ್ಧ ಮುಲ್ಕಿ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಸಂದರ್ಭದಲ್ಲಿ ಅವರಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.



4 ☞ ಗ್ರಾಮದ ಚಂದ್ರಪ್ಪ ಶಿವಲಿಂಗಪ್ಪ ಸಣ್ಣ ಮಲ್ಲಪ್ಪನವರ (36 ವ) ಎಂಬ ಅವಿವಾಹಿತನೊಬ್ಬ ಸರ್ವರ್ ಕೆಲಸ ಮಾಡಿಕೊಂಡಿದ್ದನು. ಈತ ಮಹಾ ಐನಾತಿಯಾಗಿದ್ದನು. 'ಸಕಲ ಗುಣ ಸಂಪೂರ್ಣ ಅವಗುಣ ಪರಿಪೂರ್ಣ' ಎಂಬಂತೆ ಈತ ಬೆಳೆದು ಬಂದಿದ್ದನು.


ಕೊಲೆಯಾದ ಲಲಿತಮ್ಮನ ಹತ್ತಿರದ ಸಂಬಂಧಿಕರು

ಗೋಮುಖವ್ಯಾಘ್ರದ ರೀತಿಯಲ್ಲಿದ್ದ ಈತ ಮಹಾ ಅಪಾಯಕಾರಿ ವ್ಯಕ್ತಿಯಾಗಿದ್ದನು. ದುಡಿದದ್ದೆಲ್ಲವನ್ನೂ ಗುಂಡು, ತುಂಡು, ಗುಟ್ಕಾ, ತೊಡೆಗಳಿಗೆ ಉಡಾಯಿಸಿ ಮತ್ತೇ ಹೋಟೆಲ್ ಮಾಲೀಕರ ಮುಂದೆ ಅಡ್ವಾನ್ಸ್ ಎಂದು ಹಲ್ಲುಕಿರಿದು, ಕೈ ಮುಗಿದು ನಿಲ್ಲುತ್ತಿದ್ದನು. ಮಾತಿನಲ್ಲೇ ಮರುಳು ಮಾಡುವ, ಮಹಾ ಕಲೆಗಾರನಾಗಿದ್ದ ಈತ ಪರಮ ಧೂರ್ತನಾಗಿದ್ದನು.

### ಲಲಿತಮ್ಮಳೊಡನೆ ಅನೈತಿಕ ಸಂಬಂಧ...

ತಾನು ಕೆಲಸ ಮಾಡಿಕೊಂಡು ತನ್ನ ಮಕ್ಕಳು, ಮನೆ ಎಂದೆಲ್ಲ ವಿಧವೆ ಲಲಿತಮ್ಮ ತನ್ನ ಪಾಡಿಗೆ ತಾನಿದ್ದಳು. ಒಂದೇ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಸರ್ವರ್ ಚಂದ್ರಪ್ಪ ತಾನೇ ಮುಂದಾಗಿ ಲಲಿತಮ್ಮಳ ಜತೆಗೆ ಸಲುಗೆಯಿಂದ ಮಾತು ಬೆಳೆಸಿದನು. ಲಲಿತಮ್ಮಳು ಕೂಡಾ ಚಂದ್ರಪ್ಪ ಒಳ್ಳೆಯನಿರಬಹುದು ಎಂದು ಸಲುಗೆ ಮತ್ತು ವಿಶ್ವಾಸದಿಂದ ತನ್ನ ಬದುಕಿನ ಕಷ್ಟ ಕಾರ್ಪಣ್ಯಗಳನ್ನು ಹೇಳಿದ್ದಳು. ಚಂದ್ರಪ್ಪ ಮೊಸಳೆ ಕಣ್ಣೀರು ಹಾಕುತ್ತ 'ನಿಮ್ಮ ಕಷ್ಟಕ್ಕೆ ನಾನಿದ್ದೇನೆ ನೀವೇನೂ ಕಾಳಜಿ ಮಾಡದಿರಿ' ಎಂದು ತಣ್ಣನೆಯ ಸ್ವರದಲ್ಲಿ ವಂಚಿಸುವುದರಲ್ಲಿ ಯಶಸ್ವಿಯಾದನು.

ಪರಿಚಯದಿಂದ ಚಂದ್ರಪ್ಪನು ಸಲುಗೆಯಿಂದ ಲಲಿತಮ್ಮಳ ವಿಶ್ವಾಸ ಗಳಿಸಿದ್ದನು. ಮನಸ್ಸಿನಲ್ಲಿಯೇ ಐನಾತಿಯ ದುರಾಲೋಚನೆ ಬಂದು 'ಹೇಗೋ ಲಲಿತಮ್ಮ ವಿಧವೆಯಾಗಿದ್ದಾಳೆ... ಈಕೆಗೆ ಕಾಳು ಹಾಕಿ ಬುಟ್ಟಿಗೆ ಹಾಕಿಕೊಂಡು ಮಜಾ ಮಾಡಬೇಕೆನಿಸಿತ್ತು.' ಅದೊಂದು ದಿನ ಉಪಾಯವಾಗಿ ಆಕೆ ಬಾಡಿಗೆ ಮನೆಗೆ ಎಂಟ್ರಿ ಕೊಟ್ಟುಬಿಟ್ಟನು. ಆ ದಿನ ಅತಿಯಾಗಿ ವಿಶ್ವಾಸದಿಂದ ಲಲಿತಮ್ಮಳನ್ನು ಪ್ರೀತಿಸುವ ನಾಟಕವಾಡಿ 'ನಿಮ್ಮನ್ನು ಯಾವುದೇ ಕಾಲಕ್ಕೂ ಮೋಸ ಮಾಡುವುದಿಲ್ಲ... ನೀವು ನನ್ನನ್ನು ಪ್ರೀತಿಸಿ' ಎಂದು ಪರಿ... ಪರಿಯಾಗಿ ಪೀಡಿಸಿ ಲಲಿತಮ್ಮಳನ್ನು ಒಪ್ಪಿಸಿ ಆಕೆಯೊಡನೆ ಅಂದು ಬಲವಂತವಾಗಿ ಸೇರಿ ದೈಹಿಕ ಸುಖ ಅನುಭವಿಸಿದನು. ಇದು ಸುಮಾರು ಮೂರು ವರ್ಷದ ಹಿಂದೆ ನಡೆದ ಘಟನೆ. ಅಂದಿನಿಂದ ಚಂದ್ರಪ್ಪ ಮತ್ತು ಲಲಿತಮ್ಮ ತಮ್ಮ ಅನೈತಿಕ ಸಂಬಂಧ ಮುಂದುವರೆಸಿಕೊಂಡು ಬಂದಿದ್ದರು. ಈ ನಡುವೆ ಸರ್ವರ್ ಚಂದ್ರಪ್ಪನ ನಡತೆ ಮತ್ತು ಆತನ ವರ್ತನೆ ಬಗ್ಗೆ ಲಲಿತಮ್ಮ ಸಿಡಿದೆದ್ದಳು. ನಾನು ಮಾಡಬಾರದ ತಪ್ಪು ಮಾಡಿದ್ದೇನೆ. ಈಗ ಅದೆಲ್ಲ ಬಿಡುವುದು ಒಳ್ಳೆಯದು ಎಂದು ಅದೊಂದು ನಿರ್ಧಾರಕ್ಕೆ ಬಂದಳು.

### ಚಂದ್ರಪ್ಪನಿಂದ ದೂರ ಉಳಿದಳು...

ಈಗ ಕಳೆದ ಎರಡು-ಮೂರು ತಿಂಗಳಿನಿಂದಲೂ ಲಲಿತಮ್ಮ ಬ್ಯಾಡಗಿ ಚಂದ್ರಪ್ಪನಿಂದ ದೂರ ಉಳಿದಳು. ಆತ ಅನೈತಿಕ ಸಂಬಂಧ ಮುಂದುವರೆಸೋಣ ಎಂಬ ಬೇಡಿಕೆಯನ್ನು ತಿರಸ್ಕಾರ ಮಾಡತೊಡಗಿದ್ದಳು. ಇತ್ತಿತ್ತಲಾಗಿ ಆತನ ಮೊಬೈಲ್ ಕರೆಗಳಿಗೆ ಉತ್ತರಿಸುವುದನ್ನೇ ಒಂದರ್ಥದಲ್ಲಿ ನಿಲ್ಲಿಸಿಬಿಟ್ಟಳು. ಇದರಿಂದ ಸರ್ವರ್ ಚಂದ್ರಪ್ಪ ಹುಚ್ಚನಂತಾದನು. ಲಲಿತಮ್ಮಳ ಜತೆಗೆ ಜಗಳ ಕಾಯತೊಡಗಿದನು. ಇವನ ಉಸಾಬರಿಯೇ ಬೇಡವೆಂದು ಲಲಿತಮ್ಮ ಹೋಟೆಲ್‌ನಲ್ಲಿ ಅಡುಗೆ ಕೆಲಸವನ್ನು ಬಿಟ್ಟು ರಾಣೆಬೆನ್ನೂರ ಪಟ್ಟಣದಲ್ಲಿ ಅವರಿವರ ಮನೆಯಲ್ಲಿ ಅಡುಗೆ ಕೆಲಸವನ್ನು ಮಾಡಿಕೊಂಡು ಎದೆಯುದ್ದ ಬೆಳೆದಿದ್ದ ತನ್ನ ಮಕ್ಕಳೊಡನೆ ಸುಂದರವಾದ ಬದುಕು ಕಟ್ಟಿಕೊಳ್ಳಬೇಕೆಂದು ತೀರ್ಮಾನಿಸಿದ್ದಳು. ಅದರಂತೆ ಲಲಿತಮ್ಮ ಚಂದ್ರಪ್ಪನಿಂದ ಬಹಳಷ್ಟು ಅಂತರವನ್ನು ಕಾಯ್ದುಕೊಂಡಿದ್ದಳು. ಆತ ಪದೇ ಪದೇ ಮೊಬೈಲ್ ಕರೆ ಮಾಡಿದರೂ ಕೂಡಾ ಆತನಿಗೆ ಉತ್ತರಿಸುತ್ತಿರಲಿಲ್ಲ.

### ಚಂದ್ರಪ್ಪನ ತಲೆಯಲ್ಲಿ ಸಂಶಯಪಿಶಾಚಿ...

ಲಲಿತಮ್ಮಳ ಒಡನಾಟವಿಲ್ಲದೇ ಸರ್ವರ್ ಚಂದ್ರಪ್ಪನಿಗೆ ಅಕ್ಷರಶಃ ಹುಚ್ಚು ಹಿಡಿದಂತಾಗಿತ್ತು. ಲಲಿತಮ್ಮಳ ಸುಖ ಬಿಟ್ಟಿರಲಾರದೇ ಚಡಪಡಿಸುತ್ತಿದ್ದನು. ಇತ್ತೀಚಿಗೆ ಲಲಿತಮ್ಮಳ ಮೊಬೈಲ್ ಯಾವಾಗಲೂ ಮೇಲಿಂದ ಮೇಲೆ 'ಬಿಜಿ' ಬರತೊಡಗಿತ್ತು. ಇದು ಚಂದ್ರಪ್ಪನಿಗೆ ಅರಗಿಸಿಕೊಳ್ಳಲಾಗಲಿಲ್ಲ. ತನ್ನನ್ನು ಬಿಟ್ಟು ಲಲಿತಮ್ಮ ಬೇರೆಯವರ ಜತೆಗೆ ಸಲುಗೆಯಿಂದ ಇರಬೇಕು ಎಂಬ ಆಕ್ರೋಶ ಚಂದ್ರಪ್ಪನ ಮನದಲ್ಲಿ ಮೂಡಿತ್ತು. ಹೀಗಾಗಿ ಚಂದ್ರಪ್ಪ ಲಲಿತಮ್ಮಳನ್ನು ನೇರವಾಗಿ ಕೇಳಲು ಕಾತರಿಸತೊಡಗಿದ್ದನು.

### ಮನೆಗೆ ಬಂದು ಜಗಳವಾಡಿದ್ದನು...

ದಿನಾಂಕ 07-12-2025ರಂದು ರವಿವಾರ ದಿವಸ ಚಂದ್ರಪ್ಪ ಬೆಳಗಿನ ಅವಧಿಯಲ್ಲಿ ಲಲಿತಮ್ಮ ವಾಸಿಸುತ್ತಿದ್ದ ಬಾಡಿಗೆ ಮನೆಯ ಬಾಗಿಲು ಬಡಿದನು. ಅಂದು ಲಲಿತಮ್ಮನ ಮಕ್ಕಳು ಎಲ್ಲೋ ಊರಿಗೆ ಹೋಗಿದ್ದರು. ನೇರವಾಗಿ ಮನೆಗೆ ನುಗ್ಗಿದ ಚಂದ್ರಪ್ಪ ಅವಾಚ್ಯ ಶಬ್ದಗಳಿಂದ ಲಲಿತಮ್ಮಳನ್ನು ಬೈಯುತ್ತ 'ನೀನುs ನನ್ನನ್ನು ಬಿಟ್ಟು ಯಾರ ಜತೆಗೆ ಸಂಬಂಧ ಇಟ್ಟುಕೊಂಡಿರುವಿ... ನೀನು ನನಗೆ ಬೇಕು... ನಿನ್ನ ಮೊಬೈಲ್ ಫೋನ್ ಯಾಕೆ ಬಿಜಿ ಬರುತ್ತಿದೆ' ಎಂದು ಕಪಾಳಕ್ಕೆ ಎರಡೇಟು ಬಾರಿಸಿದನು. ಇದರಿಂದ ಲಲಿತಮ್ಮ ಸಿಡಿದೆದ್ದಳು. ಆಕೆಯೂ ಕೂಡಾ ಚಂದ್ರಪ್ಪನ ಜನ್ಮ ಜಾಲಾಡತೊಡಗಿದಳು. ಇಬ್ಬರಲ್ಲೂ ಜಗಳ ಜೋರಾಯಿತು. ಯಾರಾದರೂ ಒಬ್ಬರು ಸುಮ್ಮನಾಗಿದ್ದರೆ ಸಾಕಿತ್ತು. ಅಲ್ಲಿಗೆ ಜಗಳ ಮುಗಿಯುತ್ತಿತ್ತು. ಲಲಿತಮ್ಮ ತೀವ್ರವಾಗಿ ಚಂದ್ರಪ್ಪನನ್ನು ತರಾಟೆಗೆ ತೆಗೆದುಕೊಂಡಾಗ ಚಂದ್ರಪ್ಪನು ಆಕ್ರೋಶದಿಂದ ಕಿರುಚಾಡುತ್ತ 'ನೀನುs ಮೋಸಗಾರ್ತಿ ಬದುಕಿರಬಾರದು' ಎಂದ ಅವಾಚ್ಯವಾಗಿ ನಿಂದಿಸಿ ಹರಿತವಾದ ಚಾಕು ಹೊರ ತೆಗೆದು ನಿಂತುಬಿಟ್ಟನು. ಇದನ್ನು ಕಂಡ ಲಲಿತಮ್ಮ ಅಕ್ಷರಶಃ ನಡುಗಿದಳು.


ವಿಧವೆ ಲಲಿತಮ್ಮನ ಕೊಲೆ ಕಂಡು ಗರಬಡಿದವರಂತೆ ಕುಳಿತ ಸಂಬಂಧಿಕರು

### ಕುತ್ತಿಗೆ ಸೀಳಿ ಬರ್ಬರ ಕೊಲೆ...

ಸರ್ವರ್ ಚಂದ್ರಪ್ಪ ಲಲಿತಮ್ಮಳನ್ನು ಬಿಗಿಯಾಗಿ ಹಿಡಿದು ಕೆಳಗೆ ಕೆಡವಿ ಕತ್ತನ್ನು ಹರಿತವಾದ ಚಾಕುವಿನಿಂದ ಸೀಳಿದನು. ಚಾಕುವಿನ ಇರಿತದಿಂದ ತೀವ್ರ ರಕ್ತಸ್ರಾವದಿಂದ ರಕ್ತ ಪುಟು...ಪುಟು ಎಂದು ಹರಿಯತೊಡಗಿತ್ತು. ನೋವಿನಿಂದ ಲಲಿತಮ್ಮ ವಿಲ...ವಿಲನೇ ಒದ್ದಾಡುತ್ತ ಗತಪ್ರಾಣಳಾದಳು. ಯಾವಾಗ ಲಲಿತಮ್ಮ ಕೊಲೆಯಾಗಿ ಸತ್ತು ಬಿದ್ದಳೋ... ಆವಾಗಲೇ ಸರ್ವರ್ ಚಂದ್ರಪ್ಪ ಥರಗುಟ್ಟಿದನು. ಪೊಲೀಸರ ಭಯದಿಂದ ತಕ್ಷಣ ಮನೆಯ ಕದ ಮುಚ್ಚಿ ಅಲ್ಲಿಂದ ಪರಾರಿಯಾದನು.


ಲಲಿತಮ್ಮ ಕೊಲೆಯಾದ ಸುದ್ದಿ ತಿಳಿದು ಧಾವಿಸಿ ಬಂದ ಸಾರ್ವಜನಿಕರು

ಇತ್ತ ರವಿವಾರ ದಿನಾಂಕ 07-12-2025ರಂದು ಕೊಲೆಯಾಗಿದ್ದ ಲಲಿತಮ್ಮಳ ಹಿರಿಯ ಮಗ ಗಣೇಶ ಕರಬಸಪ್ಪ ಬ್ಯಾಡಗಿ ಮುಂಜಾನೆ 11 ಗಂಟೆಯ ಸುಮಾರಿಗೆ ಮನೆಗೆ ಆಗಮಿಸಿದಾಗ ಒಳಗಿನ ಕೋಣೆಯಲ್ಲಿ ರಕ್ತದ ಮಡುವಿನಲ್ಲಿ ತನ್ನ ತಾಯಿ ಲಲಿತಮ್ಮ ಕೊಲೆಯಾಗಿ ಬಿದ್ದಿರುವುದನ್ನು ಕಂಡು ನಡುಗಿ ಹೋದನು. ಎದೆ ಎದೆ ಬಡಿದುಕೊಂಡು ರೋಧಿಸತೊಡಗಿದ್ದ ಗಣೇಶನ ರೋಧನೆಯನ್ನು ಕೇಳಿ ಜನ ಧಾವಿಸಿದ್ದರು. ಅದಾಗಲೇ ಲಲಿತಮ್ಮಳ ಕೊಲೆ ಸುತ್ತಲಿನ ಪರಿಸರದಲ್ಲಿ ಮಾರ್ದನಿಸಿತ್ತು.


ವಿಧವೆ ಲಲಿತಮ್ಮಳ ಹಂತಕ ಚಂದ್ರಪ್ಪನನ್ನು ಕೇವಲ 6 ಗಂಟೆಯೊಳಗೆ ಬಂಧಿಸಿರುವ ರಾಣೆಬೆನ್ನೂರು ನಗರ ಪೊಲೀಸರ ವಿಶೇಷ ತನಿಖಾ ತಂಡ

ಸೇರಿದ್ದ ಸಾರ್ವಜನಿಕರೆಲ್ಲ ಗಣೇಶನನ್ನು ಸಮಾಧಾನ ಪಡಿಸಿ ಪೊಲೀಸರಿಗೆ ದೂರು ನೀಡಲು ತಿಳಿಸಿದಾಗ ಲಲಿತಮ್ಮಳ ಮಗ ನೇರವಾಗಿ ರಾಣೆಬೆನ್ನೂರಿನ ನಗರ ಪೊಲೀಸ್ ಠಾಣೆಗೆ ಧಾವಿಸಿ ಬಂದನು.

### ಪೊಲೀಸರಿಗೆ ದೂರು

ಅಂದು ಕರ್ತವ್ಯದ ಮೇಲಿದ್ದ ಪಿಎಸ್‌ಐ ಗಡ್ಡೆಪ್ಪ ಗುಂಜುಟಗಿ ಅವರನ್ನು ಕಂಡು ತನ್ನ ತಾಯಿ ಲಲಿತಮ್ಮಳನ್ನು ಅದ್ಯಾರೋ ದುಷ್ಕರ್ಮಿಗಳು ಅದ್ಯಾವುದೋ ಉದ್ದೇಶಕ್ಕಾಗಿ ಬರ್ಬರವಾಗಿ ಕೊಲೆ ಮಾಡಿದ್ದಾರೆ ಎಂದು ತಿಳಿಸಿದನು. ಪಿಎಸ್‌ಐ ಗಡ್ಡೆಪ್ಪ ತಕ್ಷಣ ಜಾಗ್ರತರಾಗಿ ವಿಷಯದ ಗಂಭೀರತೆಯನ್ನು ಅರಿತುಕೊಂಡು ರಾಣೆಬೆನ್ನೂರಿನ ಸಿಪಿಐ ವೆಂಕಟೇಶ್ ಎನ್., ಡಿವೈಎಸ್ಪಿ ಲೋಕೇಶ್ ಜಿ. ಹಾವೇರಿ, ಎಸ್ಪಿ ಯಶೋಧಾ ವಂಟಗೋಡಿ ಅವರಿಗೆ ವಿಷಯ ತಿಳಿಸಿದರು. ಅವರ ನಿರ್ದೇಶನದಂತೆ ಪ್ರಕರಣವನ್ನು ದಾಖಲಿಸಿಕೊಂಡು ತಮ್ಮ ಸಿಬ್ಬಂದಿಗಳೊಂದಿಗೆ ಘಟನಾ ಸ್ಥಳಕ್ಕೆ ಧಾವಿಸಿದರು.

### ಪಂಚನಾಮೆ ಜರುಗಿಸಿದರು...

ಚತುರ ಮತ್ತು ಧಾಡಸಿ ಸಿಪಿಐ ವೆಂಕಟೇಶ್ ಎನ್., ಡಿವೈಎಸ್ಪಿ ಲೋಕೇಶ್ ಜಿ. ತಮ್ಮ ಸಿಬ್ಬಂದಿಗಳೊಂದಿಗೆ ಘಟನಾ ಸ್ಥಳಕ್ಕೆ ಧಾವಿಸಿದರು. ಪಿಎಸ್‌ಐ ಗಡ್ಡೆಪ್ಪ ಗುಂಜುಟಗಿ ಅವರಿಂದ ಪ್ರಕರಣ ಹಸ್ತಾತಂರಿಸಿಕೊಂಡ ಸಿಪಿಐ ವೆಂಕಟೇಶ್ ಎನ್. ಅವರು ಡಿವೈಎಸ್ಪಿ ಲೋಕೇಶ್ ಜಿ. ಅವರ ನಿರ್ದೇಶನದಂತೆ ಪಂಚನಾಮೆ ಕೈಗೊಂಡು ಲಲಿತಮ್ಮಳ ಶವದ ಮರಣೋತ್ತರ ಪರೀಕ್ಷೆ ವೈದ್ಯರಿಂದ ಮಾಡಿಸಿದರು. ಪ್ರತ್ಯಕ್ಷ ಸಾಕ್ಷಿಗಳು ಮತ್ತು ಸಂಬಂಧಿಕರ ಹೇಳಿಕೆಗಳನ್ನು ಪಡೆದುಕೊಂಡರು.

### ಸವಾಲಾದ ಪ್ರಕರಣ...

ಲಲಿತಮ್ಮ ಕರಬಸಪ್ಪ ಬ್ಯಾಡಗಿ ಕೊಲೆ ಪ್ರಕರಣ ನಿಜಕ್ಕೂ ನಿಗೂಢವಾಗಿತ್ತು. ಲಲಿತಮ್ಮಳ ಕೊಲೆಗೆ ಕಾರಣ ಏನಿರಬಹುದು? ಹಂತಕರು ಯಾರು...? ಎಂದು ಸಿಪಿಐ ವೆಂಕಟೇಶ್ ಎನ್., ಪಿಎಸ್‌ಐ ಗಡ್ಡೆಪ್ಪ ಗುಂಜುಟಗಿ ಅವರಿಗೆ ಸವಾಲಾದಂತಾಗಿತ್ತು. ಡಿವೈಎಸ್ಪಿ ಲೋಕೇಶ್ ಜಿ. ಘಟನಾ ಸ್ಥಳವನ್ನು ಸೂಕ್ಷ್ಮವಾಗಿ ಪರಿಶೀಲನೆ ನಡೆಸಿ ಮೊದಲು ಲಲಿತಮ್ಮ ಯಾರು...? ಏನು...? ಅವಳ ಪೂರ್ವಾಪರ ಹಿನ್ನೆಲೆ ಪತ್ತೆ ಮಾಡಿ ಎಂದು ತನಿಖಾಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಿದರು.

### ವಿಶೇಷ ತನಿಖಾ ತಂಡ ರಚನೆ...

ಹಾವೇರಿ ಎಸ್ಪಿ ಯಶೋಧಾ ವಂಟಗೋಡಿ, ರಾಣೆಬೆನ್ನೂರು ಡಿವೈಎಸ್ಪಿ ಲೋಕೇಶ್ ಜಿ. ಅವರ ನಿರ್ದೇಶನದಂತೆ ಲಲಿತಮ್ಮಬ್ಯಾಡಗಿ ಬರ್ಬರ ಕೊಲೆಯ ಹಂತಕರನ್ನು ಹೆಡೆಮುರಿಕಟ್ಟಲು ಸೂಕ್ತ ಸ್ಕೆಚ್ ರೂಪಿಸಿ ಪ್ರಕರಣ ಬಯಲಿಗೆಳೆಯಬೇಕಾದರೆ ಒಂದು ವಿಶೇಷ ತನಿಖಾ ತಂಡವನ್ನು ರಚಿಸಬೇಕೆಂದು ತೀರ್ಮಾನಿಸಿದ ಸಿಪಿಐ ವೆಂಕಟೇಶ್ ಎನ್. ತಮ್ಮ ನೇತೃತ್ವದಲ್ಲಿ ತಂಡವೊಂದನ್ನು ರಚಿಸಿದರು. ಪಿಎಸ್‌ಐ ಗಳಾದ ಗಡ್ಡೆಪ್ಪ ಗುಂಜುಟಗಿ (ಕಾ.ಸು), ಹೆಚ್.ಎನ್. ದೊಡಮನಿ (ತನಿಖೆ), ಸಿಬ್ಬಂದಿಗಳಾದ ಪಿ.ಕೆ. ಲಮಾಣಿ, ಎಲ್.ಟಿ. ಕರಿಗಾರ, ಹೆಚ್.ಡಿ. ನಗಾವತ್, ಮಂಜು ರೊಟ್ಟಿಯವರ, ಮೋಹನ ಮೇಲಗಿರಿ, ಮಂಜುನಾಥ ಹೆಚ್. ವೈ., ಎಂ.ಆರ್. ಬುಳ್ಳಾಪೂರ, ಎಸ್.ಎಲ್. ರಾಠೋರ್ ವಿಶೇಷ ತನಿಖಾ ತಂಡದಲ್ಲಿದ್ದರು.

### ಹಂತಕ ಸರ್ವರ್ ಚಂದ್ರಪ್ಪನ ಬಂಧನ...

ಅಂದುಕೊಂಡ ಹಾಗೇ ಪಿಎಸ್‌ಐಗಳಾದ ಗಡ್ಡೆಪ್ಪ ಗುಂಜುಟಗಿ (ಕಾ.ಸು) , ಹೆಚ್.ಎನ್. ದೊಡ್ಡಮನಿ (ತನಿಖೆ) ಮತ್ತು ವಿಶೇಷ ತನಿಖಾ ತಂಡದ ಸಿಬ್ಬಂದಿಗಳು ಮೊದಲು ಲಲಿತಮ್ಮ ಬ್ಯಾಡಗಿ ಪೂರ್ವಾಪರ ಹಿನ್ನೆಲೆಯನ್ನು ಕೇವಲ ಒಂದೆರಡು ಗಂಟೆಯಲ್ಲಿ ಕರಾರುವಕ್ಕಾಗಿ ಸಂಗ್ರಹಿಸಿ ಅದನ್ನು ಸಿಪಿಐ ವೆಂಕಟೇಶ್ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಸಂಶಯಿತ ಹಂತಕನಾದ ಚಂದ್ರಪ್ಪ ಶಿವಲಿಂಗಪ್ಪ ಸಣ್ಣ ಮಲ್ಲಪ್ಪನವರ ಎಂಬ ಆಸಾಮಿಯನ್ನು ವಶಕ್ಕೆ ಪಡೆಯಲು ತ್ವರಿತ ಕಾರ್ಯಾಚರಣೆ ಕೈಗೊಂಡರು. ಖಚಿತ ಮಾಹಿತಿ ಆಧರಿಸಿದ ವಿಶೇಷ ತನಿಖಾ ತಂಡ ಹಾವೇರಿ ರೇಲ್ವೆ ನಿಲ್ದಾಣದ ಪರಿಸರದಲ್ಲಿ ಪರಾರಿ ಆಗಲು ಮರೆ ಮಾಚಿಕೊಂಡಿದ್ದ ಚಂದ್ರಪ್ಪನನ್ನು ವಶಕ್ಕೆ ತೆಗೆದುಕೊಂಡು ಕೇವಲ ಆರು ಗಂಟೆಯೊಳಗೆ ಸಿಪಿಐ ವೆಂಕಟೇಶ್ ಅವರ ಮುಂದೆ ಹಾಜರು ಪಡಿಸಿದರು.

### ತಪ್ಪೊಪ್ಪಿಕೊಂಡ ಹಂತಕ...

ರಾಣೆಬೆನ್ನೂರ ನಗರ ಪೊಲೀಸ್ ಠಾಣೆಯಲ್ಲಿ ಸಿಪಿಐ ವೆಂಕಟೇಶ ಎನ್., ಪಿಎಸ್‌ಐ ಗಡ್ಡೆಪ್ಪ ಗುಂಜುಟಗಿ ಅವರು ವಿಚಾರಣೆ ನಡೆಸಿದಾಗ ಆರೋಪಿ ಹಂತಕ ತನ್ನ ಕೃತ್ಯವನ್ನು ಒಪ್ಪಿಕೊಂಡು ಲಲಿತಮ್ಮಳ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡನು. ಕೃತ್ಯಕ್ಕೆ ಬಳಸಿದ ಚಾಕು ಕೂಡಾ ಬೀಸಾಕಿದ್ದನ್ನು ತೆಗೆದುಕೊಟ್ಟನು. ಇದೀಗ ಹಂತಕನನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ಆತನನ್ನು ಜೈಲಿಗಟ್ಟಲು ಆದೇಶಿಸಿದ್ದಾರೆ. ಹಂತಕ ಜೈಲು ಸೇರಿ ಮುದ್ದೆ ಮುರಿಯುತ್ತಿದ್ದಾನೆ. ರಾಣೆಬೆನ್ನೂರು ಸಿಪಿಐ ವೆಂಕಟೇಶ್ ಎನ್., ಪಿಎಸ್‌ಐಗಳಾದ ಗಡ್ಡೆಪ್ಪ ಗುಂಜುಟುಗಿ, ಹೆಚ್. ಎನ್. ದೊಡಮನಿ ಮತ್ತು ವಿಶೇಷ ತನಿಖಾ ತಂಡದ ಸಿಬ್ಬಂದಿಗಳ ಕಾರ್ಯಾಚರಣೆ ಫಲಪ್ರದವಾಗಿತ್ತು. ಇವರೆಲ್ಲರ ಕಾರ್ಯಾಚರಣೆಯನ್ನು ಎಸ್ಪಿ ಯಶೋಧಾ ವಂಟಗೋಡಿ, ಡಿವೈಎಸ್ಪಿ ಲೋಕೇಶ್ ಅವರು ಶ್ಲಾಘಿಸಿ ಅಭಿನಂದಿಸಿದ್ದಾರೆ. ☯

# ಉಡುಪಿ ಜಿಲ್ಲಾ ನ್ಯಾಯಾಲಯದ ಮಹತ್ವದ ತೀರ್ಪು
# 10 ಜನ ಬಾಂಗ್ಲಾ ವಲಸಿಗರಿಗೆ 2 ವರ್ಷ ಜೈಲು ಶಿಕ್ಷೆ!

ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯ ಮಲ್ಪೆಯಲ್ಲಿ ಅಕ್ರಮವಾಗಿ ನುಸುಳಿದ್ದ 10 ಜನ ಬಾಂಗ್ಲಾ ವಲಸಿಗ ಯುವಕರಿಗೆ ಉಡುಪಿ ಜಿಲ್ಲಾ ಸತ್ರ ನ್ಯಾಯಾಲಯವು 2 ವರ್ಷಗಳ ಶಿಕ್ಷೆಯೊಂದಿಗೆ ತಲಾ 10 ಸಾವಿರ ರೂ.ಗಳ ದಂಡ ವಿಧಿಸಿ ಮಹತ್ತರವಾದ ತೀರ್ಪು ನೀಡಿದ ವರದಿಯಾಗಿದೆ.

ಬಾಂಗ್ಲಾ ದೇಶದಿಂದ ಅಕ್ರಮವಾಗಿ ಭಾರತ ದೇಶವನ್ನು ಪ್ರವೇಶಿಸಿ ಅದರಲ್ಲೂ ಉಡುಪಿ ಜಿಲ್ಲೆಯ ಮಲ್ಪೆಗೆ ಬಂದು ಉಳಿದುಕೊಂಡಿದ್ದ ಹಕೀಂ ಅಲಿ, ಸುಜೋನ್ ಎಸ್.ಕೆ., ಇಸ್ಮಾಯಿಲ್ ಎಸ್.ಕೆ., ಕರೀಂ ಎಸ್.ಕೆ., ಸಲಾಂ ಎಸ್.ಕೆ., ರಾಜಿಕುಲ್ ಎಸ್.ಕೆ., ಮೊಹಮ್ಮದ್ ಸೋಜಿಬ್, ರಿಮೂಲ್, ಮೊಹಮ್ಮದ್ ಇಮಾಮ್‌ಶೇಖ್, ಮೊಹಮ್ಮದ್ ಜಹಾಂಗೀರ್ ಅಲಂ ಶಿಕ್ಷೆಗೊಳಗಾದ ಬಾಂಗ್ಲಾ ದೇಸಿಗರು ಎಂದು ತಿಳಿದು ಬಂದಿದೆ.


ಅಂದಿನ ಎಸ್ಪಿ ಡಾ. ಅರುಣಕುಮಾರ್


ಹೆಚ್ಚುವರಿ ಎಸ್ಪಿ ಎಸ್.ಟಿ. ಸಿದ್ದಲಿಂಗಪ್ಪ

2024ರಲ್ಲಿ ಮಲ್ಪೆಯ ದಕ್ಷ ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ ಗೌಡ ನೇತೃತ್ವದ ತಂಡವು ಚಾಕಚಕ್ಯತೆಯಿಂದ ಕರ್ತವ್ಯ ನಿರ್ವಹಿಸುತ್ತ ಕಾನೂನು ಮತ್ತು ಸುವ್ಯವಸ್ಥೆಯನ್ನು ವ್ಯವಸ್ಥಿತವಾಗಿರಿಸಲು ಹೆಣಗುತ್ತಿತ್ತು. ಮಲ್ಪೆ ಪರಿಸರದಲ್ಲಿ ಅನುಮಾನಾಸ್ಪದವಾಗಿ ಯುವಕರ ಗುಂಪೊಂದು ಓಡಾಡುತ್ತಿರುವುದು ಕಂಡು ಬಂದಿತು. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ ಗೌಡ ನೇತೃತ್ವದ ಪೊಲೀಸ್ ತಂಡವು ಏಳು ಜನರ ತಂಡವೊಂದನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅವರನ್ನೆಲ್ಲಾ ತೀವ್ರ ವಿಚಾರಣೆಗೆ ಗುರಿಪಡಿಸಿದಾಗ ಅವರೆಲ್ಲಾ ಬಾಂಗ್ಲಾ ದೇಶದಿಂದ ಅಕ್ರಮವಾಗಿ ನಮ್ಮ ದೇಶದ ಒಳಗೆ ನುಸುಳಿ ಬಂದವರೆನ್ನುವ ಸಂಗತಿ ಬೆಳಕಿಗೆ ಬಂದಿತ್ತು.

ಮಲ್ಪೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬಾಡಿಗೆ ಮನೆಯೊಂದನ್ನು ಪಡೆದುಕೊಂಡು ಅದರಲ್ಲಿ ವಾಸವಿದ್ದ ಹತ್ತು ಜನರ ಗುಂಪು ಕಟ್ಟಡ ಕಾರ್ಮಿಕರಾಗಿಯೂ ಕೆಲಸ ಮಾಡಿಕೊಂಡಿದ್ದರು. ಹಣದಾಸೆಗಾಗಿ ಬಲಿ ಬಿದ್ದು ಬಾಂಗ್ಲಾ ದೇಶಿಗರಿಗೆ ನಮ್ಮಲ್ಲಿನ ಕೆಲವರು ನಕಲಿ ಆಧಾರ್ ಕಾರ್ಡ್ ಮಾಡಿಕೊಟ್ಟಿದ್ದರು. ಇದೇ ಬಲದ ಮೇಲೆ ನಾವು ಕೂಡಾ ಭಾರತೀಯರು ಎಂದು ಹೇಳಿಕೊಂಡಿದ್ದರು. ಅಗರ್ತಲಾದಿಂದ ಪಶ್ಚಿಮ ಬಂಗಾಳ ಮೂಲಕ ಚೆನ್ನೈಗೆ ಬಂದು ಅಲ್ಲಿಂದ ವಂಚಕನಾಗಿದ್ದ ಉಸ್ಮಾನ್ ಎಂಬ ವ್ಯಕ್ತಿ ಇವರನ್ನು ಮಲ್ಪೆಗೆ ಕರೆ ತಂದು ಕೆಲಸಕ್ಕೆ ವ್ಯವಸ್ಥೆ ಮಾಡಿಸಿದ್ದನು ಎಂದು ವಿಚಾರಣೆ ಕಾಲಕ್ಕೆ ಬಾಯಿ ಬಿಟ್ಟಿದ್ದರು. ಪ್ರಕರಣದಲ್ಲಿ ಒಟ್ಟು ಹತ್ತು ಜನರನ್ನು ಬಂಧಿಸಿ ಅವರ ಮೇಲೆ ನ್ಯಾಯಾಲಯಕ್ಕೆ ಪ್ರಬಲವಾದ ದೋಷಾರೋಪಣೆ ಪತ್ರ ಸಲ್ಲಿಸುವುದರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ ಗೌಡ ಮತ್ತು ತಂಡ ಯಶಸ್ವಿಯಾಗಿತ್ತು. ಈಗ ಉಡುಪಿ ಜಿಲ್ಲಾ ಸತ್ರ ನ್ಯಾಯಾಲಯವು ಅಕ್ರಮ ಬಾಂಗ್ಲಾ ನುಸುಳು ಕೋರರಿಗೆ ಶಿಕ್ಷೆ ಮತ್ತು ದಂಡ ಎರಡನ್ನು ಪ್ರಕಟಿಸಿದೆ.

ಅಕ್ರಮ ನುಸುಳುಕೋರರು ನಮ್ಮ ದೇಶದಲ್ಲಿನ ಜನರ ಉದ್ಯೋಗವನ್ನು ವ್ಯವಸ್ಥಿತವಾಗಿ ಕಿತ್ತುಕೊಳ್ಳುವುದಲ್ಲದೇ, ನಾವು ಕಟ್ಟುವ ತೆರಿಗೆ ಹಣದಲ್ಲಿ ಸರಕಾರ ನೀಡುವ ಸೌಲಭ್ಯಗಳನ್ನು ಕೂಡಾ ಇವರು ಪಡೆದುಕೊಳ್ಳುತ್ತಾರೆ. ನಮ್ಮ ದೇಶದ ಜನರ ಅತ್ಯುನ್ನತ ಸಂಸ್ಕೃತಿಯ ಮೇಲೆ ದಾಳಿ ಮಾಡುವುದರ ಜತೆಗೆ ಕಾನೂನು ಬಾಹಿರ ಕ್ರಿಮಿನಲ್ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದಲ್ಲದೇ ನಮ್ಮ ದೇಶದ ಆಂತರಿಕ ಭದ್ರತೆಗೂ ಕೂಡಾ


ಅಂದಿನ ಇನ್ಸ್‌ಪೆಕ್ಟರ್ ಮಂಜುನಾಥ ಗೌಡ


ಎರಡು ವರ್ಷ ಜೈಲು ಶಿಕ್ಷೆ, ತಲಾ 10 ಸಾವಿರ ರೂ.ಗಳ ದಂಡ ವಿಧಿಸಿಕೊಂಡ 10 ಜನ ಬಾಂಗ್ಲಾ ವಲಸಿಗರು

ಅಪಾಯ ಒಡ್ಡಬಲ್ಲರು ಎಂಬುದು ಕಟ್ಟಿದ ಬುತ್ತಿ.

ಅಂದಿನ ಮಲ್ಪೆ ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ ಗೌಡ ಮತ್ತು ಸಿಬ್ಬಂದಿಗಳು ದಿಟ್ಟ ಹಾಗೂ ಚಾಣಾಕ್ಷತನದಿಂದ ಕಾರ್ಯಾಚರಣೆ ಕೈಗೊಂಡು ಸುಮಾರು ಹತ್ತು ಜನ ಬಾಂಗ್ಲಾ ನುಸುಳುಕೋರರನ್ನು ಯಶಸ್ವಿಯಾಗಿ ಬಂಧಿಸಿದ್ದರು. ಇವರಿಗೆಲ್ಲ ಶಿಕ್ಷೆಯಾಗುವಲ್ಲಿ ಸೂಕ್ತ ನಿರ್ದೇಶನಗಳನ್ನು ಅಂದಿನ ಉಡುಪಿಯ ಎಸ್ಪಿ ಡಾ. ಅರುಣ ಕುಮಾರ್, ಹೆಚ್ಚುವರಿ ಎಸ್ಪಿ ಸಿದ್ದಲಿಂಗಯ್ಯ, ಡಿವೈಎಸ್ಪಿ ಪ್ರಭು ಅವರುಗಳು ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ ಗೌಡರಿಗೆ ನೀಡಿದ್ದರು. ಒಟ್ಟಿನಲ್ಲಿ ಟೀಂ ವರ್ಕ್ ಆಗಿದ್ದು ಇವರೆಲ್ಲ ಅಭಿನಂದನಾರ್ಹರು.

ಪೊಲೀಸ್ ಅಧಿಕಾರಿ ಮಂಜುನಾಥ ಗೌಡರಂತಹ ದಿಟ್ಟ ಹಾಗೂ ದಕ್ಷ-ಪ್ರಾಮಾಣಿಕ ಅಧಿಕಾರಿಗಳಿಗೆ ನಮ್ಮ ಸಮಾಜದಲ್ಲಿರುವ ಪ್ರಜ್ಞಾವಂತ ಸಾರ್ವಜನಿಕರು ಸಹಕಾರ ನೀಡಿದ್ದೇ ಆದರೆ ಇಂದು ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಅಕ್ರಮವಾಗಿ ನೆಲೆ ನಿಂತಿರುವ ವಲಸಿಗರನ್ನು ನಿರ್ದಾಕ್ಷಿಣ್ಯವಾಗಿ ಹೊರದಬ್ಬಲು ಸಾಧ್ಯವಾಗುತ್ತದೆ. ಈ ವಿಚಾರದಲ್ಲಿ ರಾಜಕಾರಣಿಗಳ, ಅಧಿಕಾರಿಗಳ ಸರಕಾರದ ಇಚ್ಛಾಶಕ್ತಿ ಬಹುಮುಖ್ಯ ಪಾತ್ರ ವಹಿಸುತ್ತದೆ.

ಆದರೆ ನಮ್ಮ ದೇಶದ ದುರ್ದೈವ. ಇಂದು ಅಕ್ರಮವಾಗಿ ಯಾರ ಅಂಜಿಕೆಯು ಇಲ್ಲದೇ ರೋಹಿಂಗ್ಯಾ, ಬಾಂಗ್ಲಾ, ಪಾಕಿಸ್ತಾನದ ನುಸುಳುಕೋರರ ಪರವಾಗಿ ಮಾತನಾಡುವ ಸಾಕಷ್ಟು ರಾಜಕಾರಣಿಗಳು ನಮ್ಮ ದೇಶದಲ್ಲಿದ್ದಾರೆ. ಎಂಜಲು ಕಾಸಿಗಾಗಿ ಏನೂ ಬೇಕಾದರೂ ಮಾಡಲು ಸಿದ್ದವಿರುವ ದೇಶದ್ರೋಹಿಗಳು ನುಸುಳುಕೋರರಿಗೆ ನಕಲಿಯಾಗಿ ದಾಖಲೆಗಳನ್ನು ಸಿದ್ದಪಡಿಸಿಕೊಡುತ್ತಾರೆ. ಕಮಿಷನ್ ಆಸೆಗೆ ನುಸುಳುಕೋರರ, ಉಗ್ರವಾದಿಗಳ ಪೂರ್ವಾಪರ ವಿಚಾರಿಸದೇ ಕೆಲಸಕ್ಕೆ ಹಚ್ಚುವ ಮಧ್ಯವರ್ತಿಗಳಿದ್ದಾರೆ. ಇಷ್ಟೆಲ್ಲಾ ಅಡೆತಡೆ, ತೊಡಕುಗಳನ್ನು ಮೆಟ್ಟಿ ನಿಂತು ತಮ್ಮ ಕರ್ತವ್ಯನಿಷ್ಠೆ, ದೇಶಭಕ್ತಿ ಮೆರೆಯುವ ಪೊಲೀಸ್ ಅಧಿಕಾರಿ ಮಂಜುನಾಥ ಗೌಡರಂತಹ ಅಧಿಕಾರಿಗಳ ಕಾರ್ಯದಕ್ಷತೆಯನ್ನು ಗೌರವಿಸಲೇಬೇಕು. ರಿಯಲ್ಲಿ ಹ್ಯಾಟ್ಸಫ್ ಮಂಜುನಾಥ ಗೌಡ ಅಂಡ್ ಟೀಂ.

-ಮನ್ನಾಪೂರ

# ಬುರುಡೆ ಷಡ್ಯಂತ್ರಕ್ಕೆ ಬಲಿಯಾದರಾ ಚುಂಚಶ್ರೀ?

7 ☞

ಹೋರಾಟ ರೂಪಿಸಿದಂತಹ ಸಂದರ್ಭದಲ್ಲಿ ಆದಿ ಚುಂಚನಗಿರಿ ಮಠದ ಮಂಗಳೂರಿನ ಕಾವೂರು ಶಾಖಾ ಮಠದ ಸ್ವಾಮೀಜಿಯವರನ್ನು ಹೋರಾಟಕ್ಕೆ ಆಮಂತ್ರಿಸಲಾಗಿತ್ತು. ಆ ಸಂದರ್ಭದಲ್ಲಿ ಬೆಳ್ತಂಗಡಿ ತಾಲೂಕು ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘದ ಪ್ರಮುಖರು ಮಹೇಶ್ ಶೆಟ್ಟಿಯ ನೇತೃತ್ವದ ಹೋರಾಟಕ್ಕೆ ನಮ್ಮ ಸಮುದಾಯದ ಪೀಠಾಧಿಪತಿಗಳು ಬೆಂಬಲ ನೀಡಬಾರದು. ತಮ್ಮ ಸಮುದಾಯದ ಹೆಣ್ಮಗಳ ಹತ್ಯೆಯನ್ನು ಖಂಡಿಸಿ ಸಮುದಾಯ ಸಂಘಟನೆಗಳ ಮೂಲಕವೇ ಹೋರಾಟ ಮಾಡಬೇಕು ಎಂದು ಹಕ್ಕೊತ್ತಾಯ ಮಂಡಿಸಿದ್ದರು. ಅಲ್ಲದೇ ಶಾಖಾ ಮಠದ ಪೀಠಾಧಿಪತಿಗಳಿಗೂ ಮನವರಿಕೆ ಮಾಡಿದ್ದರು. ಈ ಸಂದರ್ಭದಲ್ಲಿ ಮಹೇಶ್ ಶೆಟ್ಟಿ ತಿಮರೋಡಿಯವರು ಸೌಜನ್ಯಳ ತಾಯಿ ಕುಸುಮಾವತಿ, ತಂದೆ ಚಂದಪ್ಪ ಗೌಡ ಮತ್ತು ಮಾವ ವಿಠಲಗೌಡ ಅವರನ್ನು ಬೆಂಗಳೂರಿಗೆ ಕರೆದೊಯ್ದು ವಿಜಯನಗರದ ಶಾಖಾ ಮಠದಲ್ಲಿ ನಿರ್ಮಲಾನಂದ ಸ್ವಾಮೀಜಿಯವರನ್ನು ಭೇಟಿಯಾಗಿ ಶಾಖಾ ಮಠದ ಸ್ವಾಮಿಗಳನ್ನು ಪ್ರತಿಭಟನೆಗೆ ಭಾಗವಹಿಸುವಂತೆ ಸೂಚಿಸುವಂತೆ ಕೋರಿದ್ದರು. ಅದರಂತೆ ಕಾವೂರು ಶಾಖಾ ಮಠದ ಸ್ವಾಮೀಜಿಯವರು ತೋರಿಕೆಯ ಮಟ್ಟಿಗೆ ಪ್ರತಿಭಟನೆಯಲ್ಲಿ ಪಾಲ್ಗೊಂಡು ನಿರ್ಗಮಿಸಿದ್ದರು. ಆ ಗುರುತನ್ನು ನೆನಪು ಮಾಡಿಕೊಂಡು ಮಹೇಶ್ ಶೆಟ್ಟಿ ತಿಮರೋಡಿ ಹತ್ತು ವರ್ಷಗಳ ನಂತರ ಚೆನ್ನಯ್ಯನನ್ನು ಕರೆದುಕೊಂಡು ವಿಜಯನಗರದ ಶಾಖಾ ಮಠಕ್ಕೆ ಭೇಟಿ ನೀಡಿ ಬೆಂಬಲ ಕೋರಿದ್ದರು.

**ದೆಹಲಿ ಭೇಟಿ !**

ಸ್ವಾಮೀಜಿಯವರ ಸೂಚನೆಯಂತೆ ಸಾಮೂಹಿಕ ಹತ್ಯೆ ಪ್ರಕರಣದ ತನಿಖೆಯನ್ನು ಸುಪ್ರೀಂ ಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ನಡೆಸಲು ಸುಪ್ರೀಂ ಕೋರ್ಟ್ ವಕೀಲ ಕೆ.ವಿ. ಧನಂಜಯ ಅವರನ್ನು ಸಂಪರ್ಕಿಸಿದ್ದರು ಮತ್ತು ಬುರುಡೆಯ ಸಹಿತ ದೆಹಲಿಗೆ ಹೋಗಿ ಸುಪ್ರೀಂ




ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದ್ದು, ತದನಂತರ ರಾಜ್ಯ ಸರಕಾರವನ್ನು ಸಂಪರ್ಕಿಸಿ ಬೇರೆ ಬೇರೆ ಮೂಲಗಳಿಂದ ಒತ್ತಡ ತಂದು ಎಸ್‌ಐಟಿ ರಚನೆಗೆ ಕಾರಣವಾಗಿತ್ತು. ಎಸ್‌ಐಟಿ ತನಿಖೆ ನಡೆಸುತ್ತಿದ್ದಂತೆಯೇ ಬುರುಡೆ ಷಡ್ಯಂತ್ರ ಬಯಲಾಯಿತು. ಯಾರು ದೂರುದಾರನಾಗಿದ್ದನೋ ಆತನೇ ಆರೋಪಿಯಾಗಿ ಜೈಲು ಸೇರಿದ್ದಾನೆ. ಯಾರೆಲ್ಲ ಈ ಷಡ್ಯಂತ್ರದಲ್ಲಿ ಭಾಗಿಗಳಾಗಿದ್ದಾರೋ ಅವರೆಲ್ಲರೂ ಆರೋಪಿಗಳು ಎಂದು ಎಸ್‌ಐಟಿ ಬೆಳ್ತಂಗಡಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದೆ. ಮುಂದಿನ ಕ್ರಮಕ್ಕಾಗಿ ಸೂಚನೆಯನ್ನು ಕೋರಿದೆ. ಒಟ್ಟಾರೆಯಾಗಿ ಬುರುಡೆ ಗ್ಯಾಂಗ್ ಧರ್ಮಸ್ಥಳದ ವಿರುದ್ಧ ಷಡ್ಯಂತ್ರದಲ್ಲಿ ಆದಿ ಚುಂಚನಗಿರಿ ಮಠದ ನಿರ್ಮಲಾನಂದ ಸ್ವಾಮೀಜಿಯವರನ್ನು ಸಿಕ್ಕಿಸಿ ಹಾಕಲು ಯತ್ನಿಸಿದ್ದು ಸ್ಪಷ್ಟವಾಗಿದೆ. ಅವರನ್ನು ಭೇಟಿ ಮಾಡಿ ಭಾವಚಿತ್ರ ತೆಗೆಸಿಕೊಂಡದ್ದು 2023ರಲ್ಲಿ ಆ ಸಂದರ್ಭದಲ್ಲಿ ಸೌಜನ್ಯ ಪ್ರಕರಣದ ತೀರ್ಪು ಬಂದಿರಲಿಲ್ಲ. ತೀರ್ಪು ಯಾವ ರೀತಿ ಬರಬಹುದು ಎನ್ನುವ ಖಚಿತತೆ ತಿಮರೋಡಿ ಮತ್ತವರ ತಂಡಕ್ಕೆ ಇತ್ತು. ತೀರ್ಪಿನ ನಂತರ ಮತ್ತೊಂದು ಸುತ್ತಿನ ಹೋರಾಟಕ್ಕೆ ಮುಂದಾದಾಗ ಮಾನ್ಯ ಹೈಕೋರ್ಟ್ ಆದೇಶ ಹಿನ್ನೆಡೆಯಾಯಿತು. ಎಸ್‌ಐಟಿ ತನಿಖೆಯಲ್ಲಿ ಹಿನ್ನೆಡೆಯಾಗಿ ಜೈಲು ಪಾಲಾಗುವ ಭೀತಿ ಎದುರಾದ ಹಿನ್ನೆಲೆಯಲ್ಲಿ ಮುಳುಗುವವನಿಗೆ ಹುಲ್ಲುಕಡ್ಡಿಯ ಆಸರೆ ಎಂಬಂತೆ ಆದಿ ಚುಂಚನಗಿರಿ ಮಠಾಧೀಶ ನಿರ್ಮಲಾನಂದ ಸ್ವಾಮೀಜಿಯವರೊಂದಿಗೆ ಇರುವ ಹಳೆಯ ಭಾವಚಿತ್ರಗಳನ್ನು ಬುರುಡೆ ಗ್ಯಾಂಗ್ ಬಿಡುಗಡೆಗೊಳಿಸಿದೆ.

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 14.12.2025

# ದಿ ಡೆವಿಲ್; ಪವರ್ ಪಾಲಿಟಿಕ್ಸ್‌ನಲ್ಲಿ ದರ್ಶನ್ ಡಬ್ಬಲ್ ರೋಲ್



'ದಿ ಡೆವಿಲ್' ಚಿತ್ರದಲ್ಲಿ ದರ್ಶನ್ ಡಬ್ಬಲ್ ರೋಲ್‌ನಲ್ಲಿ ನಟಿಸಿದ್ದಾರೆ, ಚಿತ್ರವು ಪೊಲಿಟಿಕಲ್ ಥ್ರಿಲ್ಲರ್ ಆಗಿದ್ದು ಮಾಸ್ ಎಂಟರ್ಟೈನ್‌ಮೆಂಟ್ ಆಗಿದೆ. ದರ್ಶನ್ ಧನುಷ್ ಮತ್ತು ಕೃಷ್ಣನ ಪಾತ್ರಗಳಲ್ಲಿ ಮಿಂಚಿದ್ದಾರೆ. ರಾಜಕೀಯದ ಕತೆಯು ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುತ್ತದೆ, ಆದರೆ ಮಧ್ಯಂತರದಲ್ಲಿ ಸಿನಿಮಾದ ಪೂರ್ತಿ ಕಥೆಯು ಬಹಿರಂಗವಾಗುತ್ತದೆ. ಹೀಗಾಗಿ ಪ್ರೇಕ್ಷಕ ಮುಂದಿನದ್ದನ್ನು ಸಲೀಸಾಗಿ ಊಹಿಸಬಹುದಾಗಿದೆ.

ಕನ್ನಡ ಸೂಪರ್‌ಸ್ಟಾರ್ ದರ್ಶನ್ ಅವರ ಬಹಳ ದಿನಗಳಿಂದ ವಿಳಂಬವಾಗಿದ್ದ 'ದಿ ಡೆವಿಲ್' ಗುರುವಾರ ರಿಲೀಸ್ ಆಗಿದೆ. ವರ್ಷದ ಅತಿದೊಡ್ಡ ಬಿಡುಗಡೆಗಳಲ್ಲಿ ಒಂದಾಗಿದೆ. ನಟ ದರ್ಶನ್ ಜೈಲಿನಲ್ಲಿದ್ದರೂ, ಮೊದಲ ದಿನವೇ ಸಿನಿಮಾ ಭರ್ಜರಿ ಪ್ರದರ್ಶನ ಕಂಡಿದೆ.

ಡೆವಿಲ್ ಸಿನಿಮಾ ಅಪ್ಪಟ ಪೊಲಿಟಿಕಲ್ ಥ್ರಿಲ್ಲರ್ ವಿತ್ ಮಾಸ್ ಎಂಟರ್ಟೈನ್‌ಮೆಂಟ್ ಆಗಿದೆ. ಕರುನಾಡ ಪ್ರಜಾ ಪಕ್ಷದ ನಾಯಕ ರಾಜಶೇಖರ್ ಮುಖ್ಯಮಂತ್ರಿ. ಭ್ರಷ್ಟಾಚಾರದ ಆರೋಪದ ಮೇಲೆ ರಾಜಶೇಖರ್ ಬಂಧನವಾಗುತ್ತೆ. ರಾಜಶೇಖರ್ ಜೈಲು ಸೇರುವ ಮೂಲಕ ಕಥೆ ಆರಂಭವಾಗುತ್ತದೆ. ಐಷಾರಾಮಿ ಜೈಲಿನಲ್ಲಿದ್ದುಕೊಂಡೇ ರಾಜಶೇಖರ್ ಚುನಾವಣೆ ಎದುರಿಸುತ್ತಾರೆ. ರಾಜಶೇಖರ್‌ಗೆ ಮಗ ಧನುಷ್ ಸಿಎಂ ಆಗಬೇಕು ಎಂಬ ಬಯಕೆ. ಹೀಗಾಗಿ ತನ್ನ ಮಗ ಧನುಷ್ ರಾಜಶೇಖರ್‌ನನ್ನು(ದರ್ಶನ್) ಸಿಎಂ ಕುರ್ಚಿಯಲ್ಲಿ ಕೂರಿಸುವಂತೆ ಆತನ ರಾಜಕೀಯ ಸಲಹೆಗಾರ ಅನಂತ್ ನಂಬಿಯಾರ್ (ಅಚ್ಯುತ್ ಕುಮಾರ್)ಗೆ ಆದೇಶಿಸುತ್ತಾನೆ. 'ಡೆವಿಲ್'ಎಂದೇ ಕರೆಯಲ್ಪಡುವ ಧನುಷ್ ಆಸೆ ಪಟ್ಟಿದ್ದು ಸಿಗದೇ ಇದ್ದಾಗ ಕಿತ್ತುಕೊಳ್ಳುವ ವ್ಯಕ್ತಿತ್ವದವನು. ಈತನ ಭೇಟಿ ಬಳಿಕ ಗೊಂದಲದಲ್ಲೇ ದೇಶಕ್ಕೆ ಮರಳುವ ನಂಬಿಯಾರ್ ಕೃಷ್ಣ ಮೆಸ್ ನಡೆಸುವ ಬಾಣಸಿಗ ಕೃಷ್ಣನನ್ನು (ದರ್ಶನ್) ನೋಡುತ್ತಾನೆ.

ಧನುಷ್ ಹಾಗೂ ಕೃಷ್ಣ ಅವಳಿ ಜವಳಿ ಅಲ್ಲ. ಆದರೆ ನೋಡೋಕೆ ಒಂದೇ ರೀತಿಯಿದ್ದು ಗುಣ ತದ್ವಿರುದ್ಧವಾಗಿರುತ್ತೆ. ಧನುಷ್ ಜಾಗಕ್ಕೆ ಬರುವ ಕೃಷ್ಣ ಚುನಾವಣೆಗೆ ನಿಲ್ಲುತ್ತಾನೆ. ಕೃಷ್ಣನ ಪ್ರಾಮಾಣಿಕತೆ ನಂಬಿಯಾರ್ ಗೆ ಮುಳುವಾಗುತ್ತದೆ. ಧನುಷ್ ಹೆಸರಲ್ಲಿ ಕೃಷ್ಣ ಖ್ಯಾತಿ ಗಳಿಸುತ್ತಿದ್ದಂತೆಯೇ ಅಸಲಿ ಧನುಷ್ ಎಂಟ್ರಿ ಕೊಡುತ್ತಾನೆ. ಮುಂದೆ ಏನಾಗುತ್ತೆ ಎಂಬುದನ್ನು ತಿಳಿದುಕೊಳ್ಳಲು ನೀವು 'ದಿ ಡೆವಿಲ್' ಸಿನಿಮಾ ನೋಡಬೇಕು.



ನಟನಾಗುವ ಕನಸು ಹೊತ್ತ ಕೃಷ್ಣನಾಗಿ ರಾಜ್‌ಕುಮಾರ್, ವಿಷ್ಣುವರ್ಧನ್, ಶಂಕರ್ ನಾಗ್ ಹಾಗೂ ಅಂಬರೀಷ್ ಅವರನ್ನು ದರ್ಶನ್ ಅನುಕರಣೆ ಮಾಡುವುದು ಬಹಳ ಸೊಗಸಗಿದೆ. ಎಲ್ಲರನ್ನೂ ಮನಸ್ಸೋ ಇಚ್ಛೆ ಶೂಟ್ ಮಾಡುವ ಧನುಷ್ ಕೃಷ್ಣ ನನ್ನೇಕೆ ಸುಡುವುದೇ ಇಲ್ಲ ಎಂಬುದು ಮಿಲಿಯನ್ ಡಾಲರ್ ಪ್ರಶ್ನೆಯಾಗಿಯೇ ಉಳಿಯುತ್ತದೆ. ರಾಜಕೀಯ ವಿಷಯವನ್ನಿಟ್ಟುಕೊಂಡೇ ಸಿನಿಮಾ ಮಾಡಲಾಗಿದೆ. ಕೃಷ್ಣನ ಮೆಸ್ಸು.. ಫೇಮಸ್ ಡಿಶ್ಯು.. ಖಾರ ಉಪ್ಸಾರು ಮುದ್ದೆ ಬಸ್ಸಾರು ಇದು ಮಧ್ಯಮ ವರ್ಗದ ಕುಟುಂಬದಿಂದ ಕೃಷ್ಣನ ಡೈಲಾಗ್. ಆಸೆಪಟ್ಟಿದ್ದನ್ನ ತಗೋಬೇಕು, ಸಿಗಲಿಲ್ಲ ಅಂದ್ರೆ, ಕಿತ್ಕೋಬೇಕು ಎಂಬುದು ಧನುಷ್ ಡೈಲಾಗ್. ಎರಡು ರೋಲ್ ಗಳು ದರ್ಶನ್ ಅಭಿಮಾನಿಗಳಿಗೆ ರಸದೌತಣ ಉಣಬಡಿಸಿವೆ.

ಎರಡು ಪಾತ್ರಗಳಿಗೂ ದರ್ಶನ್ ಜೀವ ತುಂಬಿದ್ದಾರೆ. ಕೃಷ್ಣನ ಪಾತ್ರದಲ್ಲಿ ಕನಸು ಕಾಣುವ ಯುವಕನಾಗಿ ಹಾಗೂ ಡೆವಿಲ್ ಪಾತ್ರದಲ್ಲಿ ಭೀಭತ್ಸ ಅವತಾರದಲ್ಲಿ ದರ್ಶನ್ ರಂಜಿಸಿದ್ದಾರೆ. ನಿರ್ದೇಶಕ ಪ್ರಕಾಶ್ ತಮ್ಮ ಸಿನಿಮಾದಲ್ಲಿ ಎರಡು ಆಯಾಮ, ಎರಡು ಶೇಡ್ ತೆರೆದಿಟ್ಟಿದ್ದಾರೆ. ಅದಕ್ಕೆ ಹೊಂದಿಕೆಯಾಗುವ ಪರಿಸರವಿದೆ, ಒಂದು ಔಟ್ ಆ್ಯಂಡ್ ಔಟ್ ಮಾಸ್ ಕಮರ್ಷಿಯಲ್ ಸಿನಿಮಾದಲ್ಲಿ ಏನಿರಬೇಕೋ ಅವೆಲ್ಲವೂ ಈ ಸಿನಿಮಾದಲ್ಲಿ ಯಥೇಚ್ಛವಾಗಿದೆ.

ಮೇಕಿಂಗ್ ಕಡೆ ನಿರ್ದೇಶಕರು ಹೆಚ್ಚು ಗಮನಹರಿಸಿದ್ದಾರೆ. ಹಾಗಾಗಿ, ಇಲ್ಲಿ ಅನವಶ್ಯಕವಾಗಿ ಹಾಡು, ಫೈಟ್, ಸುಖಾಸುಮ್ಮನೆ ಕಾಮಿಡಿಗೆ ಜಾಗವಿಲ್ಲ. ಆದರೆ, ಅಭಿಮಾನಿಗಳನ್ನು ಹೆಚ್ಚು ಗಮನದಲ್ಲಿಟ್ಟು ಸಿನಿಮಾ ಮಾಡಿರೋದು ಎದ್ದು ಕಾಣುತ್ತದೆ. ಕೆಲವು ಸಂಭಾಷಣೆಗಳು ಮಾಸ್ ಅಭಿಮಾನಿಗಳಿಗಾಗಿ ಕೆಲವು ಡೈಲಾಗ್ಸ್ ಕ್ಲಾಸ್‌ಗಾಗಿಯೇ ರಚಿಸಲಾಗಿದೆ. ನೆಗೆಟಿವ್ ಶೇಡ್ ನಲ್ಲಿ ದರ್ಶನ್ ಸ್ಟೈಲಿಶ್ ಆಗಿ ಕಾಣುವ ಜೊತೆಗೆ ಕೃಷ್ಣನ ಪಾತ್ರದಲ್ಲಿ ತಮ್ಮ ಮ್ಯಾನರಿಸಂ ಮೂಲಕ ಇಷ್ಟವಾಗುತ್ತಾರೆ. ಉಳಿದಂತೆ ಇಡೀ ಸಿನಿಮಾದುದ್ದಕ್ಕೂ ಸಾಗಿ ಬರುವ ಪಾತ್ರ ಅಚ್ಯುತ್ ಕುಮಾರ್. ಇಡೀ ಕಥೆಯ ಚಾಣಾಕ್ಷನ ಪಾತ್ರ. ತುಂಬಾ ಗಂಭೀರವಾದ ಪಾತ್ರವನ್ನು ಅಷ್ಟೇ ಲೀಲಾಜಾಲವಾಗಿ ಮಾಡಿದ್ದಾರೆ ನಟಿಸಿದ್ದಾರೆ. ನಾಯಕಿ ರಚನಾ ರೈ ಸಿಕ್ಕ ಪಾತ್ರವನ್ನ ಉತ್ತಮವಾಗಿ ನಿಭಾಯಿಸಿದ್ದಾರೆ.

ಕಥೆಯಲ್ಲಿ ಕೆಲವು ಕಡೆ ಲಾಜಿಕ್ ಮಿಸ್ ಆಗಿದೆ. ದ್ವಿಪಾತ್ರಗಳನ್ನು ನಿಭಾಯಿಸಿದ ಸಿನಿಮಾಗಳಲ್ಲಿ ಒಂದು ಪಾತ್ರವನ್ನು ಗೌಪ್ಯವಾಗಿ ಇಡುವುದು ಮುಖ್ಯವಾಗುತ್ತದೆ, ಆದರೆ ಸಿನಿಮಾ ಮಧ್ಯಂತರ ತಲುಪುವ ಹೊತ್ತಿಗೆ ಎರಡು ಪಾತ್ರಗಳು ಬಹಿರಂಗವಾಗಿದೆ. ಹೀಗಾಗಿ ಮುಂದಿನ ಕಥೆಯನ್ನು ಪ್ರೇಕ್ಷಕ ಸರಾಗವಾಗಿ ಊಹಿಸಬಹುದಾಗಿದೆ.

ಸುಧಾಕರ್ ಎಸ್. ರಾಜ್ ಅವರ ಕ್ಯಾಮರಾ ಕೈಚಳಕ ಅದ್ಭುತವಾಗಿದೆ. ಬಿ. ಅಜನೀಶ್ ಲೋಕನಾಥ್ ಸಂಯೋಜಿಸಿರುವ ಹಾಡುಗಳು ಅಷ್ಟಕಷ್ಟೆ. ಬ್ಯಾಕ್ ಗ್ರೌಂಡ್ ಮ್ಯೂಸಿಕ್ ಅಷ್ಟಾಗಿ ಇಷ್ಟವಾಗುವುದಿಲ್ಲ. ಇದ್ರೆ ನೆಮ್ದಿಯಾಗ್ ಇರ್ಬೇಕು ಹಾಡು ಚೆನ್ನಾಗಿದೆ. ಕೆಲವೆಡೆ ಅನಗತ್ಯ ಹಾಡು, ಫೈಟ್‌ನಿಂದ ಸಿನಿಮಾದ ಒಟ್ಟು ಅವಧಿ ಹೆಚ್ಚಿಸಿದೆ.

ಉಳಿದಂತೆ ಮಹೇಶ್ ಮಂಜ್ರೇಕರ್, ಶೋಭರಾಜ್ ತಮಗೆ ಸಿಕ್ಕ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. 'ಬಿಗ್ ಬಾಸ್' ಖ್ಯಾತಿಯ ಗಿಲ್ಲಿ ನಟ 'ಸಿಬಿಐ ಶಂಕರ್' ಆಗಿ 3 ಕಾಮಿಡಿ ಸೀನ್‌ಗಳಿಗಷ್ಟೇ ಸೀಮಿತ. ನಟಿ ಶರ್ಮಿಳಾ ಮಾಂಡ್ರೆ, ಅವರದ್ದು ಅತಿಥಿ ಪಾತ್ರ. ಇನ್ನೂ ವಿನೋದ್ ಗೊಬ್ರಗಾಲ, ರಾಘವೇಂದ್ರ, ಜಗಪ್ಪ ಒಂದು ಹಾಡಲ್ಲಿ ಮಾತ್ರ ಬಂದು ಹೋಗುತ್ತಾರೆ. ಹೆಚ್ಚಿನ ನಿರೀಕ್ಷೆಗಳಿಲ್ಲದೇ ಒಂದು ಮಾಸ್ ಸಿನಿಮಾವನ್ನು ಕಣ್ತುಂಬಿಕೊಳ್ಳಲು ಬಯಸುವವರಿಗೆ ಡೆವಿಲ್ ಇಷ್ಟವಾಗಬಹುದು.

☯



# ನಟಿ ನಿವೇತಾಳ ಮದುವೆಯೂ ಮುರಿದು ಬಿತ್ತಾ?

ಕ್ರಿಕೆಟರ್ ಸ್ಮೃತಿ ಮಂದಾನ ಮತ್ತು ಬಾಲಿವುಡ್ ಗಾಯಕ ಪಲಶ್ ಮುಚ್ಚಲ್ ಮದುವೆ ಮುರಿದು ಬಿದ್ದ ವಿಷಯ ಇನ್ನೂ ಹಸಿರಾಗಿರುವಾಗಲೇ, ಮತ್ತೊಬ್ಬ ತಾರೆ ಮದುವೆ ಮುರಿದುಕೊಂಡಿರುವ ಕುರಿತು ಕಾಲಿವುಡ್ ಮತ್ತು ಟಾಲಿವುಡ್‌ಗಳಲ್ಲಿ ಸುದ್ದಿಯಾಗುತ್ತಿದೆ.

ಹೌದು, ಟಿಕ್ ಟಿಕ್ ಟಿಕ್', 'ಅಲಾ ವೈಕುಂಠಪುರಮ್‌ಲೋ', ರೆಡ್', ಪಾಗಲ್' ಸೇರಿ 15ಕ್ಕೂ ಹೆಚ್ಚು ತಮಿಳು, ತೆಲುಗು ಸಿನಿಮಾಗಳಲ್ಲಿ ನಟಿಸಿರುವ ನಿವೇತಾ, ಆಗಸ್ಟ್‌ನಲ್ಲಿ ಪ್ರಿಯಕರನ ಜತೆಗಿರುವ ಫೋಟೋಗಳನ್ನು ಹಂಚಿಕೊಂಡು, ನಿಶ್ಚಿತಾರ್ಥದ ಬಗ್ಗೆ ಸಂಭ್ರಮ ವ್ಯಕ್ತಪಡಿಸಿದ್ದರು. ದುಬೈ ಮೂಲದ ಉದ್ಯಮಿ ರಾಖಿತ್ ಜತೆ ಮದುವೆಯಾಗಲಿರುವ ಬಗ್ಗೆ ನಿವೇತಾ ಹೇಳಿಕೊಂಡಿದ್ದರು. ನಿವೇತಾ ಬಾಲ್ಯದಲ್ಲಿಯೇ ಕುಟುಂಬದ ಜತೆ ದುಬೈನಲ್ಲಿ ನೆಲೆಸಿದ್ದ ಕಾರಣ, ಮದುವೆಯ ಬಳಿಕ ಅವರು ರಾಖಿತ್ ಜತೆ ದುಬೈನಲ್ಲೇ ಸೆಟಲ್ ಆಗಲಿದ್ದಾರೆ ಎನ್ನಲಾಗಿತ್ತು.



ಅಕ್ಟೋಬರ್‌ನಲ್ಲಿ ನಿಶ್ಚಿತಾರ್ಥ ಮತ್ತು ಜನವರಿಯಲ್ಲಿ ಮದುವೆ ಅಂತೆಲ್ಲ ಸುದ್ದಿ ಹಬ್ಬಿತ್ತು. ಆದರೆ, ಇದೀಗ ರಾಖಿತ್ ಮತ್ತು ನಿವೇತಾ ಜಾಲತಾಣದಲ್ಲಿ ಹಂಚಿಕೊಂಡಿದ್ದ ಜತೆಗಿರುವ ಫೋಟೋಗಳನ್ನು ಡಿಲೀಟ್ ಮಾಡಿದ್ದು, ಒಬ್ಬರನ್ನೊಬ್ಬರು ಅನ್‌ಫಾಲೋ ಮಾಡಿದ್ದಾರೆ. ಈ ಬ್ರೇಕಪ್ ಬಗ್ಗೆ ನಿವೇತಾ ಮತ್ತು ರಾಖಿತ್ ಇಬ್ಬರೂ ಮೌನ ವಹಿಸಿದ್ದು, ಕಾರಣ ಏನಿರಬಹುದು ಎಂದು ಆನ್‌ಲೈನ್‌ನಲ್ಲಿ ಚರ್ಚೆಗಳಾಗುತ್ತಿವೆ.

☯

Vol. 41 No. 28 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 policenewsreporter@gmail.com
http//policenews.news https://www.facebook.com/profile.php?id=61579674874846 https://www.instagram.com/police_news?igsh=MWJ6bHJwZDRmZDc1aQ==